ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 45

ರೂ. 5/-

ನವೆಂಬರ್ 08, 2009

ಕನ್ನಡ ವಾರಪತ್ರಿಕೆ




'ಕುಟುಂಬಕ್ಕೆ 35 ಕೆ.ಜಿ. ಅಕ್ಕಿ ಕೊಡಿ'

ಎಡಪಕ್ಷಗಳ ಸಮರ ಘೋಷಣೆ



ಲವ್ ಜಹಾದೋ ಮೋಹನನ ಕ್ರೌರ್ಯವೋ ? ಏನನ್ನುತ್ತಾರೆ ಭಜರಂಗಿಗಳು?



ಪ್ರವಾಹ ಸಂತ್ರಸ್ತರೆದುರು ಬಿಜೆಪಿಗರ ಕಿತ್ತಾಟಗಳು

ನಕ್ಸಲ್ ದಾಳಿ : ಕೇಂದ್ರ ಮಂತ್ರಿ ಶಾಮೀಲು?

ಪ್ರಸ್ತುತ ರಾಜಕೀಯ ಸಾಮಾಜಿಕ ಸವಾಲುಗಳು ಹಾಗೂ ಜನ ಚಳುವಳಿಯ ಮುಂದಿನ ತುರ್ತು ಕರ್ತವ್ಯಗಳು

ಸಿಪಿಐ(ಎಂ) ಕೇಂದ್ರ ಸಮಿತಿ ತೀರ್ಮಾನಗಳು

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷದ ಕೇಂದ್ರ ಸಮಿತಿ ಸಭೆಯು 2009 ಅಕ್ಟೋಬರ್ 23-25 ರ ತನಕ ನವದೆಹಲಿಯಲ್ಲಿ ನಡೆಯಿತು. ಅದು ಈ ಕೆಳಕಂಡ ತೀರ್ಮಾನಗಳನ್ನು ಮಾಡಿದೆ.

ಜುಲೈ 2009 ರಲ್ಲಿ ನಡೆದ ಕೇಂದ್ರ ಸಮಿತಿ ಸಭೆಯ ನಂತರ ಜರುಗಿದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪರಿಸ್ಥಿತಿ ಮತ್ತು ನಂತರದ ಬೆಳವಣಿಗೆಗಳ ಬಗ್ಗೆ ಸಭೆಯು ಚರ್ಚಿಸಿತು.

ಅಪಾಯಕಾರಿ ಮಟ್ಟದ ಬೆಲೆ ಏರಿಕೆ:

ಆಹಾರ ಪದಾರ್ಥಗಳು ಮತ್ತು ಎಲ್ಲಾ ಅಗತ್ಯವಸ್ತುಗಳ ಎಡೆಬಿಡದ ಬೆಲೆ ಏರಿಕೆಯು ಮುಂದುವರಿಯುತ್ತಿರುವ ಬಗ್ಗೆ ಕೇಂದ್ರ ಸಮಿತಿಯು ತೀವ್ರ ಆತಂಕ ವ್ಯಕ್ತಪಡಿಸಿತು. ಹಿಂದೆಂದೂ ಕಂಡರಿಯದ ರೀತಿಯಲ್ಲಿ ಏರುತ್ತಿರುವ ಆಹಾರ ಧಾನ್ಯಗಳು, ಬೇಳೆ, ಸಕ್ಕರೆ, ಖಾದ್ಯತೈಲ, ತರಕಾರಿಗಳ ಬೆಲೆಗಳು ಜನರಿಗೆ ಭಾರೀ ಪ್ರಮಾಣದ ಸಂಕಷ್ಟವನ್ನುಂಟು ಮಾಡಿದೆ. ಗ್ರಾಹಕ ದರ ಸೂಚ್ಯಂಕ (ಕಾರ್ಖಾನೆ ನೌಕರರು) ಆಧಾರಿತ ಹಣದುಬ್ಬರವು ಆಗಸ್ಟ್‌ನಲ್ಲಿ ಪ್ರತಿಶತ 11.72 ರಷ್ಟಿದ್ದರೆ, ಗ್ರಾಹಕ ದರ ಸೂಚ್ಯಂಕ (ಕೃಷಿ ಕಾರ್ಮಿಕರು) ಆಧಾರಿತ ಹಣದುಬ್ಬರವು ಸೆಪ್ಟೆಂಬರ್ 2009 ರಲ್ಲಿ ಪ್ರತಿಶತ 13.19 ರಷ್ಟಿತ್ತು. ಪ್ರಸ್ತುತದಲ್ಲಿ ಭಾರತವು ಜಗತ್ತಿನಲ್ಲಿ ಅತಿ ಹೆಚ್ಚು ಗ್ರಾಹಕ ಬೆಲೆಯ ಹಣದುಬ್ಬರ ಪ್ರಮಾಣವನ್ನು ಹೊಂದಿರುವ ದೇಶವಾಗಿದೆ.

ಈ ಅಪಾಯಕಾರಿ ಬೆಲೆ ಏರಿಕೆ ಕುರಿತು ಕಾಂಗ್ರೆಸ್ ನೇತೃತ್ವದ ಸರ್ಕಾರದ ಧೋರಣೆಯು ಆಘಾತಕಾರಿಯಾಗಿದೆ. ಅದು ಕೊಡುತ್ತಿರುವ ಭರವಸೆಗಳೆಂದರೆ ಕೆಲ ಸಮಯದ ನಂತರ ಬೆಲೆಗಳು ಇಳಿಕೆಯಾಗುತ್ತವೆ ಎನ್ನುವುದಷ್ಟೆ. ಅಗತ್ಯವಸ್ತುಗಳಲ್ಲಿ ಜೂಜುಕೋರ ಮುಂಗಡ ವ್ಯಾಪಾರವನ್ನು ನಿಷೇದಿಸಬೇಕೆಂದು ಮತ್ತು ಮಾರುಕಟ್ಟೆಯಲ್ಲಿ ಹೆಚ್ಚು ಲಾಭ ಮಾಡುವ ಉದ್ದೇಶದ ಸಟ್ಟಾ ಸಂಗ್ರಹಕಾರರ ವಿರುದ್ಧ ಕ್ರಮ ಜರುಗಿಸಬೇಕೆಂಬ ಎಡಪಕ್ಷಗಳ ಬೇಡಿಕೆಯನ್ನು ಕಡೆಗಣಿಸಲಾಗಿದೆ. ದರ ಏರಿಕೆ ಕುರಿತಂತೆ ಸರ್ಕಾರದ ನಿಷ್ಕ್ರಿಯತೆಯ ಫಲವಾಗಿ ಸಾಮಾನ್ಯ ಜನರ ಬವಣೆಗಳು ಹೆಚ್ಚಾಗಿವೆ.

ಕೃಷಿ ರಂಗದ ಸ್ಥಿತಿ

ದೇಶಾದ್ಯಂತ ಸುಮಾರು 300 ಜಿಲ್ಲೆಗಳಲ್ಲಿ ಆವರಿಸಿರುವ ಕ್ಷಾಮದಿಂದಾಗಿ ರೈತರು ಮತ್ತು ಗ್ರಾಮೀಣ ಬಡಜನರು ಗಂಭೀರ ಪರಿಸ್ಥಿತಿಗೆ ಸಿಲುಕಿದ್ದಾರೆ. ಭತ್ತದ ಬೇಸಾಯ ಮತ್ತು ಇತರೆ ಹಲವು ಬೆಳೆಗಳ ಉತ್ಪಾದನೆ ಕುಂಠಿತವಾಗಿದೆ. ಹಿಂಗಾರು ಬೆಳೆ ಬರುವ ಕಾಲದಲ್ಲಿ ಸಂಭವಿಸಿದ ಬೃಹತ್ ಪ್ರಮಾಣದ ಅತಿವೃಷ್ಠಿ ಮತ್ತು ಬೆಳೆದು ನಿಂತಿರುವ ಬೆಳೆಗಳ ಹಾನಿಯಂತಹ ಪರಿಸ್ಥಿತಿಯನ್ನು ಹಲವು ರಾಜ್ಯಗಳು ಎದುರಿಸುತ್ತಿವೆ. ಕರ್ನಾಟಕ, ಆಂಧ್ರ ಪ್ರದೇಶ, ಬಿಹಾರ, ಒರಿಸ್ಸಾ, ಮಹಾರಾಷ್ಟ್ರ, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯದ ಹಲವು ಭಾಗಗಳಲ್ಲಿ ಅತಿಯಾದ ಮಳೆ ಮತ್ತು ಪ್ರವಾಹದಿಂದ ಬೆಳೆದು ನಿಂತಿರುವ ಬೆಳೆಗಳು ನಾಶವಾಗಿರುವುದಕ್ಕೆ ಸಾಕ್ಷಿಯಾಗಿದೆ. ಬರ ಪರಿಹಾರವನ್ನು ವಿತರಿಸಬೇಕಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದೋ ಆಲಸ್ಯತನದಿಂದಿವೆ ಅಥವಾ ಮೃತಗೊಂಡಂತಿವೆ. ಕೇಂದ್ರ ಸಮಿತಿಯು ಬೆಲೆ ಏರಿಕೆಯ ವಿರುದ್ಧದ ಹೋರಾಟದ ಜೊತೆಗೆ ಅತಿವೃಷ್ಠಿ ಪರಿಹಾರ ಮತ್ತು ಆಹಾರ ಭದ್ರತೆಯ ಬಗ್ಗೆಯೂ ಹೋರಾಟ ಮುಂದುವರಿಸಲು ತೀರ್ಮಾನಿಸಿದೆ. ಈ ಸಂಬಂಧವಾಗಿ ಎಡಪಕ್ಷಗಳು ಎಲ್ಲಾ ರಾಜ್ಯಗಳಲ್ಲಿ ರಾಜ್ಯ ಮಟ್ಟದ ಸಮಾವೇಶ ಮತ್ತು ರ‍್ಯಾಲಿಗಳನ್ನು ನವೆಂಬರ್ ತಿಂಗಳಲ್ಲಿ ಸಂಘಟಿಸಲು ತೀರ್ಮಾನಿಸಿವೆ.

ಯು.ಪಿ.ಎ. ಸರ್ಕಾರದ ಆರ್ಥಿಕ ನೀತಿ:

ಎರಡನೇ ಅವಧಿಗೆ ಆಡಳಿತ ನಡೆಸುತ್ತಿರುವ ಯು.ಪಿ.ಎ ಸರ್ಕಾರವು ಅದೇ ನವ-ಉದಾರವಾದಿ ನೀತಿಗಳನ್ನು ಮುಂದುವರಿಸುತ್ತಿರುವುದನ್ನು ಕೇಂದ್ರ ಸಮಿತಿಯು ಗಮನಿಸಿದೆ. ಎನ್.ಟಿ.ಪಿ.ಸಿ. ಯಂತಹ ನವರತ್ನ ಕಂಪನಿಗಳೂ ಸೇರಿದಂತೆ ಲಾಭದಲ್ಲಿರುವ ಸಾರ್ವಜನಿಕ ರಂಗದ ಕಂಪನಿಗಳಿಂದ ಬಂಡವಾಳ ಹಿಂತೆಗೆತ ಮಾಡುವ ಸಾಹಸವನ್ನು ಕೇಂದ್ರ ಸರ್ಕಾರವು ಮಾಡುತ್ತಿದೆ. ಕೇಂದ್ರ ಸರ್ಕಾರವು ಹಲವು ಸಾರ್ವಜನಿಕ ರಂಗದ ಬ್ಯಾಂಕ್‌ಗಳನ್ನು ಪುನಶ್ಚೇತನಗೊಳಿಸಲು ವಿಶ್ವಬ್ಯಾಂಕ್‌ನಿಂದ 2 ಬಿಲಿಯನ್ ಡಾಲರ್ ಸಾಲವನ್ನು ತೆಗೆದುಕೊಂಡಿದೆ. ವಿಶ್ವ ಬ್ಯಾಂಕಿನ ಷರತ್ತುಗಳನ್ನು ಗಮನಿಸಿದಲ್ಲಿ, ಸಾರ್ವಜನಿಕ ರಂಗದ ಬ್ಯಾಂಕ್‌ಗಳಿಂದ ಷೇರು ಬಂಡವಾಳವನ್ನು ಹಿಂದೆಗೆತ ಮಾಡುವ ಪೂರ್ವತಯಾರಿಯೆಂಬಂತೆ ಈ ಹೆಜ್ಜೆ ಇಡಲಾಗಿದೆ.

ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ನೇರ ತೆರಿಗೆಗಳ ಸಂಹಿತೆ ಮಸೂದೆಯು ಹಲವು ಜನ-ವಿರೋಧಿ ಅಂಶಗಳನ್ನು ಹೊಂದಿದೆ. ಇದರಿಂದಾಗಿ ಅಪಾರ ಪ್ರಮಾಣದ ಆದಾಯ ನಷ್ಟವುಂಟಾಗುತ್ತದೆ. ಕಾರ್ಪೋರೇಟ್ ವರ್ಗದವರಿಗೆ ಹಾಕುವ ತೆರಿಗೆ ದರವನ್ನು ಶೇಕಡಾ 30 ರಿಂದ 25 ಕ್ಕೆ ಇಳಿಸುವ ಪ್ರಸ್ತಾಪ ಮಾಡಿರುವುದು, ಇದೇ ರೀತಿ ಸಂಪತ್ತು ಮತ್ತು ಷೇರು ವಹಿವಾಟು ತೆರಿಗೆ ಇಳಿಸುವ ಹಾಗೂ ಮೇಲ್ವರ್ಗದ ತೆರಿಗೆದಾರರಿಗೆ ತೆರಿಗೆ ಪರಿಹಾರ ಮಾಡುವಂತಹ ನೀತಿಗಳನ್ನು ಜಾರಿ ಮಾಡಬಯಸಿದೆ. ತೆರಿಗೆ ಕಡಿತ ಮಾಡುವ ಮೂಲಕ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿ ಮಾಡುವಂತಹ ನೀತಿಗಳನ್ನು ಯು.ಪಿ.ಎ ಸರ್ಕಾರ ಅನುಸರಿಸುತ್ತಿದೆ. ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹಣದ ಸಂಪನ್ಮೂಲ ಕ್ರೋಢೀಕರಿಸಲು ಅದು ತೋರುವ ಬದ್ಧತೆಯ ಕೊರತೆಯು ಅದು ಯಾರ ಪರವಾಗಿದೆ ಎನ್ನುವುದನ್ನು ತೋರಿಸುತ್ತದೆ.

ಯು.ಪಿ.ಎ ಸರ್ಕಾರ ಹಲವು ರಂಗಗಳಲ್ಲಿ ನವ-ಉದಾರವಾದಿ ಸುಧಾರಣೆಗಳನ್ನು ಜಾರಿಗೆ ತರಲು ಬಯಸಿದೆ, ವಿಮಾ ರಂಗದಲ್ಲಿ ವಿದೇಶಿ ನೇರ ಬಂಡವಾಳ ಮಿತಿ ಹೆಚ್ಚಿಸುವ ಪ್ರಸ್ತಾಪಿತ ಮಸೂದೆ ಮತ್ತು ಉನ್ನತ ಶಿಕ್ಷಣದಲ್ಲೂ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಡುವುದು, ಇವು ಅವುಗಳಲ್ಲಿ ಕೆಲವು.

ಲಾಭದಲ್ಲಿರುವ ಸಾರ್ವಜನಿಕ ರಂಗದ ಘಟಕಗಳಿಂದ ಷೇರು ಬಂಡವಾಳದ ಹಿಂತೆಗೆತವನ್ನು ಕೇಂದ್ರ ಸಮಿತಿಯು ಬಲವಾಗಿ ವಿರೋಧಿಸಿದೆ. ಈ ಸಂಬಂಧವಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳು


ಕೇರಳದಲ್ಲಿ ಆಸಿಯಾನ್ ಒಪ್ಪಂದ ವಿರೋಧಿಸಿ ಸುರಿವ ಮಳೆಯಲ್ಲೂ ನಡೆದ ಐತಿಹಾಸಿಕ ಮಾನವ ಸರಪಳಿ

ಕರೆಕೊಟ್ಟಿರುವ ಅಕ್ಟೋಬರ್ 28ರ ಪ್ರತಿಭಟನೆಗೆ ಮತ್ತು ಅದರ ಇತರ ಬೇಡಿಕೆಗಳಿಗೆ ಕೇಂದ್ರ ಸಮಿತಿಯು ಸಂಪೂರ್ಣ ಬೆಂಬಲವನ್ನು ಘೋಷಿಸಿದೆ.

ದೋಹಾ ಸುತ್ತು ಮತ್ತು ಹವಾಮಾನ ಬದಲಾವಣೆ

ಒತ್ತಡಕ್ಕೆ ಮಣಿಯುತ್ತಿರುವ ಸರ್ಕಾರ

ಯು.ಪಿ.ಎ. ಸರ್ಕಾರ ತನ್ನ ಈ ಹಿಂದಿನ ನಿಲುಮೆಯಿಂದ ಹಿಂದೆ ಸರಿಯುತ್ತಿರುವ ಕುರಿತು ಮತ್ತು ಅಮೇರಿಕಾ ಮತ್ತು ಇತರೆ ಪಾಶ್ಚಿಮಾತ್ಯ ರಾಷ್ಟ್ರಗಳ ಒತ್ತಡಕ್ಕೆ ಮಣಿಯುತ್ತಿರುವ ಕುರಿತು ಕೇಂದ್ರ ಸಮಿತಿಯು ತನ್ನ ತೀವ್ರ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. ದೋಹಾ ಸುತ್ತಿನ ಡಬ್ಲ್ಯೂಟಿಒ ಮಾತುಕತೆ ಮತ್ತು ಹವಾಮಾನ ಬದಲಾವಣೆ ಮತುಕತೆಯಲ್ಲಿ ಬದಲಾಗುತ್ತಿರುವ ಅದರ ನಿಲುಮೆಯೇ ಇದಕ್ಕೆ ಸಾಕ್ಷಿಯಾಗಿದೆ. ಅಮೆರಿಕದೊಂದಿಗೆ ಶಸ್ತ್ರಾಸ್ತ್ರ ಖರೀದಿ ಮಾಡಲು ಮಾಡಿಕೊಂಡಿರುವ ಬಳಕೆ ಕಾಲದ ಮಾನಿಟರಿಂಗ್ ಒಪ್ಪಂದವು ಅಮೇರಿಕಾದ ಒತ್ತಡಕ್ಕೆ ಶರಣಾಗಿರುವುದರ ಮತ್ತೊಂದು ನಿದರ್ಶನವಾಗಿದೆ.

ಈ ರೀತಿಯ ಅಮೆರಿಕದ ಒತ್ತಡಗಳಿಗೆ ಶರಣಾಗಿರುವುದರ ವಿರುದ್ಧ ಮತ್ತು ಅದು ಅನುಸರಿಸುತ್ತಿರುವ ನೀತಿಗಳು ದೇಶದ ಹಿತಾಸಕ್ತಿಕ್ಕೆ ವಿರುದ್ಧವಾಗಿವೆ ಎಂಬುದರ ಕುರಿತು ಜನಾಭಿಪ್ರಾಯ ಮೂಡಿಸಲು ಕೇಂದ್ರ ಸಮಿತಿಯು ನಿರ್ಧರಿಸಿದೆ. ಕೇಂದ್ರ ಸಮಿತಿಯು ಹವಾಮಾನ ಬದಲಾವಣೆಯ ಬಗ್ಗೆ ಮತ್ತು ಭಾರತ ತಳೆಯಬೇಕಾದ ನಿಲುಮೆಯ ಕುರಿತು ನಿರ್ಣಯವನ್ನು ಅಂಗೀಕರಿಸಿತು.

ಪರಮಾಣು ನಷ್ಟ ಪರಿಹಾರ ಕಾನೂನು

ಉದ್ದೇಶಿತ ಪರಮಾಣು ನಷ್ಟಪರಿಹಾರ ಕುರಿತ ಶಾಸನವನ್ನು ಭಾರತಕ್ಕೆ ಪರಮಾಣು ರಿಯಾಕ್ಟರ್‌ಗಳನ್ನು ಸರಬರಾಜು ಮಾಡುವ ಅಮೆರಿಕದ ಕಂಪನಿಗಳ ಹಿತಾಸಕ್ತಿ ಕಾಯಲು ಜಾರಿಗೆ ತರಲಾಗುತ್ತಿದೆಯೆಂಬುದನ್ನು ಎಂದು ಕೇಂದ್ರ ಸಮಿತಿ ಗಮನಿಸಿತು. 25 ವರ್ಷಗಳ ಹಿಂದೆ ಭೋಪಾಲ್‌ನಲ್ಲಿ ನಡೆದ ಯೂನಿಯನ್ ಕಾರ್ಬೈಡ್ ಘಟಕದ ದುರಂತವು ತಿಳಿಸಿ ಕೊಟ್ಟಿರುವ ಕಹಿ ಅನುಭವವೆಂದರೆ, ಪರಮಾಣು ದುರಂತ ಸಂಭವಿಸಿದ ಸಂದರ್ಭದಲ್ಲಿ ಯಾವುದೇ ಪರಮಾಣು ನಷ್ಟ ಪರಿಹಾರ ಕುರಿತ ಕಾನೂನು ಪರಮಾಣು ರಿಯಾಕ್ಟರ್ ಸರಬರಾಜು ಮಾಡುವ ಕಂಪನಿಗಳೇ ಸಮರ್ಪಕವಾದ ಪರಿಹಾರ ನೀಡುವ ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ನಿರ್ದೇಶಿಸುವಂತಿರಬೇಕು ಮತ್ತು ಆ ಹೊಣೆಗಾರಿಕೆಯನ್ನು ಆಪರೇಟರ್‌ಗಳು ಮತ್ತು ಭಾರತ ಸರ್ಕಾರದ ಮೇಲೆ ಹೇರುವಂತಾಗಬಾರದು ಎಂದು ಹೇಳಿದೆ.

ಈ ವರ್ಷದ ಡಿಸೆಂಬರ್ 3ನೇ ತಾರೀಖು ಭೋಪಾಲ್ ಗ್ಯಾಸ್ ದುರಂತದ 25ನೇ ವರ್ಷಾಚರಣೆಯಾಗಿದ್ದು ಪಕ್ಷವು ಇದನ್ನು ಆಚರಿಸುತ್ತದೆ ಮತ್ತು ಭಾರತಕ್ಕೆ ಪರಮಾಣು ರಿಯಾಕ್ಟರ್ ಸರಬರಾಜು ಮಾಡುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವ ಅಗತ್ಯತೆಯನ್ನು ಈ ಮೂಲಕ ಎತ್ತಿ ತೋರಿಸಲಾಗುವುದು.

ಮಾವೋವಾದಿಗಳ ಆಕ್ರಮಣ

ದೇಶದ ವಿವಿಧ ಭಾಗಗಳಲ್ಲಿ ಮಾವೋವಾದಿ ತಂಡಗಳು ನಡೆಸುತ್ತಿರುವ ಕೆಟ್ಟ ಹಿಂಸಾತ್ಮಕ ಕೃತ್ಯಗಳನ್ನು ಕೇಂದ್ರ ಸಮಿತಿಯು ಬಲವಾಗಿ ಖಂಡಿಸಿದೆ. ಪಶ್ಚಿಮ ಬಂಗಾಳದಲ್ಲಿ ಮಾವೋವಾದಿಗಳು ಸಿ.ಪಿ.ಐ. (ಎಂ) ನ್ನು ಗುರಿಯಾಗಿಸಿಕೊಂಡಿವೆ ಮತ್ತು ಕಳೆದ ಕೆಲವು ತಿಂಗಳುಗಳಿಂದ ಪಕ್ಷದ 60 ಕ್ಕೂ ಹೆಚ್ಚು ಸದಸ್ಯರು ಮತ್ತು ಬೆಂಬಲಿಗರನ್ನು ಹತ್ಯೆ ಮಾಡಿದ್ದಾರೆ. ಅವರು ಇತ್ತೀಚೆಗೆ ಛತ್ತೀಸ್‌ಘರ್‌ನಲ್ಲಿ ಸಿ.ಪಿ.ಐ. (ಎಂ) ಕಾರ್ಯಕರ್ತರನ್ನು ಹತ್ಯೆಗೈದಿದ್ದಾರೆ. ಮಾವೋವಾದಿಗಳ ರಾಜಕೀಯ ಮತ್ತು ಅವರ ವಿಚ್ಛಿದ್ರಕಾರಿ ಚಟುವಟಿಕೆಗಳ ವಿರುದ್ಧ ಪ್ರಚಾರ ನಡೆಸಲು ಮತ್ತು ಈ ಶಕ್ತಿಗಳ ವಿರುದ್ಧ ಜನರನ್ನು ಅಣಿನೆರೆಸಲು ಕೇಂದ್ರ ಸಮಿತಿಯು ನಿರ್ಧರಿಸಿದೆ.

ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದಲ್ಲಿ ಕಳೆದ ಲೋಕಸಭಾ ಚುನಾವಣೆಯಿಂದಲೂ ಸಿ.ಪಿ.ಐ. (ಎಂ) ಮತ್ತು

ಪುಟ 15 ಕ್ಕೆ

ಸಂಪಾದಕೀಯ

ಆಡಳಿತ ನಡೆಸಲು ಅಸಮರ್ಥ ಬಿಜೆಪಿ

ಕರ್ನಾಟಕದ ಬಿಜೆಪಿಯೊಳಗೆ ಭುಗಿಲೆದ್ದಿರುವ ಭಿನ್ನಮತದಲ್ಲಿ ರಾಜ್ಯದ ಜನತೆಯ ಯಾವುದೇ ಹಿತಗಳು ಇಲ್ಲವೆಂಬುದು ಜಗಜ್ಜಾಹೀರಾಗಿದೆ. ನೆರೆ ಪರಿಹಾರದ ಹಣವನ್ನು, ರಾಜ್ಯದ ಅಮೂಲ್ಯವಾದ ಸಂಪನ್ಮೂಲಗಳನ್ನು ಲೂಟಿ ಮಾಡುವ ಭ್ರಷ್ಟತನವೇ ಇದರ ಹಿಂದಿರುವ ಅಂಶವಾಗಿದೆ ನಾಡಿನ ಜನ ಅತ್ಯಂತ ಸಂಕಷ್ಟದಲ್ಲಿರುವಾಗ, ಭಾದಿತರ ನೆರವಿಗೆ ಜನತೆಯು ಸಹಾಯದ ಮಹಾಪೂರವೇ ಹರಿದಿರುವುದನ್ನು ಹೀಗೆ ಲೂಟಿ ಮಾಡಲು ಮುಂದಾಗಿರುವ ಬಿಜೆಪಿ ಮುಖ್ಯಮಂತ್ರಿ, ಮಂತ್ರಿಗಳ ಅಮಾನವೀಯತೆ, ಕರಾಳ ಮುಖವನ್ನು ಇದು ತೋರಿಸುತ್ತದೆ.

ಈಗ ಬಂಡಾಯ ಹೂಡಿರುವ ರೆಡ್ಡಿ ಸಹೋದರರಿಗೆ ಎಲ್ಲಾ ರೀತಿಯ ಮಣೆ ಹಾಕಿದ್ದು ಇದೇ ಬಿಜೆಪಿ. ಅವರ ಅಕ್ರಮ, ಅನೈತಿಕ ಕ್ರಿಮಿನಲ್ ಚಟುವಟಿಕೆಗಳಿಗೆ ಸರ್ವ ರೀತಿಯ ಬೆಂಬಲ ಘೋಷಿಸಿದ್ದು ಕೇವಲ ಅಧಿಕಾರದ ದಾಹದಿಂದಲೇ. ಇದರ ಹೊಣೆಯನ್ನು ಯಡಿಯೂರಪ್ಪ ಒಳಗೊಂಡು ಬಿಜೆಪಿ, ಸಂಘಪರಿವಾರವೇ ಹೊರಬೇಕು. ದಿಢೀರನೇ ಶ್ರೀಮಂತರಾಗಿರುವ ಈ ಲೂಟಿ ಬಂಡವಾಳಗಾರರು ಅದನ್ನು ವಿಸ್ತರಿಸಿಕೊಳ್ಳಲು ಹೂಡಿರುವ ತಂತ್ರದ ಭಾಗ ಈ ಬಂಡಾಯ. ಶಾಸಕರ ಬೆಂಬಲವೆಂಬ ತಮ್ಮ ತೋಳ್ಬಲದ ಬಲಪ್ರದರ್ಶನಕ್ಕೆ ಇಳಿದಿರುವ ಎರಡೂ ಬಣಗಳೂ ಶಾಸಕರ ಖರೀದಿಯ ಜೂಜಾಟಕ್ಕೆ ಇಳಿದಿವೆ. ಇದಕ್ಕಾಗಿ ಎಂತಹ ಒಪ್ಪಂದಗಳಿಗೆ ಇಳಿವರೋ, ರಾಜ್ಯದ ಹಿತವನ್ನು ಬಲಿಕೊಡವರೋ ಎಂಬಂತಹ ಸ್ಥಿತಿ ಇದೆ. ಹಿಂದೆ 'ಆಪರೇಷನ್ ಕಮಲ'ದಂತಹ ನೀಚ, ಅನೈತಿಕತೆಯನ್ನು ಸಮರ್ಥಿಸಿಕೊಂಡಿದ್ದ ಯಡಿಯೂರಪ್ಪ ಬಿಜೆಪಿ ನಾಯಕತ್ವ ಈಗಲೂ ಹೀನಸ್ಥಿತಿ ತಲುಪಲು ಹೇಸದು. ಇದು ಬಿಜೆಪಿ ತಲುಪಿರುವ ದಿವಾಳಿ ಸ್ಥಿತಿಯಾಗಿದೆ. ಇದು ಖಂಡನೀಯ.

ಈಗ ಕೇಳುತ್ತಿರುವಂತೆ ನಾಯಕರ ಬದಲಾಗಿ ಬಿಜೆಪಿ ಅಧಿಕಾರದಲ್ಲಿದ್ದರೆ ಅದರಿಂದೇನು ರಾಜ್ಯದ ಜನರಿಗೆ ಪರಿಹಾರ?

ಇದರೊಟ್ಟಿಗೆ ಬಿಜೆಪಿಯ ಜನತೆಯು ಕೊಟ್ಟ ಅಧಿಕಾರ ನಡೆಸಲು ಪೂರ್ಣ ಅಸಮರ್ಥ ಎಂಬುದನ್ನು ತೋರಿಸಿದೆ. ಅದು ಕೇವಲ ಕೋಮುಗಲಭೆ ಹುಟ್ಟಿಸಲು, ಚರ್ಚ್‌ನಂತಹ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆಸಲು, ಇಂತಹ ಗಲಭೆಗಳ ಸಂಚು ರೂಪಿಸಲು ಮಾತ್ರ ಸಮರ್ಥ ಎಂಬುದನ್ನು ತೋರಿಸಿದೆ! ಇಂತಹ ವಿನಾಶಕಾರಿ, ಅಸಮರ್ಥರು ಅಧಿಕಾರದಲ್ಲಿರುವುದೇ ಅಪಾಯ.

ಬಿಜೆಪಿಯೊಳಗಿನ ಕಿತ್ತಾಟದಲ್ಲಿ ಮತ್ತೆ ಆರ್.ಎಸ್.ಎಸ್. ಮೇಲುಗೈ ಸಾಧಿಸಲು ಯತ್ನಿಸುತ್ತಿದೆ. ಈ ಮೂಲಕ ತಾನೂ ಸಹ ಈ ಎಲ್ಲಾ ಪಾತಕಗಳಿಗೆ ಹೊಣೆಯೆಂಬುದನ್ನು ಮತ್ತೊಮ್ಮೆ ಒಪ್ಪಿಕೊಂಡಿದೆ. ಜನತೆ ಇಂತಹ ಅನೈತಿಕ ನೀಚ ಕೃತ್ಯಗಳನ್ನು ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಸಾರಬೇಕಿದೆ.

ಹೋರಾಟ ಸಂಕಲ್ಪದ ದಿನವಾಗಲಿ ರಾಜ್ಯೋತ್ಸವ

ನವೆಂಬರ್ 1, ಸಂಭ್ರಮದ ದಿನ. ಅಂದು ಕರ್ನಾಟಕ ರಾಜ್ಯೋತ್ಸವ (ಕನ್ನಡ ರಾಜ್ಯೋತ್ಸವ)ದ ದಿನ. ಈ ಸಂಭ್ರಮಕ್ಕೀಗ 54 ವರ್ಷಗಳು. ಎಲ್ಲರಿಗೂ ಈ ಹರುಷದ ಶುಭಾಶಯಗಳು.

'ಒಂದು ಭಾಷೆಯನ್ನಾಡುವ ಜನರು ಒಂದುಗೂಡಬೇಕು. ಆಡಳಿತಾತ್ಮಕವಾಗಿ ರಾಜಕೀಯವಾಗಿಯೂ ಹರಿದು ಹಂಚಿಹೋಗಿದ್ದ ಈ ಭಾಷಿಕ ಪ್ರದೇಶಗಳು ಒಟ್ಟುಗೂಡಿ ಭಾಷಾವಾರು ಪ್ರಾಂತ್ಯ ರಚನೆಯಾಗಬೇಕು' ಎಂಬ ಪ್ರಜಾಸತ್ತಾತ್ಮಕ ಕೇಳಿಕೆ, ಆಗ್ರಹಕ್ಕಾಗಿ ನಡೆದ ಹೋರಾಟ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದ ಒಡಲಿನಿಂದಲೇ ಹುಟ್ಟಿ ಬಂದಿದ್ದು. ಅಪಾರ-ತ್ಯಾಗ, ಬಲಿದಾನಗಳ ನಂತರ ಫಲಿಸಿದ್ದು. ಇದರೆಲ್ಲದರ ಹಿಂದಿದ್ದ ಕನಸು, ಆಶಯಗಳು ಅಪಾರ. ಸ್ವಾತಂತ್ರ್ಯ ಸಂಗ್ರಾಮ ದಲ್ಲಿದ್ದಂತೆಯೇ.

ಹೋರಾಟಕ್ಕೆ ನಾಂದಿ


ಹಿಂದೆ ಬ್ರಿಟಿಷರ ಆಡಳಿತದಲ್ಲಿ ಕನ್ನಡ ಭಾಷಿಕ ಜನತೆಯು 28 ಆಡಳಿತೆಯಲ್ಲಿ (ಸಂಸ್ಥಾನಗಳೂ ಸೇರಿ) ಹಂಚಿ ಹೋಗಿದ್ದರು. 1947ರ ನಂತರ ಹಲವು ಸಂಸ್ಥಾನಗಳು ವಿಲೀನಗೊಂಡವೆಂದರೂ (ಕರ್ನಾಟಕ ಎಂಬ ಈ ಹೆಸರು ಬಂದಿದ್ದು ನಂತರವೇ)ಇನ್ನೂ 5 ಆಡಳಿತಗಳಲ್ಲಿ ಉಳಿದಿದ್ದರು. ಹೋರಾಟದ ಬಳಿಕ ಭಾಷಾವಾರು ಪ್ರಾಂತ್ಯ ರಚನೆಯಾಗಿದ್ದು 1956 ರ ನವೆಂಬರ್ 1 ರಂದೆ. ಆಗಲೂ ಉಸಿರಾಯಿತು ಕನ್ನಡ, ಆದರೆ ಹೆಸರಾಗಲಿಲ್ಲ ಕರ್ನಾಟಕ. ಆಗ ಕರೆದಿದ್ದು 'ವಿಶಾಲ ಮೈಸೂರು' ಎಂದೇ. ಕರ್ನಾಟಕ ಎಂದು ಅಧಿಕೃತವಾಗಿ ಘೋಷಿತವಾದದ್ದೇ 1973ರಲ್ಲಿ. ಅದೂ ಅಪಾರ ಒತ್ತಡದ ನಂತರದಲ್ಲಿ..ಇದು ಸ್ವಾತಂತ್ರ್ಯಕ್ಕಾಗಿ ಹೋರಾಡಿದೆನೆಂಬ, ನಂತರದಲ್ಲಿ ಅಧಿಕಾರ ಗದ್ದುಗೆ ಏರಿದ ಜನರ ಹಕ್ಕು ನಿರ್ಲಕ್ಷಿಸಿ, ನಿರಾಕರಿಸುತ್ತಾ ಬಂದ ಕಾಂಗ್ರೆಸ್ ಧೋರಣೆಯಿಂದ.

ಹಿಂದೆ 1905 ರಲ್ಲಿ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಗಳನುಗುಣವಾಗಿ ಬಂಗಾಳವನ್ನು ವಿಭಜಿಸಿದರು. ಅದರ ವಿರುದ್ಧ ವ್ಯಾಪಕ ಹೋರಾಟ ನಡೆಯಿತು. ಇಂತಹ ಹೋರಾಟ ಭಾಷಾವಾರು ಪ್ರಾಂತ್ಯಗಳ ರಚನೆಯ ಆಗ್ರಹಕ್ಕೆ ನಾಂದಿಯಾಯಿತು.

1905-15ರ ನಡುವೆ ಈ ಹಿನ್ನೆಲೆಯಲ್ಲಿ ಹಲವಾರು ಸಂಘಟನೆಗಳು ಜನ್ಮತಳೆದವು. ಕನ್ನಡ ಸಾಹಿತ್ಯ ಪರಿಷತ್ ರಚನೆಯಾದುದು 1915 ರಲ್ಲಿಯೇ. ಮುಂದೆ ಐಕ್ಯ ಕರ್ನಾಟಕ ಸಾಧಿತವಾಗಲೇಬೇಕೆಂದು ಮನವಿಯನ್ನು 'ಮಾಂಟೆಗೋ ಕ್ಲೆಂ ಪೋರ್ಡ್' ಸಮಿತಿಯ ಮುಂದೆ ಸಲ್ಲಿಸಿದ್ದ 1917ರಲ್ಲಿ. ಹೀಗೆ ರಾಷ್ಟ್ರೀಯ ಹೋರಾಟದ ಭಾಗವಾಗಿಯೇ ಭಾಷಾವಾರು ಪ್ರಾಂತ್ಯಕ್ಕಾಗಿ ಚಳುವಳಿ ನಡೆದಿದ್ದು. ಕಾಂಗ್ರೆಸ್ ಆ ವರುಷಗಳಲ್ಲಿ ಜನರ ಆಗ್ರಹಕ್ಕೆ ಒಪ್ಪಿದ್ದು, ಮುಂದೆ 1947ರಲ್ಲಿ ಕಾಂಗ್ರೆಸ್‌ಗೆ ಅಧಿಕಾರ ಹಸ್ತಾಂತರಿಸಿಕೊಂಡ ಬಳಿಕ ನಿರಾಕರಿಸಿದ್ದು, ಇದರ ವಿರುದ್ಧ ವಿಶಾಲವಾದ ಪ್ರಬಲ ಪ್ರಜಾಸತ್ತಾತ್ಮಕ ಚಳುವಳಿ ನಡೆದದ್ದು, ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಮಹತ್ವದ ಪಾತ್ರ. ಇದರಲ್ಲಿ ತ್ಯಾಗ ಬಲಿದಾನ ಕೊನೆಗೆ ಒಪ್ಪಲೇ ಬೇಕಾಗಿ ಬಂದ ಪ್ರಾಂತ್ಯ ರಚನೆ... ಇವೆಲ್ಲವೂ ಅಳಿಸಲಾಗದ ಉಜ್ವಲ ಇತಿಹಾಸ.

ಎದೆ ತುಂಬಿದ ಹಾಡು

'ವಿವಿಧೆಡೆಗಳಲ್ಲಿ ಅಲ್ಪಸಂಖ್ಯಾತರಾಗಿ ನರಳುತ್ತಿದ್ದ ಕಾಲ ಕೊನೆಗೊಂಡು ತಮ್ಮ ಭವಿಷ್ಯ ತಾವೇ ತೀರ್ಮಾನ ಮಾಡುವ ಸುಯೋಗ ದೊರೆಯಲಿದೆ. ಇದು ಮಹತ್ವದ ಚಾರಿತ್ರಿಕ ದಿನ' ಎಂದು ಎದೆ ತುಂಬಿ ಹೇಳಿದ್ದು ಭಾಷಾವಾರು ಪ್ರಾಂತ್ಯ ರಚನೆಯ ಹೋರಾಟದಲ್ಲಿ ಸಂಪೂರ್ಣ ತೊಡಗಿಕೊಂಡಿದ್ದ 'ಜನಶಕ್ತಿ' ತನ್ನ 1956ರ ನವೆಂಬರ್ 1 ರ ಸಂಚಿಕೆಯಲ್ಲಿ. 'ಅದಾಗಬೇಕು, ಇದಾಗಬೇಕು' ಎಂದೆಲ್ಲಾ ಕನಸಿದ್ದಕ್ಕೆ ಲೆಕ್ಕವುಂಟೇ! ಅದಕ್ಕೆ ಸಾಕ್ಷಿ ಅಂದಿನ ನಮ್ಮ ಕನ್ನಡ ಸಾಹಿತ್ಯ. ಸಾಹಿತ್ಯ ದಿಗ್ಗಜರ ಹಾಡು. ಹೃದಯದ ಈ ಹಾಡುಗಳಲ್ಲಿ ಭವಿಷ್ಯದ ಬಗೆಗಿನ ಉತ್ಸುಕತೆ ಹರಿದದ್ದು ತುಂಗೆ-ಕೃಷ್ಣ-ಕಾವೇರಿಯಂತೆ. ಆದರೆ ಇವೆಲ್ಲ ಸಾಧಿತವಾಗಬೇಕಾದರೆ ಮೂಲಭೂತವಾಗಿ ಏನಾಗಬೇಕು ಎಂದು ಸ್ಪಷ್ಟವಾಗಿ ಹಾದಿ ತೋರಿದ್ದು ಅವಿಭಜಿತ ಕಮ್ಯುನಿಸ್ಟ್ ಆಂದೋಲನವೇ. ಆ ಪಕ್ಷವೇ. ಬ್ರಿಟಷರಿಂದ ವಿಮೋಚನೆಗೊಂಡು ನವಭಾರತದ ನಿರ್ಮಾಣದ ಸವಾಲುಗಳು, ಕರ್ನಾಟಕದ ಭವಿಷ್ಯ ನಿರ್ಮಾಣವೂ ಪರಸ್ಪರ ಹೊಂದಿಕೊಂಡದ್ದೇ ಆಗಿತ್ತು. ಭಾರತ ಹೇಗೆ ಬೆಳೆಯಬೇಕು ಎಂಬಲ್ಲಿ, ಎರಡು ವಿಭಿನ್ನ ಕಣ್ಣೋಟಗಳಿದ್ದವು. ಅಂದಿನ ಹಿರಿಯ ಬಂಡವಾಳಿಗರ ನೇತೃತ್ವದ ಭೂ ಮಾಲೀಕ-ಬಂಡವಾಳಶಾಹಿ ಅಭಿವೃದ್ಧಿ ಪಥ ಒಂದೆಡೆಯಾದರೆ, ಕಾರ್ಮಿಕ ವರ್ಗದ ನೇತೃತ್ವದ ಒಟ್ಟು ಶ್ರಮಜೀವಿ ವರ್ಗದ ಕಣ್ಣೋಟ ಇನ್ನೊಂದು. ಮೊದಲನೆಯದನ್ನು ಕಾಂಗ್ರೆಸ್ ಪ್ರತಿಪಾದಿಸಿ ಜಾರಿಗೆ ತೊಡಗಿದರೆ ಶ್ರಮಜೀವಿ ವರ್ಗದ ಪುರೋಗಾಮಿ ಕಣ್ಣೋಟ ಕಮ್ಯುನಿಸ್ಟ್ ಪಕ್ಷದು. ಸಿಕ್ಕಿದ ಅಧಿಕಾರ ಸೂತ್ರ ಹಿಡಿದು ತನ್ನ ಶೋಷಕ ವರ್ಗ ಆಡಳಿತವನ್ನು ಪ್ರಭುತ್ವದ ಮೂಲಕ ಕ್ರೋಢೀಕರಿಸಿಕೊಂಡು ವಿಸ್ತರಿಸಿ ಬಲಗೊಳ್ಳಲು ಕಾಂಗ್ರೆಸ್ ಯತ್ನಿಸುತ್ತಿದ್ದರೆ ಈಗಿನ ದಕ್ಕಿದ ಸ್ವಾತಂತ್ರ್ಯ ಜನತೆಯ ಎಲ್ಲಾ ದುಡಿಯುವ ವರ್ಗದ ಶೋಷಿತರ ಸ್ವತ್ತಾಗಬೇಕು, ಸಮಾನತೆಯು ಸಾಧಿತವಾಗಬೇಕು. ಸರ್ವರಿಗೂ 'ಸಮಪಾಲು, ಸರ್ವರಿಗೂ ಸಮಬಾಳು' ದಕ್ಕಬೇಕೆಂಬುದು ಕಮ್ಯುನಿಸ್ಟ್ ಪಕ್ಷ ಧೋರಣೆಯಾಗಿತ್ತು. ಆದ್ದರಿಂದಲೇ ಹಿಂದೆ ತಾನು ಬೆಂಬಲಿಸಿದ್ದ ಭಾಷಾವಾರು ಪ್ರಾಂತ್ಯ ರಚನೆಯನ್ನೇ ವಿರೋಧಿಸಿದ, ಇಡೀ ಭಾರತದ ಅಂತಃಸತ್ವವಾಗಿರುವ ವೈವಿಧ್ಯತೆಯನ್ನೇ ನಿರಾಕರಿಸಿ, ಶೋಷಕರ ಮಾರುಕಟ್ಟೆಯಲ್ಲಿ ಭಾರತವೆಂದು ಬಗೆದದ್ದು ಕಾಂಗ್ರೆಸ್ ವೈವಿಧ್ಯತೆ, ಪ್ರಾದೇಶಿಕ ವೈಶಿಷ್ಟತೆಗಳ ಆರೋಗ್ಯಕರ ಬೆಳವಣಿಗೆ -ಬೆಸುಗೆ, ವಿಶಾಲ ಜನ ಸಮೂಹಗಳನ್ನು ಒಂದೂಗೂಡಿಸಿದ ಜನತೆಯ ಪ್ರಜಾಸತ್ತಾತ್ಮಕ ಭಾರತವು ಕಮ್ಯುನಿಸ್ಟ್ ಪಕ್ಷದ ಹಾದಿ. ಉತ್ಪಾದನಾ ಸಾಧನ, ಸಲಕರಣೆಗಳು ಸಂಪತ್ತು ಶ್ರಮಜೀವಿಗಳ, ಜನತೆಯ ಸಮಾಜದ ಸ್ವತ್ತಾಗಬೇಕು. ಆ ಸಂಬಂಧ ಇದಕ್ಕನುಸಾರ ಬದಲಾಗಬೇಕು. ಅಂದಾಗ ಮಾತ್ರವೇ ಪ್ರಗತಿ, ಸಮಾನತೆ ಸಾಧ್ಯವೆಂದದ್ದರಿಂದಲೇ ಭಾಷಾವಾರು ಪ್ರಾಂತ್ಯ ರಚನೆಯಾದ ಕೂಡಲೇ ಕರ್ನಾಟದಲ್ಲಿ ಅದು ಸಾಧಿತವಾಗಬೇಕಾದ ಬಗೆಯನ್ನು ಸ್ಪಷ್ಟವಾಗಿ ಮುಂದಿಡಲಾಗಿತ್ತು.



ಸವಾಲಿದ್ದವು...

ವಿವಿಧ ಪ್ರದೇಶಗಳ ವಿಲೀನವನ್ನೂ, ಒಳಗೊಂಡು, ಹೊಸ ಸಂದರ್ಭ ಹೊಸ ಸವಾಲನ್ನು ಧೈರ್ಯದಿಂದ ಎದುರಿಸೋಣ ಎಂದಿದ್ದಲ್ಲದೇ, ಕೈಗಾರಿಕೆ-ಭೂ ಸಂದರ್ಭಗಳಲ್ಲಿ ಮೂಲಭೂತ ಬದಲಾವಣೆ ಭೂ ಸುಧಾರಣೆ, ಪ್ರಾಕೃತಿಕ ಸಂಪನ್ಮೂಲ ಬಳಕೆ, ನೀರಾವರಿ ವಿದ್ಯುತ್, ರೈಲ್ವೆ-ಸಾರಿಗೆ, ಶಿಕ್ಷಣ-ಸಂಸ್ಕೃತಿ, ಹೀಗೆ ಸರ್ವತೋಮುಖ ಪ್ರಗತಿ ಸಾಧಿಸಲು, ನಿರ್ದಿಷ್ಟ ಸೂಚನೆ ನೀಡಲಾಗಿತ್ತು. ಪ್ರಾದೇಶಿಕ ಅಸಮಾನತೆ ತೊಲಗಿಸಲು, ಪ್ರತ್ಯೇಕತೆ (ಎರಡು ರಾಜ್ಯಗಳ) ಕೂಗು ವಿರೋಧಿಸಿ, ಗಡಿ ವಿವಾದಗಳನ್ನು ಹೇಗೆ ಬಗೆಹರಿಸಿಕೊಳ್ಳಬಹುದು ಎಂಬ ಸಮಗ್ರ ಚಿತ್ರಣ ಅಂದಿನ ಕಮ್ಯುನಿಸ್ಟ್ ಪಕ್ಷ ನೀಡಿತ್ತು.

'ಹೊಸಪ್ರಾಂತ್ಯದ ಹೊಸ ಸಮಸ್ಯೆ, ಸವಾಲುಗಳನ್ನು ಧೈರ್ಯದಿಂದ ಎದರಿಸೋಣ' ಎಂದು ಭಾಷಾವಾರು ಪ್ರಾಂತಗಳಿಗಾಗಿ ಹೋರಾಡಿದ ಹೋರಾಟಗಾರ, ಅವಿಭಜಿತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಎನ್.ಎಲ್. ಉಪಾಧ್ಯಾಯರು 'ಜನಶಕ್ತಿ' ಗೆ ಬರೆದ ಅಗ್ರ ಲೇಖನದಲ್ಲಿ ಹೇಳಿದ್ದಾರೆ.

ಆಳುವವರ ವೈಫಲ್ಯ

ಇಂತಹ ಜನತೆಯ ಪ್ರಜಾಸತ್ತಾತ್ಮಕ ಹಾದಿಯನ್ನು ನಿರಾಕರಿಸಿದ ಕಾಂಗ್ರೆಸ್ ಅಥವಾ ಭೂ ಮಾಲೀಕ-ಬಂಡವಾಳಶಾಹಿ ವರ್ಗ ಪ್ರಭುತ್ವ ಜನತೆಯ ಆಶೋತ್ತರಗಳನ್ನು ಈಡೇರಿಸದೇ ವಿಫಲವಾಗಿದೆ. ಇಂದಿಗೂ ಪ್ರಗತಿ ಸಾಧಿತವಾಗಿದೆಯೆನ್ನುವಾಗಲೇ ಜನರ ಪಾಲಿನ ಸಂಕಷ್ಟ, ಬಡತನ, ದಾರಿದ್ರ್ಯ, ಅನಕ್ಷರತೆ, ತಾಂಡವವಾಡುತ್ತಿದೆ. ಎಲ್ಲಾ ಹಂತಗಳಲ್ಲಿಯೂ ಅಸಮಾನತೆ ತೊಲಗಿಲ್ಲ. ಉದಾರೀಕರಣ, ಜಾಗತೀಕರಣದ ದಾಳಿಗಳು ದೇಶದ, ರಾಜ್ಯದಜನತೆಯನ್ನು ಇನ್ನಷ್ಟು ಕಂಗೆಡಿಸಿವೆ. ಸಾಧಿತವಾದ ಅಲ್ಪ ಕೃಷಿ -ಕೈಗಾರಿಕೆಗಳೂ ನಾಶವಾಗುತ್ತಿವೆ. ಶ್ರಮಜೀವಿಗಳು ಆತ್ಮಹತ್ಯೆ ಎಂಬ ಕಗ್ಗೊಲೆಗೆ ನಿತ್ಯವೂ ಬಲಿಯಾಗುತ್ತಿದ್ದಾರೆ. ಭಾಷೆ ಸಂಸ್ಕೃತಿ ಮೇಲೆ ದಾಳಿ ತೀವ್ರಗೊಂಡಿದೆ.

ಪುಟ 4ಕ್ಕೆ

ಎಲ್ಲೋ ಮಳೆಯಾಗಿದೆಯೆಂದು ಬಿರುಗಾಳಿಯು ಏಳುತಿದೆ....

ಕ್ಯಾತೆ

ಶ್ರೀ

ಮಳೆ ಎಂತೆಂಥ ಅನಾಹುತ ಮಾಡುತ್ತದಲ್ಲ?! ಮನೆ, ಮಠ, ಊರೂರುಗಳನ್ನೇ ಮುಳುಗಿಸಿದ ಮಳೆ ಈಗ ಮುಖ್ಯ ಮಂತ್ರಿಗಳ ಕುರ್ಚಿಯ ಬುಡಕ್ಕೇ ಪ್ರವಾಹ ನುಗ್ಗಿಸಿದೆಯಲ್ಲ! ಯಡಿಯೂರಪ್ಪನವರ ಕುರ್ಚಿ ಮುಳುಗುತ್ತದೋ ಅಥವಾ ಹೆಲಿಕಾಪ್ಟರಿನಲ್ಲಿ ಮಂತ್ರಾಲಯದ ಮಠಾದೀಶರನ್ನು ರಕ್ಷಿಸಿದ ಹಾಗೆ ಯಡಿಯೂರಪ್ಪನವರನ್ನು ಯಾರಾದರೂ ರಕ್ಷಿಸುತ್ತಾರೋ ಕಾದು ನೋಡಬೇಕು. ಯಡಿಯೂರಪ್ಪನವರೇನೋ ಮಂತ್ರಾಲಯಕ್ಕೆ ಹತ್ತು ಕೋಟಿ ಕೊಟ್ಟರು. ಆ ಮಂತ್ರಾಲಯ ಮಹಾತ್ಮೆಯಿಂದೇನಾದರೂ ಇವರ ಕುರ್ಚಿ ಉಳಿಯಬಹುದೇ? ಅಥವಾ ತನ್ನನ್ನೇ ರಕ್ಷಿಸಿಕೊಳ್ಳಲಾಗದ ಮಠ ಇವರನ್ನು ಕಾಪಾಡುವುದೋ ರೆಡ್ಡಿಗಳ ಹಠ ಮುಳುಗಿಸುವುದೋ ನಾವೂ ಯೋಗ ಮಾಡುತ್ತಾ ನೋಡುತ್ತಿರೋಣ! ;

★

ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ನಾನಾ ವಿಧದ ಸರ್ಕಸ್ ಮಾಡಿ ಕಡೆಗೆ ಗಣಿ ಲಾರಿ ಮೇಲೇರಹೋಗಿ ಉರುಳಿ ಬಿದ್ದು ಮು.ಮಂ.ಗಳು ತಾವೇ ಸಂತ್ರಸ್ತರಾಗುವಂತಾಗಿ ದೆಯಲ್ಲ! ಮಳೆ ಪ್ರವಾಹಗಳಿಂದ ಲಕ್ಷಾಂತರ ಮಂದಿ ಮನೆ, ನೆಲೆಯಿಲ್ಲದೇ ಇರುವುದರಿಂದ ಪಾಪ ಅವರಿಗೆ ಯಾವುದೇ ಮನರಂಜನೆಯಿಲ್ಲದೆ ನೊಂದಿದ್ದಾರಂತೆ?! ಅಲ್ಲದೇ ರಾಜ್ಯದಲ್ಲಿ ಇಷ್ಟು ಮಳೆ ಬಂದು ಎಲ್ಲ ಅಣೆಕಟ್ಟುಗಳೂ ತುಂಬಿದ್ದರೂ ರಾಜ್ಯದಲ್ಲಿ ಯರ್‍ರಾ ಬಿರ್‍ರಿ ಪವರ್ ಕಟ್ ಆಗ್ತೊರೋದ್ರಿಂದ ಜನಕ್ಕೆ ಟೀ ವಿ ಮನರಂಜನಾ ಕಾರ್ಯಕ್ರಮಗಳನ್ನ ವೀಕ್ಷಿಸಲಾಗುತ್ತಿಲ್ಲ. ಹಾಗಾಗಿ ಜನಗಳ ಹಿತ ದೃಷ್ಟಿಯಿಂದ 'ಯಡಿಯೂರಪ್ಪನವರ ಪವರ್ ಕಟ್' ಎಂಬ ಪ್ರಹಸನವನ್ನು ಬಿ.ಜೆ.ಪಿ. ಪ್ರಾಯೋಜಿಸಿದೆಯಂತೆ!

★

ಈ ಅಧಿಕಾರದ ಮೇಲಾಟದ ಮಧ್ಯೆ ಸ್ವಲ್ಪ ಲವ್ ಟಚ್ ಇದ್ದರೆ ಯುವ ಜನತೆ ಯನ್ನು ಆಕರ್ಷಿಸಬಹುದು ಅಂತ ಸಂಘ ಪರಿವಾರವು ಅದರ ಪುಂಗಿ ಪತ್ರಿಕೆಗಳ ಮೂಲಕ 'ಲವ್ ಜೀಹಾದ್' ಎಂಬ ಸುಳ್ಳಂ ಪಳ್ಳೀ ಗಾಸಿಪ್‌ಗಳನ್ನು ದೊಡ್ಡ ಸುದ್ದಿಯನ್ನಾಗಿ ತೇಲಿಬಿಟ್ಟಿದೆಯಂತೆ.

ಇಂಥ ಸುಂದರ ರಾಜಕೀಯ ಮನರಂಜನಾ ಕಾರ್ಯಕ್ರಮದಲ್ಲಿ ಕೆಲವು ಹಾಡುಗಳನ್ನು ಸೇರಿಸಿದರೆ ಸೂಪರ್ ಹಿಟ್ ಆಗಬಹುದೆಂಬ ದೂರಾಲೋಚನೆಯಿಂದ ನಮ್ಮ ಕವಿಪುಂಗವರು ಕೆಲವು ಹಾಡುಗಳನ್ನು ರೀಮೇಕ್ ಮಾಡಲಾರಂಭಿಸಿದ್ದಾರೆ. ಅವುಗಳ ಒಂದೆರಡು ಝಲಕು ಹೀಗಿದೆ:

ಮಳೆ ನಿಂತು ಹೋದ ಮೇಲೆ
ಕುರ್ಚಿ ಅಲುಗಾಡಿದೆ
ತೆರಿಗೆಯನ್ನು ಹೇರಿದ ಮೇಲೆ
ಗಣಿಯೆಲ್ಲ ಕೆರಳಿದೆ.
ಹೇಳುವುದು ಏನೂ ಉಳಿಯದಾಗಿದೆ,
ಮಾಡುವುದು ಇನ್ನೂ ಬಹಳವಾಗಿದೆ.
(ಕಲೆಕ್ಷನ್ನೆಲ್ಲ ಎಲ್ಲೋ ಮಾಯವಾಗಿದೆ?!)....

•••

ಎಲ್ಲೋ ಮಳೆಯಾಗಿದೆಯೆಂದು,
ಬಿರುಗಾಳಿಯು ಏಳುತಿದೆ.
ಕುರ್ಚಿ ಅಲುಗಾಡುತಲಿಂದು
ಅಧಿಕಾರವು ಕುಸಿಯುತ್ತಿದೆ.
ಯಡಿಯೂರಪ್ಪನ ಜಾಗದಲಿ
ಶೆಟ್ಟರು ಬರಬಹುದೇ?
ಬಿಜೇಪಿಯ ಈ ಪರಿ ಹೊಲಸಿನಲಿ
ಹೇಸಿಗೆ ಬರದಿಹುದೇ?

○

ಮಧುಗಿರಿ ರೇಷನ್ ಹೋರಾಟ

ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ರೇಷನ್ ಅಂಗಡಿಯಲ್ಲಿ ಜನರಿಗೆ ರೇಷನ್ ನೀಡದೆ ವಂಚಿಸುತ್ತಿದ್ದ ರೇಷನ್ ಡಿಪೋ ವಿರುದ್ಧ ಜನವಾದಿ ಮಹಿಳಾ ಸಂಘಟನೆ, ಸ್ತ್ರೀ ಶಕ್ತಿ ಸಂಘಟನೆಗಳು ಸೆಪ್ಟೆಂಬರ್ 17 ರಂದು ಬೃಹತ್ ಪ್ರತಿಭಟನೆ ನಡೆಸಿದವು. ಈ ಪ್ರತಿಭಟನೆಯಿಂದ ರೇಷನ್ ಡಿಪೋ ಮಾಲೀಕರ ಲೈಸೆನ್ಸ್ ರದ್ದಾಗಿದೆ. ಈ ಪ್ರತಿಭಟನೆಯ ನೇತೃತ್ವವನ್ನು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಸಂಘಟನೆಯ ರಾಜ್ಯ ನಾಯಕಿ ಸಿ.ಕುಮಾರಿ, ಅಂಗನವಾಡಿ ಹಾಗೂ ಸ್ತ್ರೀಶಕ್ತಿ ಸಂಘಗಳ ಮುಖಂಡರಾದ ಪಾರ್ವತಿ, ಮಲ್ಲಮ್ಮ ಸುಕನ್ಯ ಹಾಗೂ ದಾಕ್ಷಾಯಿಣಿ, ಜಯಮ್ಮ ಮುಂತಾದವರು ವಹಿಸಿದ್ದರು.

○



ಬರಹಕ್ಕೆ ಪ್ರೇರಕವಾದವರ ಎದುರಲ್ಲಿ ಪುಸ್ತಕ ಬಿಡುಗಡೆ

ಕಿಕ್ಕಿರಿದ ರಂಗಮಂಟಪ. ಬೀದರ ಜಿಲ್ಲೆಯಹಳ್ಳಿ ಪಳ್ಳಿಗಳ ದುಡಿಯುವ ಮಹಿಳೆಯರು ತಮ್ಮ ಮನೆಯ ನಿಬ್ಬಣಕ್ಕೆ ಹೊರಟವರಂತೆ ಇದ್ದುದ್ದರಲ್ಲಿ ಹೊಸ ಸೀರೆಯನ್ನುಟ್ಟುಕೊಂಡು, ಒಪ್ಪ ಓರಣದೊಂದಿಗೆ ಖುಷಿಯೊಂದಿಗೆ ಹೆಜ್ಜೆ ಹಾಕುತ ಬರುತ್ತಿದ್ದರು. ಎಲ್ಲಿಗೆ ಹೊರಟಿದ್ದರು ಆ ಜನ? ಎಂದಿನಂತೆ ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಲು ಅಲ್ಲ. ಮಾಡಿದ ಕೆಲಸದ ಹಣ ಕೇಳಲೂ ಅಲ್ಲ. ಹೌದು ಅಂದು ಯಾವುದೇ ಧರಣಿ ಮುಷ್ಕರ ಘೇರಾವ್ ಏನೇನೂ ಇರಲಿಲ್ಲ. ಆದರೂ ಕೃಷಿ ಕೂಲಿ ಕಾರ್ಮಿಕ ಮಹಿಳೆ ಪುರುಷರಾದಿಯಾಗಿ ಯುವಕರು ವಿದ್ಯಾರ್ಥಿಗಳು ದಂಡಿ ದಂಡಿಯಾಗಿ ವೇದಿಕೆಯತ್ತ ಹರಿದು ಬರುತ್ತಿದ್ದರು. ಇನ್ನೊಂದೆಡೆ ಬೀದರ ನಗರದ ಅಕೆಡೆಮಿಕ್ ಶಿಸ್ತಿನ ಮಂದಿ, ಬರಹಗಾರರು, ಚಿಂತಕರು ಸಾಹಿತ್ಯಾಸಕ್ತರು ಕೂಡ ಅದೇ ಉತ್ಸಾಹದಿಂದ ಅಣಿ ನೆರೆಯುತ್ತಿದ್ದರು. ಕೂಲಿ ಕಾರ್ಮಿಕ ಮತ್ತು ಅಕೆಡೆಮಿಕ್ ಮಂದಿಯ ಸಂಗಮ ಅದಾಗಿತ್ತು.




ಪುಸ್ತಕ ಬಿಡುಗಡೆ ಚಿತ್ರ

12.09.09. ಆ ದಿನ ನೀಲಾ ಅವರು ಬರೆದ 'ಜ್ಯೋತಿಯೊಳಗಣ ಕಾಂತಿ' ಮತ್ತು 'ನೆಲದ ಪಿಸುಮಾತು' ಎಂಬ ಎರಡು ಪುಸ್ತಕಗಳ ಬಿಡುಗಡೆ ಸಮಾರಂಭ.

ಪುಸ್ತಕ ಬಿಡುಗಡೆ ಮಾಡಿ ಮಾತಾಡಲೆಂದು ಬಂದಿದ್ದ ಬಾಗಲಕೋಟೆಯ ಕಥೆಗಾರ ಬಾಳಾಸಾಹೇಬ ಲೋಕಾಪುರ ಅವರು ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಇಷ್ಟೊಂದು ಸಭಿಕರು ಎಂದು ಬೆರಳು ಕಚ್ಚಿದ್ದರು.

ಬಿಜಿವಿಎಸ್ ಮುಖಂಡರಾದ ಚಂದ್ರಪ್ಪ ಹೆಬ್ಬಾಳಕರ್ ಅವರ ಸಂಚಾಲನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶಂಭುಲಿಂಗ ವಾಲ್ದೊಡ್ಡಿ ಹಾಗೂ ವಿಜಯ ಕುಮಾರ ಸೋನಾರೆ ತಂಡದವರ ಕ್ರಾಂತಿಗೀತೆಗಳು ಅನುರಣಿಸಿದವು. ಸಮುದಾಯ ಕಾರ್ಯದರ್ಶಿ ಬಸವರಾಜ ಮಯೂರ ಅವರು ಉಪಸ್ಥಿತರನ್ನು ಸ್ವಾಗತಿಸಿದರು. ಶಿವಕುಮಾರ ಕಟ್ಟೆಯವರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು.



ಬಿಡುಗಡೆಯಾದ ಪುಸ್ತಕಗಳು

ಹಳ್ಳಿಖೇಡ್ ಗ್ರಾಮದ ಉದ್ಯೋಗ ಖಾತ್ರಿಯ ಸಮರಧೀರ ಹೋರಾಟದಲ್ಲಿ ಭಾಗವಹಿಸಿ ಸ್ವಾಭಿಮಾನಿ ಯಶಸ್ಸು ಸಾಧಿಸಿದ ಕೂಲಿ ಕಾರ್ಮಿಕ ಮಹಿಳೆಯರಾದ ಸುಮಿತ್ರಾಬಾಯಿ ಹಾಗೂ ವಿಜಯಕುಮಾರಿ ಇವರು ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಹಾಗೆ ನೋಡಿದರೆ ಈ ಪುಸ್ತಕಗಳನ್ನು ಬಿಡುಗಡೆ ಮಾಡುವ ಹಕ್ಕು ಅವರದೇ. ಪುಸ್ತಕ ಬಿಡುಗಡೆಯೊಂದಿಗೆ ಸಭೆ ಉದ್ಘಾಟನ ಮಾಡಿದ ಅವರು ನಾಚುತ್ತಲೇ ವೇದಿಕೆ ಅಲಂಕರಿಸಿದ ಅವರಿಗೆ ಸುರುಳಿ ಬಿಚ್ಚುವುದು ಪುಸ್ತಕವೆತ್ತಿ ಹಿಡಿದು ಫೋಟೋ ಕ್ಲಿಕ್ಕಿಸಿಕೊಳ್ಳುವುದು ಇವೆಲ್ಲಾ ತೀರ ಹೊಸ ಅನುಭವವಾಗಿತ್ತು. ನಂತರ ನೀಲಾ ಅವರ ಒಟ್ಟು ವ್ಯಕ್ತಿತ್ವ ಮತ್ತು ಹೋರಾಟದ ಹಾದಿಯ ಸೈದ್ಧಾಂತಿಕ ಬದ್ಧತೆಯನ್ನು ಕುರಿತು ಗೆಳತಿ ಡಾ. ಮೀನಾಕ್ಷಿ ಬಾಳಿಯವರು ಬರೆದ 'ಈಗ ಕೆಡಲಾಗದು ಕಲ್ಯಾಣ' ಕವನ ಓದುವದರೊಂದಿಗೆ ಸಭಿಕರ ಗಮನ ಸೆಳೆದರು. ಮುಖ್ಯ ಅತಿಥಿಗಳು ಮತ್ತು ಕಥಾಸಂಕಲನವಾದ 'ಜ್ಯೋತಿಯೊಳಗಣ ಕಾಂತಿ' ಪುಸ್ತಕವನ್ನು ಕುರಿತು ಡಾ. ಬಾಳಾಸಾಹೇಬ ಲೋಕಾಪುರ ಅವರು ಸುದೀರ್ಘವಾಗಿ ಮಾತಾಡಿ ಕೆ ನೀಲಾ ಗಂಭೀರ ಕಥೆಗಾರ್ತಿ. ಬೀದರ ಭಾಷೆಯ ದೇಶೀಯತೆಯನ್ನು ಅರ್ಥಪೂರ್ಣವಾಗಿ ದುಡಿಸಿಕೊಂಡ ಭಾಷಾಕರ್ಮಿ ಎಂದರು. ಡಾ. ಕಾಶಿನಾಥ ಅಂಬಲಗಿಯವರು ಅಂಕಣ ಬರಹಗಳ ಸಂಕಲನ 'ನೆಲದ ಪಿಸುಮಾತು' ಕೃತಿಯನ್ನು ಕುರಿ ತುಂಬು ಅಭಿಮಾನದಿಂ ಮಾತಾಡಿದರು. ಇದ್ದ ಸಂದರ್ಭದಲ್ಲಿ ಸ್ಥಳೀಯ ಹಿರಿಯ ಸಾಹಿತಿಗಳಾ ದೇಶಾಂಶ ಹುಡುಗಿ ಡಾ. ಪ್ರೇಮಾ ಸಿಸೆ ಮುಂತಾದವರ ಶುಭಾಶಯಗಳನ ಕೋರಿ ನೀಲಾ ಅವ ಬರವಣಿಗೆಯ ಹಿಂದಿರುವ ಅನುಭವದ ಗಟ್ಟಿತನವನ್ನು ಶ್ಲಾಘಿಸಿದರು.

ಲೇಖಕಿ ನೀಲಾ ಸಮಾರಂಭಕ್ಕೆ ಪ್ರತಿಸ್ಪಂದಿಸು ತಮ್ಮ ಬರಹಕ್ಕೆ ಧಾತುವಾದ ಜನತೆ ಅವ ಕಷ್ಟ-ಕಾರ್ಪಣ್ಯ, ವ್ಯವಸ್ಥೆಯ ಕ್ರೌರ್ಯ ಇವೆಲ್ಲ ತಮ ಕಾಡುವ ಬಗೆಯನ್ನು ವಿವರಿಸಿದರು. ತುಂಬ ಉಲ್ಲಾಸದಿಂದ ಕಾರ್ಯಕ್ರಮವನ್ನು ಮೀನಾಕುಮಾ ಬೋರಾಳಕರ ಅವರು ಸಹಸಂಚಾಲನೆಯ ಜವಾಬ್ದಾರಿಯನ್ನು ನಿಭಾಯಿಸಿದರು. ಕೊನೆ ವಿಜಯಕುಮಾರ ಸೋನರೆ ಎಲ್ಲರನ್ನು ವಂದಿಸಿದರು ಕ್ರಾಂತಿಗೀತೆಯೊಂದಿಗೆ ಕಾರ್ಯಕ್ರಮ ಮುಗಿಯಿತು

ರಾಜ್ಯ ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಿದೆ. ಅದರ ಹಿಂದೆ ಜನರ ಹಿತ ಏನಾದರೂ ಇದೆಯಾ ಎಂದು ದುರ್ಬೀನು ಹಾಕಿ ಹುಡುಕಿದರೂ ಏನೂ ಸಿಗದು. ಭ್ರಷ್ಟತೆ, ಲೂಟಿಕೋರತನಗಳೇ ಈ ತಿಕ್ಕಾಟದ ಮೂಲ ಎಂಬುದಕ್ಕೆ ಯಾವ ಸಂಶಯವೂ ಇಲ್ಲ. ಈ ನಡುವೆ ಪ್ರವಾಹ ಸಂತ್ರಸ್ತರ ಪಾಡನ್ನು ಕೇಳುವವರು ಯಾರು?



ಲಕ್ಷ ಲಕ್ಷ ಪ್ರವಾಹ ಸಂತ್ರಸ್ತರೆದುರು ಬಿಜೆಪಿಯ ಕಿತ್ತಾಟಗಳು

ಬಿ.ವಿ. ಶ್ರೀರಾಮರೆಡ್ಡಿ
ಮಾಜಿ ಶಾಸಕರು

ರಾಜ್ಯದ ಬಿ.ಜೆ.ಪಿ.ಯಲ್ಲಿನ ಆಂತರಿಕ ಬಿಕ್ಕಟ್ಟು ಉಲ್ಬಣಗೊಳ್ಳುತ್ತಿದೆ. ಬಿ.ಜೆ.ಪಿ. ಆಂತರಿಕ ಬಿಕ್ಕಟ್ಟು ಗುಂಪುಗಾರಿಕೆಗಳು ಕೇವಲ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕಳೆದ ಲೋಕಸಭಾ ಚುಣಾವಣೆಗಳ ನಂತರ ಬಿ.ಜೆ.ಪಿ.ಯ ಸ್ಥಿತಿ ತೀರಾ ಹದಗೆಟ್ಟಿದೆ. ಅದು ದಿಕ್ಕುದಿಸೆಯಿಲ್ಲದ ಒಂದು ರಾಷ್ಟ್ರಿಯ ಪಕ್ಷವಾಗಿದೆ. ಎಷ್ಟರವಮಟ್ಟಿಗೆ ಬಿಕ್ಕಟ್ಟು ಆಳವಾಗಿದೆಯೆಂದರೆ ಇತ್ತೀಚಿಗೆ ಮುಕ್ತಾಯವಾದ ಮೂರು ರಾಜ್ಯಗಳ ವಿಧಾನ ಸಭಾ ಚುಣಾವಣೆಗಳ ಪ್ರಚಾರಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಎಲ್.ಕೆ. ಅದ್ವಾಣಿಯವರನ್ನು ಪ್ರಚಾರಕ್ಕೂ ಯಾರು ಕರೆಯಲಿಲ್ಲ ಅಥವಾ ಅವರು ಹೋಗಲಿಲ್ಲವೆಂದರೆ ಅದು ಎಷ್ಟು ಪ್ರಪಾತಕ್ಕೆ ಹೋಗಿದೆ ಎಂಬುದು ತಿಳಿಯುತ್ತದೆ. ಮಹಾರಾಷ್ಟ್ರ, ಹರಿಯಾಣ ಮತ್ತು ಅರುಣಾಚಲ ಪ್ರದೇಶದ ರಾಜ್ಯಗಳಲ್ಲಿ ನಡೆದ ಚುಣಾವಣೆಯ ಫಲಿತಾಂಶದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಬಿ.ಜೆ.ಪಿ.ಯ ಆಂತರಿಕ ಬಿಕ್ಕಟ್ಟನ್ನು ನೋಡಬೇಕಾಗಿದೆ.

ಹೊಸದಲ್ಲ

ಕರ್ನಾಟಕದ ಬಿ.ಜೆ.ಪಿ.ಯಲ್ಲಿನ ಆಂತರಿಕ ಬಿಕ್ಕಟ್ಟು ಹೊಸದೇನು ಅಲ್ಲ. ಹತ್ತಾರು ವರ್ಷಗಳಿಂದ ಬಿ.ಜೆ.ಪಿ.ಯಲ್ಲಿ ಆಂತರಿಕ ಬಿಕ್ಕಟ್ಟು, ಭಿನ್ನಾಭಿಪ್ರಾಯಗಳು ಮತ್ತು ಗುಂಪುಗಾರಿಕೆ ನಡೆಯುತ್ತಲೇ ಇದೆ. ಇದರ ಜೊತೆಗೆ ಹೊಸ ಸೇರ್ಪಡೆ 'ರಾಜಕೀಯ ಬ್ಲಾಕ್‌ಮೇಲ್'. ಬ್ಲಾಕ್ ಮೈಲ್ ಎಂಬ ಪದ ರಾಜಕೀಯ ಪಕ್ಷಗಳಿಗೆ ತೀರ ಹೊಸದು. ಆದರೆ ಕರ್ನಾಟಕ ರಾಜ್ಯದಲ್ಲಿ ಬಿ.ಜೆ.ಪಿ.ಯಲ್ಲಿಯೇ ಈ ಬ್ಲಾಕ್‌ಮೈಲ್ ರಾಜಕಾರಣ ಹುಟ್ಟಿಕೊಂಡಿದೆ. ಅದರಲ್ಲೂ ಮುಖ್ಯವಾಗಿ ಬಳ್ಳಾರಿ ಗಣಿ ಮಾಫಿಯಾದ ಯಜಮಾನರು ಬಿ.ಜೆ.ಪಿ.ಗೆ ಸೇರ್ಪಡೆಯಾದಾಗಿನಿಂದಲೂ ಈ ಬ್ಲಾಕ್‌ಮೈಲ್ ರಾಜಕೀಯ ನಡೆಸುತ್ತಲೆ ಇದ್ದಾರೆ. ಅದನ್ನು ಬಿ.ಜೆ.ಪಿ. ಸಹಿಸುತ್ತಲೆ ಬಂದಿದೆ, ಸಹಿಸುತ್ತದೆ ಕೂಡ. ದೇಶ, ಸಮಾಜ, ಜನರು ಮತ್ತು ರಾಜಕೀಯ ತತ್ವಸಿದ್ದಾಂತಗಳ ಗಾಳಿ, ಗಂಧಗೊತ್ತಿಲ್ಲದ ಬ್ಲಾಕ್‌ಮಾರ್ಕೆಟ್ ದಂಧೆ ನಡೆಸುವ ಜನ ರಾಜಕೀಯಕ್ಕೆ ಬಂದರೆ ಇಂತಹ ಪರಿಸ್ಥಿತಿಯನ್ನು ಯಾವುದೇ ಪಕ್ಷ ಸಹಿಸಲೇಬೇಕಾಗುತ್ತದೆ. ಕೇವಲ ರಾಜಕೀಯ ಅಧಿಕಾರವನ್ನು ಹಿಡಿಯುವ ಒಂದೇ ಗುರಿಯಿಂದ ಏನನ್ನೂ ಮಾಡಲು ಹೇಸದ ಬಿಜೆಪಿಗೆ ಇದಕ್ಕಿಂತ ಉತ್ತಮವಾದ ಪರಿಸ್ಥಿತಿ ಹೇಗೆ ದೊರೆಯುತ್ತದೆ? ಇನ್ನು ತಮ್ಮ 3ನೇ ದರ್ಜೆ ವ್ಯಾಪಾರ 4 ನೇ ದರ್ಜೆಯ ಗೂಂಡಾ ಗಿರಿಯಿಂದ ರಾತ್ರೋರಾತ್ರಿ ಶ್ರೀಮಂತರಾದ ಜನರು ತಮ್ಮ ಹಣ, ಆಸ್ತಿ ಮತ್ತು ಕಳ್ಳ ದಂಧೆಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿಯೇ ರಾಜಕೀಯಕ್ಕೆ ಬಂದ ಜನಾರ್ಧನರೆಡ್ಡಿ ಮತ್ತು ಅವರ ಸಹಚರರಿಂದ ಇದಕ್ಕಿಂತ ಉತ್ತಮವಾದ ರಾಜಕೀಯ ಚಟುವಟಿಕೆಗಳನ್ನು ಹೇಗೆ ನಿರೀಕ್ಷಿಸಲು ಸಾಧ್ಯ?


'ಶಿಕ್ಷೆ'

ಬಿ.ಜೆ.ಪಿ.ಯಲ್ಲಿನ ಇಂದಿನ ಪರಿಸ್ಥಿತಿ ರಾಜಕೀಯ ಭಿನ್ನಾಭಿಪ್ರಾಯ ಮತ್ತು ಗುಂಪುಗಾರಿಕೆ ಮಾತ್ರವಲ್ಲ ನೂರಕ್ಕೆ ನೂರು ಪಾಲು 'ರಾಜಕೀಯ ಬ್ಲಾಕ್‌ಮೈಲ್'. ಹೌದು ರಾಜ್ಯದ ಬಿ.ಜೆ.ಪಿ.ಯಲ್ಲಿ ಎರಡು ಮೂರು ಗುಂಪುಗಳಿವೆ. ಈ ಗುಂಪುಗಳ ಪ್ರಧಾನ ನಾಯಕರು ಸಂಸದ ಅನಂತಕುಮಾರ್ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪ. ಬಿ.ಜೆ.ಪಿ.ಯಲ್ಲಿನ ಪರಂಪರಾಗತ ಭಿನ್ನಮತ ಇವರಿಬ್ಬರ ಮಧ್ಯೆ ಗಿರಿಕಿ ಹೊಡೆಯುತ್ತಿರುತ್ತದೆ. ಆದರೆ ಈಗಿನ ಭಿನ್ನಮತ ಇದರಿಂದ ಉಂಟಾಗಿರುವುದಲ್ಲಾ, ಕರ್ನಾಟಕ ರಾಜ್ಯದಲ್ಲಿ ಜನಸಂಘದ ಕಾಲದಿಂದಲೂ ಪಕ್ಷವನ್ನು ಕಟ್ಟಿ ಬೆಳೆಸಿದ ಎಲ್ಲ ಹಿರಿಯ ಕಿರಿಯ ಮುಖಂಡರನ್ನು

ಪುಟ 12 ಕ್ಕೆ

ಬಿಜೆಪಿಯೆಂಬುದೇ ಒಂದು ಕ್ಯಾನ್ಸರ್

ಬಿ.ಜೆ.ಪಿ.ಗೆ ಕಿಮೋಥೆರಿಫಿ ಮಾಡಿಸಿ ಎಂದು ಬಿ.ಜೆ.ಪಿ. ಸೈದ್ದಾಂತಿಕ ಮಾರ್ಗದರ್ಶಿ ಸಂಘಟನೆಯಾದ ಆರ್.ಎಸ್.ಎಸ್.ನ ನಾಯಕ ಮೋಹನ್ ಬಾಗವತ್ ಅವರು ಜೈಪುರದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಈ ಕಿಮೋಥೆರಿಫಿ ಕ್ಯಾನ್ಸರ್ ರೋಗಕ್ಕೆ ಮಾಡುವುದು. ಹಾಗಾದರೆ ಬಿ.ಜೆ.ಪಿ.ಗೆ ಕ್ಯಾನ್ಸರ್ ಬಂದಿದೆಯೆಂದು ಅದರ ಪೋಷಕರೇ ಒಪ್ಪಿದ್ದಾರೆ. ನುರಿತ ಕ್ಯಾನ್ಸರ್ ವೈದ್ಯರ ಪ್ರಕಾರ ಕಿಮೋಥೆರಫಿಯ ಹಂತವನ್ನು ತಲುಪಿದ ಯಾವುದೇ ರೋಗಿಯು ಬದುಕುವುದು ತುಂಬ ವಿರಳ. ಅಂದರೆ ಬಿ.ಜೆ.ಪಿ. ಸಾವಿನ ಅಂಚಿಗೆ ಬಂದಿದೆ ಎಂದಾಯಿತು. ಆದರೆ ಈ ಮೊದಲೇ ಸಿ.ಪಿ.ಐ(ಎಂ) ಮತ್ತು ಇತರೆ ಕೆಲವು ಬುದ್ದಿಜೀವಿಗಳು ಬಿ.ಜೆ.ಪಿ. ಎಂಬ ಈ ಕೋಮುವಾದಿ ಸಂಘಟನೆ ಈ ದೇಶಕ್ಕೆ ಆಗಿರುವ ಕ್ಯಾನ್ಸರ್ ಎಂದು ಹೇಳಿದ್ದನ್ನು ಇವರು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಕ್ಕೆ ಖಂಡಿತವಾಗಿ ವಂದನೆಗಳನ್ನು ಹೇಳಬೇಕಾಗಿದೆ.




ಈಗ ಕರ್ನಾಟಕಕ್ಕೆ ಹಿಡಿದಿರುವ ಈ ಅರ್ಬುದ ರೋಗವನ್ನು ಹೋಗಲಾಡಿಸಬೇಕು. ಕಾಂಗ್ರೆಸ್ಸಿಗೆ ಆ ಶಕ್ತಿ ಇಲ್ಲದೆ ಕೆಂಗೆಟ್ಟಿದೆ. ಕೆಂಗೆಟ್ಟ ಕಾಂಗ್ರೆಸ್ಸಿಗೆ ಜನಾರ್ದನರೆಡ್ಡಿ ಎಂಬ ಕ್ರಿಮಿನಲ್ ರಾಜಕಾರಣಿ ಸಹಾಯ ಮಾಡಬಲ್ಲರೇ? ಆದರೆ ಈ ರೆಡ್ಡಿ ಸಹೋದರರ ಬಂಡಾಯದ ಇತಿಹಾಸ ಬಲ್ಲವರು ಯಾರು ಇದನ್ನು ಒಪ್ಪುವುದಿಲ್ಲ.

ಕಾರಣ ಇವರದು ರಾಜಕೀಯ ಬಂಡಾಯವೂ ಅಲ್ಲ, ಸೈದ್ಧಾಂತಿಕ ಭಿನ್ನತೆಯು ಅಲ್ಲ. ಬದಲಿಗೆ 'ಬ್ಲಾಕ್ ಮೈಲ್' ರಾಜಕಾರಣ. ಇವರ ಬೇಡಿಕೆಗಳನ್ನು ಈಡೇರಿಸಿ ಇವರ ಹಿತಾಸಕ್ತಿಗಳನ್ನು ರಕ್ಷಿಸಿದರೆ ಇವರ ಬಂಡಾಯ ಬಡಾಯಿ ಆಗುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಈಗ ಇರುವ ಪ್ರಶ್ನೆ ಈ ಬ್ಲಾಕ್ ಮೈಲ್ ರಾಜಕಾರಣದ ದೊಂಬರಾಟದಲ್ಲಿ ಈ ರಾಜ್ಯದ ಜನರ ಗತಿಯೇನು? ನೆರೆ ಸಂತ್ರಸ್ಥರ ಪರಿಸ್ಥಿತಿಯೇನು? ಕೊಚ್ಚಿಹೋದ ಅವರ ಬದುಕು ಪುರ್ನನಿರ್ಮಾಣವಾಗುವುದು ಯಾವಾಗ? ಮಾಡುವವರು ಯಾರು? ಈಗಾಗಲೇ ಹರಿದು ಬಂದಿರುವ ಸಾವಿರಾರು ಕೋಟಿ ರೂಗಳ ಪರಿಹಾರಧನ- ನಿಜವಾದ ಸಂತ್ರಸ್ಥರಿಗೆ ತಲುಪುತ್ತಿಲ್ಲವೆಂಬ ದೂರುಗಳು ಕೇಳಿಬರುತ್ತಿದೆ. ನೆರೆ ಸಂತ್ರಸ್ತರ ಆಕ್ರಂದನ ಮುಗಿಲು ಮುಟ್ಟಿದೆ. ಬದುಕು ಬೀದಿಪಾಲಾಗಿದೆ. ಇವರ ಕಡೆ ಗಮನ ಹರಿಸುವವರಾರು? ಇನ್ನೊಂದು ಕಡೆ ಬರ. ಇಲ್ಲಿಯೂ ಜನ ಜಾನುವಾರುಗಳ ಸಮೇತ ಗುಳೆ ಹೊರಟಿದ್ದಾರೆ. ಇಂತಹ ಸಂಕಷ್ಟದ ಸ್ಥಿತಿ ರಾಜ್ಯದಲ್ಲಿದ್ದರೆ ಇವರು ರಾಜಕೀಯದ ದೊಂಬರಾಟದಲ್ಲಿ ಮುಳುಗಿದ್ದಾರೆ. ಇಂತಹ ಹೊಣೆಗೇಡಿಗಳಿಗೆ ಅಧಿಕಾರ ಕೊಟ್ಟ ಜನತೆ ಈಗ ತಪ್ಪು ಮಾಡಿದವೇನೋ ಅನ್ನುವಲ್ಲಿಗೆ ಬಂದಿದೆ. ಇನ್ನು ವಿರೋಧಿ ಪಕ್ಷಗಳು ಇದ್ದು ಇಲ್ಲದಂತಾಗಿವೆ. ದೇವೇಗೌಡರು ಯಡಿಯೂರಪ್ಪನಿಗೆ ಒಂದು ಕಡೆ ಶಬ್ಬಾಸ್‌ಗಿರಿ ಕೊಡುತ್ತಾರೆ. ಇನ್ನೊಂದು ಕಡೆ ಮನ್‌ಮೋಹನ್ ಸಿಂಗ್‌ರವರ 'ಪ್ರಾಮಾಣಿಕತೆ' ಯನ್ನು ಮೆಚ್ಚುತ್ತಾರೆ. ಯಥಾಪ್ರಕಾರ ಕಾಂಗ್ರೇಸ್ ತನ್ನ ಎಡಬಿಡಂಗಿತನವನ್ನು ಪ್ರದರ್ಶನ ಮಾಡುತ್ತಿದೆ. ಹಾಗಾಗಿ ಕರ್ನಾಟಕದ ಜನತೆ ಮಾತ್ರವೆ ಈ ಕ್ಯಾನ್ಸರ್ ರೋಗಿ ಬಿ.ಜೆ.ಪಿ.ಗೆ ಚಿಕಿತ್ಸೆ ಮಾಡಲು ಸಾಧ್ಯ. ○



ಇದು ಲವ್ ಜಿಹಾದ್ ಅಲ್ಲ ಮೋಹನನ ಕ್ರೌರ್ಯ

ಬಯಲಾಯಿತು ಬಜರಂಗಿಗಳ ಹಾವಳಿ



ಪಾತಕಿ ಮೋಹನ್

ಅಂದು ಅಕ್ಟೋಬರ್ 21. ಸಂಜೆ ಮಂಗಳೂರಿನ ಎಸ್‌ಪಿ ಕಚೇರಿಯಿಂದ ಬಿದ್ದ ಸುದ್ದಿ ರಾಜ್ಯದೆಲ್ಲೆಡೆ ಸ್ಫೋಟಿಸಿತು. ಕಳೆದ ಐದು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಕನಿಷ್ಠ 18 ಯುವತಿಯರನ್ನು ಮದುವೆಯಾಗುವುದಾಗಿ ನಂಬಿಸಿ ಕೊಲೆ ಮಾಡಿದ 'ಸೀರಿಯಲ್ ಕಿಲ್ಲರ್' ಮೋಹನ್ ಕುಮಾರ್ ಅಲಿಯಾಸ್ ಆನಂದನ ಬಂಧನ ಸುದ್ದಿ ರಾಜ್ಯದ ಜನತೆಯನ್ನೇ ಬೆಚ್ಚಿ ಬೀಳಿಸಿತು.

ಐದು ವರ್ಷಗಳಲ್ಲಿ ಈತ ನಡೆಸಿದ ಅಪರಾಧ ಕೃತ್ಯಗಳ ಸರಮಾಲೆ ಹೊರಬೀಳುತ್ತಲೇ ಕರಾವಳಿ ಮಾತ್ರವಲ್ಲ ರಾಜ್ಯದ ಜನತೆ ತತ್ತರಿಸಿತು. ಪ್ರೀತಿ-ಪ್ರೇಮದ ನಾಟಕವಾಡಿ ವರದಕ್ಷಿಣೆ ಇಲ್ಲದೆ ಮದುವೆ ಆಗುವುದಾಗಿ ಮೋಹನ ನಂಬಿಸಿದ್ದು ದಕ್ಷಿಣ ಕನ್ನಡ ಹಾಗೂ ಕಾಸರಗೋಡಿನ ದಲಿತ, ಹಿಂದುಳಿದ ಹಾಗೂ ಬಡ ಕುಟುಂಬದ ಹುಡುಗಿಯರನ್ನು.

1984ರಲ್ಲಿ ಸ್ಥಳೀಯ ಅಭ್ಯರ್ಥಿ ಎಂಬ ನೆಲೆಯಲ್ಲಿ ಗುತ್ತಿಗೆ ಆಧಾರದಲ್ಲಿ ಶಿಕ್ಷಕನಾಗಿ ಸರ್ಕಾರಿ ಸೇವೆ ಆರಂಭಿಸಿದ ಮೋಹನನ ಇನ್ನೊಂದು ವಿಕೃತ ಮುಖ ಅನಾವರಣ ಗೊಂಡಿದ್ದು ಹೀಗೆ. 2000ದಲ್ಲಿ ರತ್ನಮ್ಮ ಎಂಬ ಮಂಗಳೂರಿನ ನರ್ಸ್‌ನ್ನು ಮದುವೆಯಾಗುವ ನೆಪದಲ್ಲಿ ಧರ್ಮಸ್ಥಳಕ್ಕೆ ಕರೆದೊಯ್ದಿದ್ದ ಮೋಹನ್ ನೇತ್ರಾವತಿ ನದಿಗೆ ದೂಡಿದ್ದ. ಬದುಕಿ ಬಂದ ರತ್ನಮ್ಮ ವಂಚಕನ ವಿರುದ್ಧ ದೂರು ನೀಡಿದ್ದಳು. ಈ ಪ್ರಕರಣದಲ್ಲಿ ಎರಡು ವರ್ಷ ವಿಚಾರಣೆ ಎದುರಿಸಿದ್ದ ಮೋಹನ್ ಸೂಕ್ತ ಸಾಕ್ಷ್ಯಾಧಾರಗಳ ಕೊರತೆಯಿಂದ ಬಿಡುಗಡೆಯಾಗಿದ್ದ. ಆತನ ನಿಜವಾದ ಕುಕೃತ್ಯಗಳು ಆರಂಭವಾದದ್ದು ಈ ಬಳಿಕವೇ 2004 ರಿಂದೀಚೆಗೆ. ಈ ಐದು ವರ್ಷಗಳಲ್ಲಿ ಆತ ವಂಚಿಸಿದ ಯುವತಿಯರ ಲೆಕ್ಕ ಆತನಿಗೇ ಇಲ್ಲ. ಪೊಲೀಸರು ಕಲೆ ಹಾಕಿದ ಮಾಹಿತಿಗಳ ಪ್ರಕಾರ ಇದುವರೆಗೆ 19 ಕೇಸುಗಳ ಮಾಹಿತಿ ಇದೆ. ಇನ್ನೂ ನಾಲ್ಕೈದು ಯುವತಿಯರ ಕೊಲೆ ಮಾಡಿದ್ದೇನೆ ಎಂಬುದಾಗಿ ತನಿಖೆ ವೇಳೆ ಆತನೇ ಒಪ್ಪಿಕೊಂಡಿದ್ದಾನೆ. ಪಟ್ಟಿ ಬೆಳೆಯುತ್ತಲೇ ಇದೆ.

ಪೊಲೀಸರ ನಿರ್ಲಕ್ಷ್ಯ

ಹೌದು, ಕಳೆದ ಐದು ವರ್ಷಗಳಿಂದ ಆತ ಸಲೀಸಾಗಿ ಮುಗ್ದ ಯುವತಿಯರ ಕೊಲೆ ಮಾಡುತ್ತಲೇ ಬಂದಿದ್ದರೂ ಕಾನೂನು ಸಂರಕ್ಷಕರಾದ ಪೊಲೀಸರ ಕೈಯಿಂದ ತಪ್ಪಿಸಿಕೊಂಡೇ ಬಂದ. ಇದು ಪೊಲೀಸರ ನಿರ್ಲಕ್ಷ್ಯಕ್ಕೂ ಸಾಕ್ಷಿ. 10ಕ್ಕೂ ಹೆಚ್ಚು ಕೊಲೆಗಳು ನಡೆದದ್ದು ಮೈಸೂರಿನಲ್ಲಿ. ಇಲ್ಲಿನ ಬಸ್ ನಿಲ್ದಾಣದಲ್ಲಿ ಮುಗ್ಧ ಯುವತಿಯರು ಸಾಲುಸಾಲಾಗಿ ಪಬ್ಲಿಕ್ ಟಾಯ್ಲೆಟ್‌ನಲ್ಲಿ ಸೈನೆಡ್ ಸೇವಿಸಿ ಹತರಾದಾಗ ಪೊಲೀಸರು ನಿರ್ಲಕ್ಷಿಸಿದ್ದು ಏಕೆ? ಹಾಸನ, ಮಡಿಕೇರಿಯಲ್ಲೂ ಇದೇ ರೀತಿಯ ಪ್ರಕರಣ ಆದಾಗಲೂ ಕ್ರಮ ಕೈಗೊಳ್ಳದಿರುವುದ ಏಕೆ? ಇದೊಂದು ಅನಾಥ ಯುವತಿಯ 'ಲವ್ ಫೈಲ್' ಪ್ರಕರಣ ಎಂಬಂತೆ ಪೊಲೀಸರು ಪರಿಗಣಿಸಿಬಿಟ್ಟರು. ಇದಕ್ಕೂ ದೊಡ್ಡ ದುರಂತವೆಂದರೆ ಈ ಐದು ವರ್ಷಗಳಲ್ಲಿ ಮಂಗಳೂರಿನಲ್ಲಿ ನಾಪತ್ತೆಯಾದ ಯುವತಿಯರ ಸಂಖ್ಯೆ 60ಕ್ಕೂ ಹೆಚ್ಚು. ಬಹುತೇಕ ಪ್ರಕರಣಗಳಲ್ಲಿ ಮನೆಯವರು ದೂರು ನೀಡಲು ಹೋದಾಗ ಪೊಲೀಸರೇ ಹೀನಾಯವಾಗಿ



ನಡೆಸಿಕೊಂಡರು. ನಿಮ್ಮ ಮಗಳು ಯಾರನ್ನೋ ಕಟ್ಟಿಕೊಂಡು ಓಡಿ ಹೋಗಿರಬೇಕು ಎಂಬ ಮಾತುಗಳನ್ನೂ ಪೊಲೀಸರಿಂದ ಕೇಳಬೇಕಾಯಿತು. ಒಂದೆರಡು ತಿಂಗಳಲ್ಲಿ ವಾಪಸ್ ಆಗಬಹುದು ಎಂಬ ತೀರ್ಪು ನೀಡಿ ದೂರು ಬೇಡ ಎಂದು ಸಾಗಹಾಕಿದರು. ಈ ಪ್ರಕರಣ ಬೆಳಕಿಗೆ ಬಂದಾಗ, ಕೇಸು ಏಕೆ ನೀಡಲಿಲ್ಲ ಎಂದು ಮತ್ತೆ ಕುಟುಂಬದವರನ್ನೇ ಹೊಣೆ ಮಾಡಿದರು.

'ಲವ್ ಜೆಹಾದಿ'ಗೆ ಪೊಲೀಸರ ದಿಟ್ಟ ಉತ್ತರ

ಈ ಘಟನೆ ಮತ್ತೊಂದು ದಿಕ್ಕಿನಲ್ಲಿ 'ಲವ್ ಜೆಹಾದಿ' ಎಂಬ ಗುಲ್ಲಿಗೆ ಉತ್ತರವಾಯಿತು. ದಕ್ಷಿಣ ಕನ್ನಡದಲ್ಲಿ ವ್ಯಾಪಕವಾಗಿ ಹಿಂದೂ ಹುಡುಗಿರನ್ನು ಮುಸ್ಲಿಂ ಉಗ್ರವಾದಿಗಳು ಲವ್ ಮಾಡುತ್ತಿದ್ದಾರೆ. ಬಲವಂತದ ಮತಾಂತರ ಮಾಡಲಾಗುತ್ತಿದೆ ಎಂಬ ಗದ್ದಲ ಜಿಲ್ಲೆಯ ಶಾಂತಿ, ನೆಮ್ಮದಿಯನ್ನು ಕದಡಿಸಿತ್ತು. ಬಂಟ್ವಾಳದ ಬರಿಮಾರಿನ ಯುವತಿ ಅನಿತಾ ಎಂಬಾಕೆ ಮುಸ್ಲಿಂ ಆಗಿ ಮತಾಂತರಗೊಂಡಿದ್ದಾರೆ. ಕೇರಳದ ಮದರಸಾವೊಂದರಲ್ಲಿ ಯಾತನೆ ಅನುಭವಿಸುತ್ತಿದ್ದಾಳೆ ಎಂಬ ಮಾತುಗಳೂ ಸಂಘ ಪರಿವಾರದ ಕಡೆಯಿಂದ ಕೇಳಿಬಂದಿತ್ತು. ಬಂಟ್ವಾಳ ಪೊಲೀಸ್ ಠಾಣೆಯ ಮುಂದೆ ಈ ಬಗ್ಗೆ ಪ್ರತಿಭಟನೆಯೂ ನಡೆಯಿತು. ಇತ್ತೀಚೆಗೆ ಸಂಘ ಪರಿವಾರದ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ವಜ್ರದೇಹಿ ಮಠದ ರಾಜಶೇಖರಾನಂದ ಎಂಬ ಸ್ವಾಮೀಜಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಚೆಡ್ಡಿಗಳ ಮುಖಂಡ ನಾಗರಾಜ ಶೆಟ್ಟಿ, ಬಜರಂಗದಳದ ಪುಡ್ಡೆಗಳು ಲವ್ ಜೆಹಾದಿ ಬಗ್ಗೆ ಬಾಯಿಗೆ ಬಂದದ್ದನ್ನು ಹೇಳಿದರು. ಅನಿತಾಳನ್ನು ಪತ್ತೆ ಹಚ್ಚದಿದ್ದಲ್ಲಿ ದೊಡ್ಡ ಹೋರಾಟವನ್ನೇ ಮಾಡುವುದಾಗಿ ಘೋಷಿಸಿದರು.

ಪೊಲೀಸರು ಈ ಪ್ರಕರಣದ ತನಿಖೆಗೆ ವಿಶೇಷ ತಂಡವನ್ನೇ ರಚಿಸಿದರು. ಅನಿತಾ ಪತ್ತೆಗೆ ತೊಡಗಿದ್ದ ಈ ತಂಡ ನಡೆಸಿದ ತನಿಖೆ ಸ್ಫೋಟಕ ಮಾಹಿತಿಯನ್ನೇ ಹೊರ ಹಾಕಿತು. ಅನಿತಾಳ ಮೊಬೈಲ್‌ಗೆ ಬಂದ ರೆಗಳ ಜಾಡು ಹಿಡಿದ ಪೊಲೀಸರಿಗೆ ಕುತೂಹಲ ವ ಹಿತಿ ದೊರೆಯಿತು. ಅನಿತಾಳ ಮೊಬೈಲ್‌ಗೆ ಈ ಹಿಂದೆ ನಾಪತ್ತೆಯಾದ ಹುಡುಗಿಯರ ಮೊಬೈಲ್‌ನಿಂದ ಕರೆಗಳು ಬಂದಿದ್ದವು. ಹಾಗೆಯೇ ತನಿಖೆ ಮುಂದುವರಿದಾಗ ಹಲವು ನಾಪತ್ತೆಯಾದ ಹುಡುಗಿಯರ ಮೊಬೈಲ್‌ಗಳ ಸಂಖ್ಯೆ ಸಿಕ್ಕಿತು. ಪೊಲೀಸರಿಗೆ ಇದೊಂದು ಸರಣಿ ಯುವತಿಯರ ಅಪಹರಣ ಜಾಲ ಎಂಬ ಸುಳಿವು ಲಭಿಸಿತ್ತು. ಇನ್ನಷ್ಟು ತನಿಖೆ ನಡೆದಾಗ ಮೋಹನ್ ಎಂಬ ಸೀರಿಯಲ್ ಕಿಲ್ಲರ್ ಮೋಹನನ ಕರಾಳ ಕೃತ್ಯಗಳು ಅನಾವರಣವಾಯಿತು.

ಮುಖಭಂಗಕ್ಕೊಳಗಾದ ಸಂಘ ಪರಿವಾರ

ಕರಾವಳಿಯಲ್ಲಿ ಎರಡು ಕೋಮುಗಳ ನಡುವೆ ಕಂದರ ಇದ್ದರೆ ಮಾತ್ರ ಮತಾಂಧ ಶಕ್ತಿಗಳ ಬೇಳೆ ಬೇಯುವುದು. ಈ ಬಗ್ಗೆ ಸ್ಪಷ್ಟ ಅರಿವು ಇದ್ದ ಸಂಘ ಪರಿವಾರ ಗಲಭೆ ಸೃಷ್ಟಿಸಲು ಇನ್ನಿಲ್ಲದ ಪ್ರಯತ್ನ ನಡೆಸಿದ್ದು ಇದೀಗ ಇತಿಹಾಸ. ಎಲ್ಲೆಡೆ 'ಮೋರಲ್ ಪೊಲೀಸಿಂಗ್' ನೆಪದಲ್ಲಿ ತನ್ನದೇ ಪಡೆಯನ್ನು ಕಟ್ಟಿಕೊಂಡು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಸುತ್ತಾ ಬಂದ ಸಂಘ ಪರಿವಾರದ ಬಗ್ಗೆ ಜನತೆ ಸಹನೆ ಕಳೆದುಕೊಂಡಿದ್ದರು. ಮತ್ತೆ ಈ ಜನಗಳ ಒಲವು ಗಳಿಸಲು ಈ ಪಡೆಗಳು ಹಾಕಿದ ದಾಳವೇ ಲವ್ ಜಿಹಾದ್. ನಾಪತ್ತೆಯಾದ ಹುಡುಗಿಯರೂ ಲವ್ ಜಿಹಾದ್ ಎಂಬ ಸುಳಿಗೆ ಸಿಲುಕಿದ್ದರು ಎಂಬಂತೆ ಬಿಂಬಿಸಲಾಯಿತು. ಮಂಗಳೂರಿನ ಕೆಲ ಪತ್ರಕರ್ತರೂ, ಪತ್ರಿಕೆಗಳೂ ಇದಕ್ಕೆ ಸೊಪ್ಪು ಹಾಕಿದರು. ಇದೊಂದು ಸಾಮಾಜಿಕ ಪಿಡುಗು ಎಂಬಂತೆ ಗಾಳಿಸುದ್ದಿಗಳು, ಕಪೋಲಕಲ್ಪಿತ ಸುದ್ದಿಗಳ ಬಿತ್ತರವಾದವು. ಆದರೆ, ಇದೆಲ್ಲವೂ ಈಗ ನೀರಿನ ಮೇಲಿನ ಗುಳ್ಳೆ ಎಂಬಂತೆ ಒಡೆದು ಹೋಯಿತು. ಸುಳ್ಳನ್ನು ಪದೇ ಪದೇ ಹೇಳಿದರೆ ಸತ್ಯವಾಗುತ್ತದೆ ಎಂಬ ಹಿಟ್ಲರ್ ಚೇಲಾ ಗೊಬೆಲ್ಸ್ ಮಾತನ್ನು ನಂಬಿದ ಮತಾಂಧರಿಗೆ ತಕ್ಕ ಪಾಠ ಕಲಿಸಿದಂತಾಗಿದೆ.

○

ರಾಜ್ಯೋತ್ಸವ...

ನಿರುದ್ಯೋಗ ಹೆಚ್ಚುತ್ತಿದೆ. ದಲಿತರು, ಮಹಿಳೆಯರು, ದುರ್ಬಲರು, ದುಡಿಯುವ ಜನತೆಯ ಮೇಲೆ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ಸ್ವಾತಂತ್ರ್ಯ ಸಂಗ್ರಾಮದ, ಭಾಷಾವಾರು ಪ್ರಾಂತ್ಯ ರಚನೆಯ ಆಶಯಗಳು ಮೂಲಭೂತವಾಗಿ ಈಡೇರಿಲ್ಲ.

ಈಗಂತೂ ಭಾಷಾವಾರು ಪ್ರಾಂತ್ಯಗಳಿಗೆ, ಕನ್ನಡದಂತಹ ವಿವಿಧ ಭಾರತೀಯ ಭಾಷೆಗಳ ಬೆಳವಣಿಗೆಗೆ ವಿರೋಧವಾಗಿರುವ ಏಕ ಭಾಷೆ, ಏಕ ಸಂಸ್ಕೃತಿಯ ಫ್ಯಾಸಿಸ್ಟ್ ಮಾದರಿಯ ಬಿಜೆಪಿ -ಸಂಘ ಪರಿವಾರ ಅಧಿಕಾರದಲ್ಲಿರುವಾಗ ಅಪಾಯ ಇನ್ನೂ ಹೆಚ್ಚಾಗಿದೆ. ಜನರ ಒಗ್ಗಟ್ಟಿಗೆ ಮಾರಕವಾಗಿರುವ ಕೋಮುವಾದ ತನ್ನ ಕರಾಳ ಹಸ್ತವನ್ನು ಎಲ್ಲೆಡೆಗಳಲ್ಲಿಯೂ ಚಾಚುತ್ತಿದೆ. ರಾಜ್ಯವನ್ನು ಒಡೆದು ಸಣ್ಣ ರಾಜ್ಯಗಳನ್ನಾಗಿಸಲು ಪ್ರತಿಪಾದಿಸುತ್ತಾ ಒಂದಾದ ನಾಡನ್ನು ತುಂಡಾಗಿಸಲು ಯತ್ನಿಸುತ್ತಿದೆ. ಅನ್ಯ ಭಾಷಾ ದ್ವೇಷ, ಈ ನಡುವೆ ಭಾಷಾಂಧ, ಪ್ರತ್ಯೇಕತೆಯ ಶಕ್ತಿಗಳ ಹೂಂಕಾರ ನಿಂತಿಲ್ಲ.

ನೈಸರ್ಗಿಕ ಸಂಪನ್ಮೂಲಗಳ ಲೂಟಿಗೆ, ಮುಕ್ತ ಅವಕಾಶ ಕಲ್ಪಿಸಿದೆ. ಆಹಾರದ ಹಕ್ಕನ್ನು ಕಿತ್ತುಕೊಳ್ಳುತ್ತಿದೆ. ಭೂ ದಂಧೆಗಾರರ ಭ್ರಷ್ಟ ಮಾಫಿಯಾ ಕೂಟ ಸರ್ಕಾರದಲ್ಲಿ ಮೇಲುಗೈ ಪಡೆಯುತ್ತಿದೆ. ಇದು ನಿಜಕ್ಕೂ ಗಂಭೀರ ಸನ್ನಿವೇಶ.

ಆದ್ದರಿಂದ ಒಂದೆಡೆ ರಾಜ್ಯಗಳ ಹಕ್ಕು ಬೆಳವಣಿಗೆಗಳ ಮೇಲೆ ದಾಳಿ ಮಾಡುತ್ತಾ, ರಾಜ್ಯಗಳನ್ನು ಒಕ್ಕೂಟದ ವ್ಯವಸ್ಥೆಯ ಭಾಗವಾಗಿ ನೋಡದೇ ಸರ್ವಾಧಿಕಾರದ ಮೂಲಕ ರಾಜ್ಯಗಳನ್ನು ದುರ್ಬಲಗೊಳಿಸುವ ಕೇಂದ್ರದ ಪ್ರಯತ್ನಗಳ ಒಕ್ಕೂಟದ, ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮಾರಕ.

ಈ ಸನ್ನಿವೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಭಾಷಾವಾರು ಪ್ರಾಂತ್ಯಗಳ ರಚನೆಯ ಆಶಯಗಳು ಸಾಕಾರಗೊಳ್ಳಬೇಕಾದಲ್ಲಿ ಐಕ್ಯತೆಯುಳ್ಳ ಜನತೆಯ ಶ್ರಮಜೀವಿಗಳ, ಪ್ರಜಾಸತ್ತಾತ್ಮಕ ಹೋರಾಟಗಳು ಬೆಳೆಯಬೇಕು. ಆಮೂಲಾಗ್ರ ಬದಲಾವಣೆಯ ಈ ಹೋರಾಟಗಳು ಮಾತ್ರವೇ ಈ ನಾಡನ್ನು ಭಾಷೆ-ಸಂಸ್ಕೃತಿ- ಬದುಕನ್ನು ಕಾಯಲು ಸಾಧ್ಯ. ರಾಜ್ಯೋತ್ಸವದ ದಿನ ಹೋರಾಟದ ಸಂಕಲ್ಪದ ದಿನವಾಗಲಿ.

○

ಗಂಟೆಗೆ 120ಕಿ.ಮೀ ವೇಗದಲ್ಲಿ ಚಲಿಸುವ ಭುವನೇಶ್ವರ-ದಿಲ್ಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಶಾಂತಿಯುತವಾಗಿ ನಿಂತು ಬಿಟ್ಟಿತು ಹೇಗೆ? -ಇಂತಹ ಒಂದು ದಾಳಿ ನಡೆಯುತ್ತದೆಯೆಂದು ತನಗೆ ಮೊದಲೇ ಗೊತ್ತಿತ್ತು ಎಂದು ಕೇಂದ್ರ ಮಂತ್ರಿಗಳೊಬ್ಬರು ಹೆಮ್ಮೆಯಿಂದ ಹೇಳಿಕೊಳ್ಳಲು ಹೇಗೆ ಸಾಧ್ಯವಾಯಿತು? -ಆರಂಭದಲ್ಲಿ ಇದಕ್ಕೆ ಸಿಪಿಐ(ಎಂ)ನ್ನು ದೂಷಿಸಿದ ರೈಲು ಮಂತ್ರಿಗಳು ಮಾವೋವಾದಿಗಳೊಂದಿಗೆ ಮಾತುಕತೆಗೆ ಸಿದ್ಧ, ಸೂಕ್ತ ಸ್ಥಳ ಸೂಚಿಸಿ ಎಂದೇಕೆ ಹೇಳಿದರು? -ರೈಲ್ವೇ ಇಲಾಖೆ ಈ ಘಟನೆಯ ಬಗ್ಗೆ ಸಲ್ಲಿಸಿದ ಮೊದಲ ಪ್ರಥಮ ಮಾಹಿತಿ ವರದಿ(ಎಫ್‌ಐಆರ್)ಯಲ್ಲಿ ಮಾವೋವಾದಿಗಳ ಪ್ರಸ್ತಾಪವೂ ಇರಲಿಲ್ಲ ಏಕೆ, ನಂತರ ಸೇರಿಸಿದ್ದೇಕೆ? ಇವೆಲ್ಲಾ ಇಂದು ಗಂಭೀರ ತನಿಖೆಗೊಳಬೇಕಾದ ಪ್ರಶ್ನೆಗಳು.

ಸಂಪುಟದಲ್ಲಿ ಇರುವ ಒಂದು ಪಕ್ಷದಿಂದಲೇ ಅದೇ ಮಾವೋವಾದಿಗಳಿಗೆ ಮತ್ತು ಅವರ ಭಯೋತ್ಪಾದಕ ಚಟುವಟಿಕೆಗಳಿಗೆ ಬೆಂಬಲ ಸಿಗುತ್ತಿದೆ ಎಂಬುದು ನಿಜಕ್ಕೂ ಒಂದು ವ್ಯಂಗ್ಯವೇ. ಇಂತಹ ನಗ್ನ ವಿರೋಧಾಭಾಸಗಳ ನಡುವೆಯೂ ಈ ಯುಪಿಎ ಸರಕಾರ ಯಾವುದೇ ಮುಜುಗರವಿಲ್ಲದೆ ಮುಂದುವರೆಯುತ್ತಿದೆ ಎಂಬುದು ನಮ್ಮ ದೇಶಕ್ಕೊಂದು ದುರಂತ. ಪ್ರಧಾನ ಮಂತ್ರಿಗಳು ದೇಶಕ್ಕೆ ಉತ್ತರ

ರಾಜಕೀಯ ಸಮಯಸಾಧಕತನಕ್ಕೆ ರಾಷ್ಟ್ರೀಯ ಐಕ್ಯತೆ ಬಲಿಯಾಗಬೇಕೆ?

ಭುವನೇಶ್ವರ-ದಿಲ್ಲಿ ರಾಜಧಾನಿ ಎಕ್ಸ್‌ಪ್ರೆಸ್‌ನ್ನು ಪಶ್ಚಿಮ ಬಂಗಾಲದ ಜರಗ್ರಾಂ ಬಳಿ ಮಾವೋವಾದಿಗಳು ಐದು ಗಂಟೆಗಳ ಕಾಲ ತಡೆಹಿಡಿದದ್ದು ಈಗ ದೊಡ್ಡ ಸುದ್ದಿಯಾಗಿದೆ. ಭದ್ರತಾ ಪಡೆಗಳ ಜಂಟಿ ಕಾರ್ಯಾಚರಣೆಯಿಂದಾಗಿ ಸಾವು-ನೋವುಗಳು ಸಂಭವಿಸಲಿಲ್ಲ. ರೈಲು ನಿಲ್ಲಿಸಿದವರು ಅದರ ಮೇಲೆ ಮೂಡಿಸಿದ ಚಿತ್ತಾರವನ್ನು ನೋಡಿದರೆ ಇದು ಅಸಹಾಯಕ ಬುಡಕಟ್ಟು ಜನಗಳ ಕೃತ್ಯವಲ್ಲ, ಬದಲಿಗೆ ಇದರಲ್ಲಿ ಪಳಗಿದವರ ಕೃತ್ಯ, ಇತ್ತೀಚಿಗೆ ಬಂಧಿತನಾದ ಛತ್ರಧರ ಮಹತೋ ಬಿಡುಗಡೆಗಾಗಿ ಮಾಡಿದ ಕೆಲಸ ಎಂದು ಅಂದಾಜು ಮಾಡಬಹುದು.


ಈ ಇಡೀ ಘಟನೆ ಹಲವು ಪ್ರಶ್ನೆಗಳನ್ನು ಎತ್ತಿದೆ. ಇವುಗಳ ಅಮೂಲಾಗ್ರ ವಿಚಾರಣೆ ಅಗತ್ಯವಾಗಿದೆ. ರಾಜಧಾನಿ ಮತ್ತು ಶತಾಬ್ದಿ ರೈಲುಗಳು ಅತಿ ವೇಗದಲ್ಲಿ, ಗಂಟೆಗೆ 120ಕಿ.ಮೀ ವೇಗದಲ್ಲಿ ಚಲಿಸುವ ರೈಲುಗಳು. ಹಳಿಗಳ ಮೇಲೆ ಏನಾದರೂ ಅಡಚಣೆ ಕಂಡಾಗ ತಕ್ಷಣ ಬ್ರೇಕ್ ಹಾಕಿದರೆ ರೈಲಿಗೂ, ಹಳಿಗೂ ಎರಡಕ್ಕೂ ಧಕ್ಕೆ ತರುವ ಸಂಭವವೇ ಹೆಚ್ಚು. ಆದರೆ ಇಲ್ಲಿ ಹಾಗಾಗಲಿಲ್ಲ. ರೈಲು ಶಾಂತಿಯುತವಾಗಿ ನಿಂತು ಬಿಟ್ಟಿತು.

ರೈಲು ಮಂತ್ರಿಗಳು ತಮ್ಮ ಎಂದಿನ ಅಬ್ಬರದಲ್ಲಿ ಸಿಪಿಐ(ಎಂ) ಕಾರ್ಯಕರ್ತರೇ ತನ್ನ ಪ್ರತಿಷ್ಠೆಗೆ ಮಸಿ ಬಳಿಯಲು ಇದನ್ನು ಮಾಡಿದ್ದಾರೆ ಎಂದೇ ತಕ್ಷಣ ಪ್ರತಿಕ್ರಿಯಿಸಿದರು. ಇದು ಮಾವೋವಾದಿಗಳ ಕೃತ್ಯ ಎಂಬುದು ರೈಲಿನ ಮೇಲಿನ ಚಿತ್ತಾರದಿಂದ ಸ್ಪಷ್ಟವಾದಾಗ ತಾನು ಮಾವೋವಾದಿಗಳೊಂದಿಗೆ ಮಾತುಕತೆಗೆ ಸಿದ್ಧ, ಸೂಕ್ತ ಸ್ಥಳ ಸೂಚಿಸಿ ಎಂದೂ ಹೇಳಿದರು. ಇಷ್ಟೇ ಅಲ್ಲ, ಕೇಂದ್ರ ಸಂಪುಟದಲ್ಲಿ ಮಂತ್ರಿಯಾಗಿರುವ ತೃಣಮೂಲಿಗ ಶಿಶಿರ ಅಧಿಕಾರಿ ಎಂಬಾತ ಇಂತಹ ಒಂದು ದಾಳಿ ನಡೆಯುತ್ತದೆಯೆಂದು ತನಗೆ ಮೊದಲೇ ಗೊತ್ತಿತ್ತು ಎಂದು ಹೆಮ್ಮೆಯಿಂದ ಹೇಳಿಕೊಂಡರು. ತನ್ನ ಸಂಪುಟ ಸಹಯೋಗಿಗೆ ಇದು ಹೇಗೆ ಗೊತ್ತಾಯಿತು ಎಂದು ಪ್ರಧಾನ ಮಂತ್ರಿಗಳು ತನಿಖೆ ಮಾಡಿ ದೇಶಕ್ಕೆ ತಿಳಿಸುವುದು ಅಗತ್ಯ.

ರಾಜಕೀಯ ಶಾಮೀಲು

ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳ ನಡುವಿನ ಶಾಮೀಲಿನ ಬಗ್ಗೆ ಈಗಾಗಲೇ ಹಿಂದಿನ ಸಂಚಿಕೆಗಳಲ್ಲಿ ನೋಡಿದ್ದೇವೆ. ಛತ್ರಧರ ಮಹತೋ 'ಜನತಾ ಸಂಗ್ರಾಮ ಸಮಿತಿ'ಯ ಮುಖ್ಯಸ್ಥನಾಗುವ ಮೊದಲು ಸ್ಥಳೀಯ ತೃಣಮೂಲಿಗನಾಗಿದ್ದ. ಮಾವೋವಾದಿಗಳ ಪ್ರಚಾರಪ್ರಿಯ ಸ್ವಘೋಷಿತ ವಕ್ತಾರ ಕಿಶನ್‌ಜಿ ಈ ಹಿಂದೆ ಮಮತಾ ಬ್ಯಾನರ್ಜಿ ಪಶ್ಚಿಮ ಬಂಗಾಳದ ಮುಂದಿನ ಮುಖ್ಯ ಮಂತ್ರಿ ಎಂದೂ ಸಾರಿದ್ದ. ಈ ಹಿಂದೆ ತಾವು ನಂದಿಗ್ರಾಮ ಮತ್ತು ಲಾಲಗಡದಲ್ಲಿ ತೃಣಮೂಲಿಗಳಿಗೆ ಒದಗಿಸಿದ ನೆರವಿಗೆ ಪ್ರತಿಯಾಗಿ ಅವರೀಗ ತಮ್ಮನ್ನು ಬೆಂಬಲಿಸಬೇಕು ಎಂದೂ ಸೂಚಿಸಿದ್ದ. ಅಂದರೆ ಮಾವೋವಾದಿಗಳು ಪಶ್ಚಿಮ ಬಂಗಾಲದಲ್ಲಿ ತಮ್ಮ ಕಾರ್ಯಾಚರಣೆ ಆರಂಭಿಸಿದ್ದು ತೃಣಮೂಲ ಕಾಂಗ್ರೆಸಿನ ಕೃಪಾಪೋಷಣೆ ಮತ್ತು ರಕ್ಷಣೆಯಲ್ಲಿ ಎಂದು ಮತ್ತೊಮ್ಮೆ ಸ್ಪಷ್ಟವಾಗುತ್ತದೆ.

ಈ ರಾಜಕೀಯ ಶಾಮೀಲಿನಿಂದಾಗಿಯೇ ಮಾವೋವಾದಿಗಳು ಈ ಕೃತ್ಯವನ್ನು ತಾವೇ ಮಾಡಿದ್ದು ಎಂದು ಹೇಳಿಕೊಂಡರೂ ತೃಣಮೂಲ ಕಾಂಗ್ರೆಸ್ ಅದನ್ನು ಖಂಡಿಸಿಲ್ಲ. ಅಷ್ಟೇ ಅಲ್ಲ, ರೈಲ್ವೇ ಇಲಾಖೆ ಈ ಘಟನೆಯ ಬಗ್ಗೆ ಸಲ್ಲಿಸಿದ ಪ್ರಥಮ ಮಾಹಿತಿ ವರದಿ(ಎಫ್‌ಐಆರ್)ಯಲ್ಲಿ ಮಾವೋವಾದಿಗಳ ಪ್ರಸ್ತಾಪವೂ ಇಲ್ಲ. ಮಾವೋವಾದಿಗಳ 'ಜನತಾ ಸಂಗ್ರಾಮ ಸಮಿತಿ' ಮುಖಂಡರಲ್ಲಿ ಒಬ್ಬನಾದ ಸಂತೋಷ ಪತ್ರಾನನ್ನು ಎಲ್ಲರೂ ಸ್ಪಷ್ಟವಾಗಿ ಗುರುತಿಸಿದರೂ



ರೈಲ್ವೇ ಅಧಿಕಾರಿಗಳು ಆತನ ವಿರುದ್ಧ ಯಾವುದೇ ಮೊಕದ್ದಮೆ ಹಾಕಿಲ್ಲ. ಮಾವೋವಾದಿ ಭಯೋತ್ಪಾದನೆಯ ವಿರುದ್ಧ ಕಾರ್ಯಾಚರಣೆಗಳಲ್ಲಿ ಕೇಂದ್ರೀಯ ಪಡೆಗಳನ್ನು ಹಿಂತೆಗೆದುಕೊಳ್ಳಿ ಎಂದು ತೃಣಮೂಲ ಕಾಂಗ್ರೆಸ್ ಒತ್ತಾಯಿಸಿರುವುದು ಕೂಡಾ ಈ ರಾಜಕೀಯ ಶಾಮೀಲಿನಿಂದಾಗಿಯೇ(ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕೇಂದ್ರೀಯ ರೈಲ್ವೇ ರಕ್ಷಣಾ ಪಡೆ ಎರಡನೇ ಎಫ್ ಐಆರ್ ಸಲ್ಲಿಸಿದೆ, ಇದರಲ್ಲಿ ಮಾವೋವಾದಿಗಳನ್ನು ಹೆಸರಿಸಲಾಗಿದೆ ಎಂದು ವರದಿಯಾಗಿದೆ).

ಪ್ರಧಾನಿಗಳು ಉತ್ತರಿಸಬೇಕಾಗಿದೆ

ಮಾವೋವಾದಿ ಹಿಂಸಾಚಾರ ದೇಶದ ಆಂತರಿಕ ಭದ್ರತೆಗೆ ಅತ್ಯಂತ ಗಂಭೀರ ಬೆದರಿಕೆ ಎಂದು ಹಲವು ಬಾರಿ ಹೇಳಿರುವ ಪ್ರಧಾನಿಗಳ ಕೊಡಬೇಕಾಗಿದೆ.

ಈ ನಡುವೆ ರೈಲ್ವೇ ನೌಕರರ ನಡುವೆ ಅಭದ್ರತೆಯಿಂದಾಗಿ ಅಸಂತೋಷ ಹಬ್ಬುತ್ತಿದೆ. ರೈಲು ನಿಲ್ದಾಣಗಳು, ಹಳಿಗಳು ಮತ್ತು ರೈಲು ಸೌಕರ್ಯಗಳ ಮೇಲೆ ಹೆಚ್ಚುತ್ತಿರುವ ಮಾವೋವಾದಿ ದಾಳಿಗಳಿಂದ ರೈಲ್ವೇ ಸಿಬ್ಬಂದಿಗೆ ಸಾಕಷ್ಟು ರಕ್ಷಣೆ ಸಿಗುತ್ತಿಲ್ಲ ಎಂದು ಪುರುಲಿಯಾದ ಒಬ್ಬ ರೈಲ್ವೇ ನೌಕರರ ಸಂಘದ ಮುಖಂಡರು ಹೇಳಿದ್ದಾರೆ. ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳ ರಾಜಕೀಯ ಶಾಮೀಲಿನಿಂದಾಗಿ ತೃಣಮೂಲ ಮುಖ್ಯಸ್ಥೆ ರೈಲು ಮಂತ್ರಿಯಾಗಿರುವ ವರೆಗೆ ಪರಿಸ್ಥಿತಿ ಸುಧಾರಿಸದು ಎಂಬುದು ರೈಲ್ವೇ ನೌಕರರ ಭಾವನೆ.

ಇವೆಲ್ಲಾ ಇಂದು ಗಂಭೀರ ವಿಚಾರಣೆಗೊಳಬೇಕಾದ ಪ್ರಶ್ನೆಗಳು. ದೇಶದ ಐಕ್ಯತೆ ಮತ್ತು ಸಮಗ್ರತೆಯ ಒಂದು ಮಹತ್ವದ ಸಾಧನವಾದ ಭಾರತೀಯ ರೈಲ್ವೇಯ ಭದ್ರತೆಯನ್ನು ಮಾವೋವಾದಿಗಳನ್ನು ಪೋಷಿಸುವ ಮತ್ತು ರಕ್ಷಿಸುವ ಹೊಲಸು ರಾಜಕೀಯ ಸಮಯಸಾಧಕತನಕ್ಕೆ ಬಲಿಗೊಡಲು ಬಿಡಬೇಕೇ? ಈ ಮೂಲಕ ನಮ್ಮ ದೇಶದ ಆಂತರಿಕ ಭದ್ರತೆಗೆ ಗಂಭೀರ ಬೆದರಿಕೆಗಳನ್ನು ಒಡ್ಡಲು ಅವಕಾಶ ಕೊಡಬೇಕೇ?ಭಾರತದ ಆಂತರಿಕ ಭದ್ರತೆಗೆ ಸಂಚಕಾರ ಬರಲು ಬಿಡುವುದಿಲ್ಲ ಎಂದು ಪ್ರಧಾನ ಂತ್ರಿಗಳು ಹಾಗೂ ಅವರ ಯುಪಿಎ-2 ಸರಕಾರ ಜನತೆಗೆ ಭರವಸೆ ಕೊಡಬೇಕಾಗಿದೆ. ಈ ಎಲ್ಲಾ ಪ್ರಶ್ನೆಗಳ ಮೇಲೆ ತುರ್ತಾಗಿ ಒಂದು ಆಮೂಲಾಗ್ರ ತನಿಖೆಯ ಆದೇಶ ಕೊಡಬೇಕು ಹಾಗೂ ನಮ್ಮ ದೇಶದ ಹಿತಾಸಕ್ತಿಗಳನ್ನು ಹಾಳುಗೆಡಹುವವರು ಮತ್ತು ಅಮಾಯಕ ಜನಗಳ ಜೀವಗಳಿಗೆ ಬೆದರಿಕೆ ಒಡ್ಡುತ್ತಿರುವವವರು ಜವಾಬುದಾರ ರಾಗುವಂತೆ ಮಾಡಬೇಕಾಗಿದೆ.

('ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ)

ಮಾವೋವಾದಿ ಹಿಂಸಾಚಾರ ದೇಶದ ಆಂತರಿಕ ಭದ್ರತೆಗೆ ಅತ್ಯಂತ ಗಂಭೀರ ಬೆದರಿಕೆ ಎಂದು ಹಲವು ಬಾರಿ ಹೇಳಿರುವ ಒಬ್ಬ ಪ್ರಧಾನಿಗಳ ಸಂಪುಟದಲ್ಲಿ ಇರುವ ಒಂದು ಪಕ್ಷದಿಂದಲೇ ಅದೇ ಮಾವೋವಾದಿಗಳಿಗೆ ಮತ್ತು ಅವರ ಭಯೋತ್ಪಾದಕ ಚಟುವಟಿಕೆಗಳಿಗೆ ಬೆಂಬಲ ಸಿಗುತ್ತಿದೆ ಎಂಬುದು ನಿಜಕ್ಕೂ ಒಂದು ವ್ಯಂಗ್ಯವೇ. ಇಂತಹ ನಗ್ನ ವಿರೋಧಾಭಾಸಗಳ ನಡುವೆಯೂ ಈ ಯುಪಿಎ ಸರಕಾರ ಯಾವುದೇ ಮುಜುಗರವಿಲ್ಲದೆ ಮುಂದುವರೆಯುತ್ತಿದೆ ಎಂಬುದು ನಮ್ಮ ದೇಶಕ್ಕೊಂದು ದುರಂತ. ಪ್ರಧಾನ ಮಂತ್ರಿಗಳು ದೇಶಕ್ಕೆ ಉತ್ತರ ಕೊಡಬೇಕಾಗಿದೆ.

'ಪ್ರತಿ ಕುಟುಂಬಕ್ಕೆ 35 ಕೆ.ಜಿ. ಅಕ್ಕಿ ಕೊಡಿ'

'ಆಹಾರ ಹಕ್ಕು ನಮ್ಮ ಹಕ್ಕು' ಎಡಪಕ್ಷಗಳ ರಾಜ್ಯ ಸಮಾವೇಶದ ಸಮರ ಘೋಷಣೆ

ಸಮಾವೇಶದ ಆರಂಭದಲ್ಲಿ ಸಂಗಾತಿಗಳು ಹಾಡನ್ನು ಹಾಡಿದರು. ತದನಂತರ ಇಡೀ ಸಮಾವೇಶವನ್ನು ಸುಸೂತ್ರವಾಗ ನಡೆಸಿಕೊಡಲು ಅಧ್ಯಕ್ಷೀಯ ಮಂಡಳಿಯೊಂದನ್ನು ರಚಿಸಲಾಯಿತು. ಸಿಪಿಐ(ಎಂ)ನ ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐನ ಎಸ್.ಎಲ್.ರಾಧಾ ಸುಂದರೇಶ್, ಫಾರ್ವರ್ಡ್ ಬ್ಲಾಕ್‌ನ ಸಿದ್ದರಾಮಯ್ಯ ಮೂವರು ಅಧ್ಯಕ್ಷೀಯ ಮಂಡಳಿಯಲ್ಲಿದ್ದರು. ಪ್ರಮುಖ ಭಾಷಣಕಾರರಾಗಿ ಸಿಪಿಎಂ ಪಾಲಿಟ್ ಬ್ಯೂರೋ ಸದಸ್ಯರಾದ ಸಂಸದ ಕಾಂ.ಸೀತಾರಾಂಯೆಚೂರಿ, ಕೇರಳದ ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಸಿ.ದಿವಾಕರನ್, ಪಶ್ಚಿಮಬಂಗಾಳದ ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ನರೇನ್ ದೇವ್ ಇದ್ದರು. ಕರ್ನಾಟಕ ಎಡಪಕ್ಷಗಳನ್ನು ಪ್ರತಿನಿಧಿಸಿ ಸಿಪಿಎಂನ ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಕಾಂ:ಸಿದ್ದನಗೌಡ ಪಾಟೀಲ್, ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಕಾರ್ಯದರ್ಶಿ ಜಿ.ಆರ್.ಶಿವಶಂಕರ್ ಇದ್ದರು.

ಗಂಭೀರ ಆಹಾರ ಬಿಕ್ಕಟ್ಟಿನ ಈ ಪರಿಸ್ಥಿತಿಯಲ್ಲಿ ಅಕ್ಟೋಬರ್ 26 ರಂದು ಬೆಂಗಳೂರಿನಲ್ಲಿ ನಡೆದ ಎಡಪಕ್ಷಗಳ ರಾಜ್ಯ ಸಮಾವೇಶ ಸ್ಫೂರ್ತಿಯುತವಾಗಿ ನಡೆದಿದೆ. ಮುಂದಿನ ಹೋರಾಟದ ರೂಪುರೇಷೆ ತೀರ್ಮಾನಿಸಿದೆ.

ವಿನಯಕುಮಾರ್.ಎಂ.ಜಿ



'ಹೊಳೆಯುವ ಭಾರತ-ನರಳುವ ಭಾರತಗಳ ನಡುವೆ ಅಂತರ ಹೆಚ್ಚುತ್ತಿದೆ' - ಯೆಚೂರಿ

"ಬೆಲೆ ಏರಿಕೆಯ ವಿರುದ್ಧ ಹಾಗೂ ಆಹಾರದ ಹಕ್ಕನ್ನು ಜಾರಿಗೊಳಿಸಬೇಕೆಂಬ ಅಖಿಲ ಭಾರತ ಮಟ್ಟದ ಕಾರ್ಯಕ್ರಮದ ಭಾಗವಾಗಿ ನಾವಿಂದು ಇಲ್ಲಿ ಸೇರಿದ್ದೇವೆ. ಭಾರತದ ಸ್ಥಿತಿ ಇಂದು ಗಂಭೀರವಾಗಿದೆ. ವಿಶಾಲವಾದ ಈ ಭಾರತ ದೇಶದಲ್ಲಿ ವಾಸ್ತವವಾಗಿ ಎರಡು ಭಾರತ ಅಸ್ತಿತ್ವದಲ್ಲಿದೆ. ಮೊದಲನೆಯದು 'ಬೆಳಗುತ್ತಿರುವ ಭಾರತ'. ಇದು ಕೆಲವು ಜನರಿಗೆ ಮಾತ್ರ. ಅದರ ಆಸ್ತಿ ಡಾಲರ್‌ಗಳಲ್ಲಿ ಮಿಲಿಯನ್



ಗಟ್ಟಲೆ ಬೆಳೆಯುತ್ತಿದೆ. ಜಪಾನಿನಲ್ಲಿ ಇರುವುದಕ್ಕಿಂತ ದೊಡ್ಡ ಮಿಲಿಯಾಧಿಪತಿಗಳು ಭಾರತದಲ್ಲಿದ್ದಾರೆ. ಬಾಂಬೆಯಲ್ಲಿ ಮುಖೇಶ್ ಅಂಬಾನಿಗಾಗಿ 400 ಕೋಟಿ ರೂ.ಗಳನ್ನು ವೆಚ್ಚ ಮಾಡಿ ಮನೆಯನ್ನು ಕಟ್ಟಲಾಗುತ್ತಿದೆ. ಇನ್ನೊಂದೆಡೆ ಎರಡನೇ ಭಾರತವೂ ಅಸ್ತಿತ್ವದಲ್ಲಿದೆ. ಇದು ವಾಸ್ತವ ಭಾರತ ಶೇ.90ರಷ್ಟು ಜನ ಈ ಭಾರತದಲ್ಲಿದ್ದಾರೆ. ಇದು ನರಳುತ್ತಿರುವ ಭಾರತ, ಭಾರತದ ಪ್ರಧಾನಮಂತ್ರಿಗಳು ರಚಿಸಿದ ಒಂದು ಸಮಿತಿಯ ವರದಿಯ ಪ್ರಕಾರ ದೇಶದ ಶೇ.77ರಷ್ಟು ಜನ ಪ್ರತಿನಿತ್ಯ 20 ರೂ.ಗಳಿಗಿಂತಲೂ ಕಡಿಮೆ ಪ್ರಮಾಣದ ಆದಾಯ ಹೊಂದಿದ್ದಾರೆ. ಪ್ರತಿ ಮೂರು ಜನ ಮಕ್ಕಳಲ್ಲಿ ಒಂದು ಮಗು ಪೌಷ್ಠಿಕ ಆಹಾರದ ಕೊರತೆಯಿಂದ ಬಳಲುತ್ತಿದೆ. ದೇಶದ ಶೇ.90ರಷ್ಟು ಜನ ಪೌಷ್ಠಿಕ ಆಹಾರವಿಲ್ಲದೇ ಬದುಕುತ್ತಿದ್ದಾರೆ. ಶೇ.76ರಷ್ಟು ಗರ್ಭಿಣಿ ಮಹಿಳೆಯರು ಅನಿಮಿಯಾ ಅಥವಾ ರಕ್ತಹೀನತೆಯಿಂದ ಬಳಲುತ್ತಾರೆ. ಹಲವು ಜನಕ್ಕೆ ತಿನ್ನಲು ಆಹಾರವೂ ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಈ ಬೆಳಗುತ್ತಿರುವ ಭಾರತ ಹಾಗೂ ನರಳುತ್ತಿರುವ ಭಾರತದ ನಡುವಿನ ವಿಶಾಲ ಕಂದರವನ್ನು ಕಡಿಮೆಗೊಳಿಸಲು, ಇಲ್ಲವಾಗಿಸಲು ನಾವಿಂದು ದೇಶಾದ್ಯಂತ ತೀವ್ರವಾದ ಚಳುವಳಿ ಮಾಡುವ ಅಗತ್ಯವಿದೆ.

ಸಾಲದು ಕೇಂದ್ರ ಪರಿಹಾರ

ಕರ್ನಾಟಕದಲ್ಲಿ ಹಿಂದೆಂದೂ ಕಾಣದಂತಹ ನೆರೆಹಾವಳಿ ಉಂಟಾಗಿದೆ. ಮುಖ್ಯಮಂತ್ರಿ ಅಂದಾಜು ಮಾಡಿದಂತೆ ಒಟ್ಟು 17,000 ಕೋಟಿ ರೂಪಾಯಿ ನಷ್ಟ ಉಂಟಾಗಿದೆ. ಆದರೆ ಕೇಂದ್ರ ಸರ್ಕಾರ ನೀಡಿರುವುದು ಕೇವಲ 1000 ಕೋಟಿ ರೂಪಾಯಿ ಮಾತ್ರ. ಈ ಭೀಕರ ಪರಿಸ್ಥಿತಿಯಿಂದಾಗಿ ದೊಡ್ಡ ಮಟ್ಟದ ಆಹಾರ ಕೊರತೆ ಕರ್ನಾಟಕವನ್ನು ಮುಂದಿನ ದಿನಗಳಲ್ಲಿ ಕಾಡಲಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ನಾವಿಂದು ಒತ್ತಾಯ ಮಾಡಬೇಕು. ಯಾರೆಲ್ಲಾ ವಸತಿ ಕಳೆದುಕೊಂಡಿದ್ದಾರೋ ಅವರಿಗೆ ಪುನರ್ವಸತಿಯನ್ನು ಕಲ್ಪಿಸಲು ಹೋರಾಡಬೇಕು. ಪುನರ್ವಸತಿಯನ್ನು ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆಯಡಿಯಲ್ಲಿ ಗ್ರಾಮೀಣ ಕಾರ್ಮಿಕರನ್ನು ಉಪಯೋಗಿಸಿಕೊಂಡು ಕಟ್ಟುವಂತಾಗಬೇಕು. ಆ ಮೂಲಕ ದುಡಿಯುವ ಕೈಗಳಿಗೂ ಉದ್ಯೋಗ ದೊರೆಯು ವಂತಾಗಬೇಕು. ಗುತ್ತಿಗೆದಾರರು ಲೂಟಿ ಮಾಡುವುದನ್ನು ತಡೆಯಲು ಸಾಧ್ಯವಾಗಬೇಕು.

ಭಾರತ 'ಹಸಿವಿನಿಲ್ಲಿ' ಮುಂದು

ಸ್ವಾತಂತ್ರ್ಯ ದಿನಾಚರಣೆಯಲ್ಲಿಂದು ಕೆಂಪು ಕೋಟೆಯಲ್ಲಿ ದೇಶವನ್ನುದ್ದೇಶಿಸಿ ಮಾತನಾಡುತ್ತಾ ಯಾವುದೇ ರೈತರು ಸಮಸ್ಯೆಗಳಿಂದಾಗಿ ಪ್ರಾಣ ಕಳೆದು ಕೊಳ್ಳದಿರುವಂತೆ ನೋಡಿಕೊಳ್ಳ ಲಾಗುವುದು. ಹಸಿವಿನ ಸಮಸ್ಯೆಯನ್ನು ಪರಿಣಾಮಕಾರಿ ಯಾಗಿ ಬಗೆಹರಿಸಲಾಗುವುದು ಎಂದು ಪ್ರಧಾನಿಗಳು ನುಡಿದರು. ಹಾಗೆ ಹೇಳುವ ಕೆಲವೇ ದಿನಗಳ ಮೊದಲು ಬಿಹಾರದಲ್ಲಿ ಹಲವು ರೈತರು ಪ್ರಾಣ ಕಳೆದುಕೊಂಡರು. ಬಳಿಕ ಕೆಲವೇ ಗಂಟೆಗಳಲ್ಲಿ ದೇಶಾದ್ಯಂತ ಸುಮಾರು 22 ರೈತರು ಆತ್ಮಹತ್ಯೆ ಮಾಡಿಕೊಂಡರು. ಯುಎನ್‌ಓ ಪ್ರಕಟಿಸಿದ ಜಾಗತಿಕ ಹಸಿವಿನ ಕೋಷ್ಟಕದಲ್ಲಿ (Golbal Hunger Index) ನಲ್ಲಿ ಭಾರತ 66ನೇ ಸ್ಥಾನದಲ್ಲಿದ್ದ 182 ರಾಷ್ಟ್ರಗಳ ಮಾನವ ಅಭಿವೃದ್ಧಿ ಕೋಷ್ಠಿಕ (Human Development Index) ನಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಆದರೆ ವಾಸ್ತವವಾಗಿ ಯಾವ ಅಭಿವೃದ್ಧಿಯೂ ಸಂಭವಿಸುತ್ತಿಲ್ಲ.

ಕೃಷಿ ಕ್ಷೇತ್ರದಲ್ಲಿ ಸರ್ಕಾರ ಬಂಡವಾಳ ಹೂಡುತ್ತಿಲ್ಲ. ಈ ಕ್ರಮ ಸರಿಯಾದುದ್ದಲ್ಲ 'ಜಗತ್ತಿನ' 2/3ರಷ್ಟು (ಮೂರನೇ ಎರಡರಷ್ಟು ಸರಿಸುಮಾರು ಶೇ.65) ರಾಷ್ಟ್ರಗಳು ಇಂದು ಹಿಂದೆಂದೂ ಕಾಣದ ಬರಗಾಲವನ್ನು ಎದುರಿಸುತ್ತಿವೆ. ಇದು ಜಗತ್ತಿನ ಆಹಾರ ಉತ್ಪಾದನೆಯ ಮೇಲೆ ದೊಡ್ಡ ಮಟ್ಟದ ಪ್ರಭಾವ ಬೀರುತ್ತದೆ. ಕೇಂದ್ರ ಸರ್ಕಾರ ದೇಶದಲ್ಲಿ ಬೆಲೆಯೇರಿಕೆ ಶೇ.0 ರಷ್ಟು ಎಂದು ಹೇಳುತ್ತಿದೆ. ಆದರೆ ದಿನಬಳಕೆಯ ಆಹಾರ ವಸ್ತುಗಳು ದೊಡ್ಡ ಮಟ್ಟದಲ್ಲಿ ಹೆಚ್ಚಳವಾಗುತ್ತಿದೆ. ದೇಶದ ಬಹುತೇಕ ಭಾಗಗಳಲ್ಲಿ ರೊಟ್ಟಿ ಹಾಗೂ ಬೇಳೆ ಸಾರು (ರೋಟಿ ಔರ್ ದಾಲ್) ಹೆಚ್ಚು ಬಳಕೆಯಾಗುವ ತಿನಿಸು. ಸಾಮಾನ್ಯ ಬಡವರು ಸೇರಿದಂತೆ ಹೆಚ್ಚು ಜನರು ಇದನ್ನು ಬಳಸುವ ಭಾಗವಾಗಿ ರೊಟ್ಟಿ ಮತ್ತು ಬೇಳೆ ಸುಲಭ ಆಹಾರ ಎಂದು ಅರ್ಥ ಕೊಡುವ ನಾಣ್ನುಡಿಯೇ ಬೆಳೆದುಬಂದಿದೆ. ಆದ್ದರಿಂದ ಇದು ಸುಳ್ಳಾಗುತ್ತಿವೆ. ದೆಹಲಿಯಲ್ಲಿ ಬೇಳೆಯ ಬೆಲೆ 100 ರೂಪಾಯಿಯಾಗಿವೆ. ನಿಮ್ಮ ಬೆಂಗಳೂರಿನಲ್ಲಿ ಸರಿಸುಮಾರು ಅಷ್ಟೇ ಇದೆ. ಹೀಗಿರುವಾಗ ಬಡವ ಹೇಗೆ ಬೇಳೆ ಬಳಸಲು ಸಾಧ್ಯ. ಈ ರೀತಿಯ ಆಹಾರ ವಸ್ತುಗಳ ಗರಿಷ್ಠ ಬೆಲೆಯೇರಿಕೆಗೆ ಕಾರಣ ಕಾಳಸಂತೆ. ಒಂದು ಅಂದಾಜಿನ ಪ್ರಕಾರ ಕಾಳಸಂತೆಯಲ್ಲಿ 18 ವರ್ಷ ಕೋಟಿ ರೂಪಾಯಿ ವ್ಯವಹಾರ ನಡೆಯುತ್ತಿದೆ. ಸರ್ಕಾರ ಈ ಕೂಡಲೇ ಮಧ್ಯೆ ಪ್ರವೇಶಿಸಿ ಈ ಕಾಳಸಂತೆಯನ್ನು ತಡೆಗಟ್ಟಬೇಕು ಹಾಗೂ ಆಹಾರವನ್ನು ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯ ಮೂಲಕ ದೇಶದ ಜನರಿಗೆ ವಿತರಿಸಬೇಕು.

ಕೇಂದ್ರ ಸರ್ಕಾರ ಪಡಿತರ ವಿತರಣಾ ವ್ಯವಸ್ಥೆಯನ್ನು ಜಾರಿ ಮಾಡಲು ಸುಮಾರು 52,000ಕೋಟಿ ರೂಪಾಯಿ ವಾರ್ಷಿಕವಾಗಿ ಬೇಕಾಗುತ್ತದೆ. ಸರ್ಕಾರ ಇದು ದುಬಾರಿ ಮೊತ್ತ ಎನ್ನುತ್ತದೆ. ಆದರೆ ಕಳೆದ ಆರ್ಥಿಕ ವರ್ಷದ ವರದಿಯ ಪ್ರಕಾರ ಈ ದೇಶದ ದೊಡ್ಡ ಬಂಡವಾಳದಾರರಿಂದ ಸಂಗ್ರಹಿಸಲಾಗದ ಒಟ್ಟು ತೆರಿಗೆ ಮೊತ್ತ 4.18 ಲಕ್ಷ ಕೋಟಿ ರೂಪಾಯಿಗಳು! ಈ ವರ್ಷ ಅದೆ ಕಂಪನಿಗಳಿಗೆ ನೀಡಿರುವ ತೆರಿಗೆ ವಿನಾಯ್ತಿ 10,00 ಕೋಟಿ ರೂಪಾಯಿ! ಆದರೆ ಇಡೀ ಕೃಷಿಗೆ ದೇಶದ ನೀಡುತ್ತಿರುವುದು 52,489 ಕೋಟಿ ರೂಪಾಯಿ ಸಬ್ಸಿ ಮಾತ್ರ. ಶ್ರೀಮಂತ ಕಂಪನಿಗಳ ಸೌಕರ್ಯ ಅಭಿವೃದ್ಧಿ ಹಣ ನೀಡುವ ಬದಲು ಕೃಷಿ ಕ್ಷೇತ್ರದಲ್ಲಿ ಹಣವನ ತೊಡಗಿಸಬೇಕಾದ ಅಗತ್ಯ ಇದೆ. ನಾವ ಆರ್ಥಿಕವಾಗಿಯೂ ವೇಗವಾಗಿ ಬೆಳೆಯುತ್ತಿರುವ ದೇ ಎಂದು ಜಿ20 ರಲ್ಲಿ ಘೋಷಣೆ ಮಾಡಿಕೊಳ್ಳುತ್ತೇವೆ ನಿಜ, ನಾವು ದೇಶವಾಗಿ ಬೆಳೆಯಬೇಕು. ಆದರೆ ಇಂದ ನಾವು ವೇಗವಾಗಿ ಬೆಳೆಯುತ್ತಿಲ್ಲ. ಬದಲಾಗಿ ಕೆಲವ ಶ್ರೀಮಂತರು ಬೆಳೆಯುತ್ತಿರುವುದು ವಾಸ್ತವ.

ಇಡೀ ಜಗತ್ತಿನಲ್ಲಿ ಉಂಟಾದ ಆರ್ಥಿಕ ಹಿಂಜರಿ ಬಹುತೇಕ ಎಲ್ಲಾ ರಾಷ್ಟ್ರಗಳಲ್ಲಿ ಬಡತನ, ಹಸಿವು ನಿರುದ್ಯೋಗವನ್ನು ಹೆಚ್ಚಿಸಿತು. 5 ಕೋಟಿಯಷ್ಟು ಜನರ ಹಸಿವಿನಿಂದ ಬಳಲುತ್ತಿದ್ದಾರೆ. ಇಡೀ ಮನುಷ್ಯರ 1/6 ರಷ್ಟು ಭಾಗ ತೀವ್ರ ತೊಂದರೆಗೆ ಒಳಗಾಗಿದ್ದಾರೆ ಭಾರತ ಸರ್ಕಾರದ ಅಂಕಿ ಅಂಶಗಳ ಪ್ರಕಾ ಸಂಘಟಿತ ವಲಯದಲ್ಲೇ ಸುಮಾರು 5 ಲಕ್ಷ ಜ ಉದ್ಯೋಗ ಕಳೆದುಕೊಂಡಿದ್ದಾರೆ. ಆದ ವಾಸ್ತವವಾಗಿ ಈ ಪರಿಸ್ಥಿತಿ ಇನ್ನೂ ಹೆಚ್ ಮುಂದುವರೆದ ರಾಷ್ಟ್ರಗಳಲ್ಲಿ ಉಂಟಾಗಿರುವ ತೀವ್ರ ಬಿಕ್ಕಟ್ಟಿನಿಂದ ಹೊರಬರಲು ಆ ದೇಶಗಳು ದೋಹಾ ಸುತ್ತಿನ ಮಾತುಕತೆಯಲ್ಲಿ ಹಿಂದುಳಿದ, ಮೂರನೆ ಜಗತ್ತಿನ ರಾಷ್ಟ್ರಗಳು ತಮ್ಮ ರಾಷ್ಟ್ರ ದಲ್ಲಿ ಹೊ ದೇಶದ ವಸ್ತುಗಳ ಆಮದಿಗೆ ಸಂಬಂಧಿಸಿದಂ ಅಸ್ತಿತ್ವದಲ್ಲಿರುವ ನೀತಿಗಳನ್ನು ಕೈಬಿಟ್ಟು ಮುಕ್ತ ನೀ ಅನುಸರಿಸುವಂತೆ ಆಗ್ರಹಿಸಿದವು. ಆ ಮೂಲಕ ತಮ ದೇಶದ ವಸ್ತುಗಳಿಗೆ ಮಾರುಕಟ್ಟೆ ಸೃಷ್ಟಿಸಲೆತ್ನಿಸಿದವು ಭಾರತದ ರೈತರು ತಾವು ತಿಳಿದೆ ಬೆಳೆಗೆ ಸೂಕ್ತ ಬೆಲೆ ಮಾರುಕಟ್ಟೆ ಸಿಗದೆ ಭಾಗವಾಗಿ 1.4ಲಕ್ಷ ರೈತರ ಆತ್ಮಹತ್ಯೆ ಮಾಡಿಕೊಂಡರು.

ಹೀಗೆ ಅಸ್ತಿತ್ವದಲ್ಲಿರುವ ರೈತ ವಿರೋಧಿ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಮಾತ್ರವಲ್ಲದೆ ಭಾರತದ ಪ್ರತಿಯೊಬ್ಬ ವ್ಯಕ್ತಿಯ ಉಳಿವಿಗಾಗಿ, ದೇಶದ ಶ್ರೇಯೋಭಿವೃದ್ಧಿಗಾ ದೇಶವನ್ನು ಹಸಿವು ಮುಕ್ತ, ನಿರುದ್ಯೋಗ ಮು ಭಾರತವನ್ನಾಗಿಸಲು ವಿಶಾಲ ಜನಚಳುವಳಿಯ ಅಗತ್ಯವಿದೆ. ಈಗ ನಾವು ಹಮ್ಮಿಕೊಂಡಿರುವ ಈ ಹೋರಾಟ ಆ ನಿಟ್ಟಿನಲ್ಲಿ ನಡೆಯಬೇಕು.

'ಕೇರಳ ಸರ್ಕಾರದ ಆಹಾರ ಭದ್ರತೆಯ ಯತ್ನ'

- ಸಿ.ದಿವಾಕರನ್


ಸಿ.ದಿವಾಕರ್

ಭಾರತ ಸರ್ಕಾರ ಈ ದೇಶದಲ್ಲಿ ಅನ್ನ ಕೇಳಿದವರ ಮೇಲೆ ಮಿಲಿಟರಿ ಬಲಪ್ರಯೋಗ ಮಾಡುತ್ತದೆ. ಸ್ವಾತಂತ್ರ್ಯ ಬಂದು 60 ವರ್ಷಗಳೇ ಕಳೆದರೂ ದೇಶದ ಬಹಳಷ್ಟು ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಜನರು ದಿಕ್ಕು ತೋಚದಂತಾಗಿದ್ದಾರೆ. ನಿರುದ್ಯೋಗ ದೇಶದ ಉದ್ದಗಲಕ್ಕೂ ವ್ಯಾಪಿಸಿದೆ. ಕೇರಳ, ತ್ರಿಪುರ, ಪಶ್ಚಿಮ ಬಂಗಾಳಗಳಲ್ಲಿ ಸ್ವಲ್ಪಮಟ್ಟಿನ ಸುಧಾರಣೆ ಸಾಧ್ಯವಾಗಿದೆ ಅಷ್ಟೆ. ಈಗ ಆಹಾರದ ಸಮಸ್ಯೆ ಆತಂಕಕಾರಿಯಾಗಿ ಬೆಳೆದಿದೆ. 2050ನೇ ಇಸವಿ ವೇಳೆಗೆ ಸುಮಾರು 300 ದೇಶಗಳು ಆಹಾರಕ್ಕಾಗಿ ಯುದ್ಧ ಮಾಡುವ ಸನ್ನಿವೇಶ ಸೃಷ್ಟಿಯಾಗಬಹುದು. ...ಷ್ಟು ಗ್ರಾಮೀಣ ಪ್ರದೇಶದ ಜನರು ಬದುಕನ್ನರಸಿ ಪಟ್ಟಣಕ್ಕೆ ಬರುತ್ತಾರೆ. ಆದರೆ ಅವರಿಗೆ ಸರಿಯಾದ ಆಹಾರವೂ ದೊರಕುತ್ತಿಲ್ಲ. ಆಹಾರದ ಸಮಸ್ಯೆ ಜಾಗತಿಕ ಸಮಸ್ಯೆಯಾಗಿ ಬೆಳೆದಿದೆ. ಮುಂದುವರಿದ ದೇಶಗಳು ಕೃಷಿ ಉತ್ಪನ್ನಗಳನ್ನು ಬಯೋಡೀಸೆಲ್ ಉತ್ಪಾದಿಸಲು ಬಳಸುತ್ತಿವೆ. ಕೃಷಿ ಭೂಮಿಯನ್ನು ಕೈಗಾರಿಕಾ ಭೂಮಿಯನ್ನಾಗಿ



ಪರಿವರ್ತಿಸಲಾಗುತ್ತಿದೆ. ಕಾಲಕ್ಕೆ ಸರಿಯಾಗಿ ರಸಗೊಬ್ಬರ ದೊರೆಯುವುದಿಲ್ಲ. ಬೆಳೆದ ಬೆಳೆಗೆ ಸರಿಯಾದ ಬೆಲೆ ದೊರೆಯುವುದಿಲ್ಲ. ಭೂ ಸು...ರಣೆಯಿಂದಲ್ಲದೆ ಈ ಸಮಸ್ಯೆಗಳಿಗೆ ಪರಿಹಾರವಿಲ್ಲ. ಪಾಳೆಗಾರಿಕೆ ಪದ್ಧತಿ ಭೂ ...ಲೀಕತ್ವ ಹೋಗಲಾಡಿಸುವುದು ಕೂಡಾ ಭೂ ಸುಧಾರಣೆಯ ಉಪಯುಕ್ತ ಅಸ್ತ್ರ. ನಾವು ಇದನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಹಾಗೂ ಭೂ ಸುಧಾರಣೆಯತ್ತ ಮುನ್ನಡೆಸುತ್ತೇವೆ.

ಗೋದಾಮಿನಲ್ಲಿ ಆಹಾರ ಯಾಕಾಗಿ?

ಕೇಂದ್ರ ಸರ್ಕಾರದ ಗೋದಾಮಿಯಲ್ಲಿ ಟನ್ನುಗಟ್ಟಲೆ ಧಾನ್ಯ ಸಂಗ್ರಹಣೆ ಇದೆ ಎನ್ನುತ್ತಾರೆ. ಆದರೆ ಯಾಕಾಗಿ ಮತ್ತು ಯಾರಿಗಾಗಿ ಎಂದು ಗೊತ್ತಿಲ್ಲ, ಇಂತಹವನ್ನು ಯಾವುದೇ ತಾರತಮ್ಯವಿಲ್ಲದೆ ಪಡಿತರ ವಿತರಣೆಯ ಮೂಲಕ ಎಲ್ಲರಿಗೂ ತಲುಪಿಸುತ್ತಿಲ್ಲ. ಯಾಕೆಂದರೆ ಆಹಾರದ ವಿತರಣೆಯನ್ನು ಏಕಸ್ವಾಮ್ಯತೆ ಹಾಗೂ ಖಾಸಗೀ ಬಾಬಿಗಳು ನಿಯಂತ್ರಿಸುತ್ತಿವೆ. ಇದರ ವಿರುದ್ಧ ಸರ್ಕಾರ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ಕೇಂದ್ರದ ಯುಪಿಎ ಸರ್ಕಾರ ಕೂಡಾ ಇತ್ತೀಚಿನ ಚುನಾವಣೆಗಳಲ್ಲಿ ಸಕ್ಕರೆ ಲಾಬಿಯನ್ನು ಬಳಸಿಕೊಂಡಿತು. ಇಂತಹ ಕೃತ್ಯಗಳನ್ನು ತಡೆಯಲು ಮೂಲಭೂತ ವಸ್ತುಗಳ ಕಾಯ್ದೆ (Essiential Commodity Act)ಯನ್ನು ಜಾರಿಗೆ ತರಬೇಕು. ಕೇಂದ್ರ ಮಟ್ಟದಲ್ಲಿ ಇದು ಸಾಧ್ಯವಾಗದಿದ್ದರೆ ರಾಜ್ಯ ಸರ್ಕಾರಗಳಿಂದ ಇದು ಸಾಧ್ಯವಿಲ್ಲ.

ಕೇರಳದಲ್ಲಿ ಆಹಾರ ಬೆಳೆ ಕಡಿಮೆ, ರಬ್ಬರ್, ಸಾಂಬಾರ್ ಪದಾರ್ಥ ಮುಂತಾದ ವಾಣಿಜ್ಯ ಬೆಳೆ ಜಾಸ್ತಿ. ಹೀಗಾಗಿ ಕೇರಳಕ್ಕೆ ರಾಜ್ಯ ಪ್ರತಿವರ್ಷ 400 ಕೋಟಿ ಮೌಲ್ಯದ ತರಕಾರಿಯನ್ನು ತಮಿಳುನಾಡಿನಿಂದ ಕೊಳ್ಳುತ್ತೇವೆ. ಕೇಂದ್ರ ಸರ್ಕಾರದ ಶೇ.18 ರಷ್ಟು ಅಕ್ಕಿಯನ್ನು ನಾವು ಪಡೆದುಕೊಂಡು ಉಳಿದುದನ್ನು ಕರ್ನಾಟಕ, ಪಂಜಾಬ್, ಹರಿಯಾಣ ಹಾಗೂ ಆಂಧ್ರಪ್ರದೇಶದಿಂದ ಪಡೆಯುತ್ತಿದ್ದೆವು. ಬರಗಾಲದ ಭಾಗವಾಗಿ ನಾವು 1,18,000 ಮೆಟ್ರಿಕ್ ಟನ್ ಅಕ್ಕಿಯನ್ನು ನಾವು ಕಳೆದುಕೊಂಡವು. ಆಗ ನಾವು ಪಶ್ಚಿಮ ಬಂಗಾಳ ಸರ್ಕಾರದ ಜೊತೆ ಮಾತನಾಡಿ ಅಕ್ಕಿಯನ್ನು ಪಡೆದು ಸರ್ಕಾರದ ಮೂಲಕ ಇಡೀ ರಾಜ್ಯದಲ್ಲಿ 'ಅರಿಕ್ಕಡ (ಅಕ್ಕಿ ಅಂಗಡಿ)' ಎಂಬ ಹೆಸರಿನಲ್ಲಿ ಅಕ್ಕಿ ಅಂಗಡಿಯನ್ನು ದೊಡ್ಡ ಪ್ರಮಾಣದಲ್ಲಿ ತೆರೆದೆವು.

ಯುಪಿಎ ಸರ್ಕಾರ ಮೂರು ದಿನದ ಪ್ಯಾಕೇಜ್ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಆದರೆ ಮಾಡ್ತೇನು? ಆ ಸಂದರ್ಭದಲ್ಲಿ ಅಮೇರಿಕಾದೊಂದಿಗೆ ಒಪ್ಪಂದ ಮಾಡಿಕೊಂಡಿತು. ಆಹಾರ ಭದ್ರತೆ ಎಂಬ ಹೆಸರಿನಲ್ಲಿ ಅಭದ್ರತೆ ಸೃಷ್ಟಿ ಮಾಡಿತು. ಆದರೆ ಕೇರಳದಲ್ಲಿ 50 ಲಕ್ಷ ಎ.ಪಿ.ಎಲ್. 20 ಲಕ್ಷ ಬಿ.ಪಿ.ಎಲ್. ಕಾರ್ಡುದಾರರಿದ್ದಾರೆ. ಆಹಾರ ಭದ್ರತೆ ಹೆಸರಿನಲ್ಲಿ ಪ್ರತಿ ಕುಟುಂಬಕ್ಕೆ ತಿಂಗಳಿಗೆ 35 ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿದೆ. ಎಲ್ಲ ರಾಜ್ಯಗಳ ಆಹಾರ ಮಂತ್ರಿಗಳ 'ಸಮಾವೇಶವನ್ನು ನಾವು ಆಯೋಜಿಸಿದ್ದೆವು. ಅಲ್ಲಿ ಕಾಂಗ್ರೆಸ್ಸಿನ ಒಬ್ಬ ಮಂತ್ರಿ ಕೇಂದ್ರ ಸರ್ಕಾರದ ನಿಲುವನ್ನು ಬುದ್ಧಿಹೀನ ವಾದುದೆಂದು ತೆಗಳಿದರು. ನಾವು ಇಡೀ ರಾಜ್ಯಾದ್ಯಂತ 3,300 ಮಳಿಗೆಗಳನ್ನು ನಾವು ತೆರೆದು ಅತ್ಯವ್ಯಶಕವಾದ 13 ವಸ್ತುಗಳನ್ನು ವಿತರಣೆ ಮಾಡುತ್ತಿದ್ದೇವೆ. ಪಡಿತರ ವಿತರಣೆಯೆಂದರೆ ತಿಂಗಳಿಗೊಂದು ದಿನ ತೆಗೆದು ಮುಚ್ಚುವಂತದ್ದಲ್ಲ. ಪ್ರತಿ ದಿನವೂ ಅದು ತೆರೆದಿರುತ್ತದೆ. ಆ ಮಳಿಗೆಗಳಲ್ಲಿ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಮಾರಲಾಗುತ್ತದೆ. ಅದರ ಕೆಲವು ವಿವರ ಹೀಗಿದೆ:

ಅಕ್ಕಿ ಒಂದು ಕೆ.ಜಿ.ಗೆ 14.00 (ಮಾರುಕಟ್ಟೆಯಲ್ಲಿ 28.00 ರೂ.)

ಉದ್ದಿನಬೇಳೆ ಒಂದು ಕೆ.ಜಿ.ಗೆ 34.00 (ಮಾರುಕಟ್ಟೆಯಲ್ಲಿ 68.00 ರೂ)

ಮೆಣಸಿನಕಾಯಿ ಒಂದು ಕೆ.ಜಿ.ಗೆ 45.00 (ಮಾರುಕಟ್ಟೆಯಲ್ಲಿ 80.00 ರೂ)

ಸಕ್ಕರೆ ಒಂದು ಕೆ.ಜಿ.ಗೆ 28.00 (ಮಾರುಕಟ್ಟೆಯಲ್ಲಿ 35.00 ರೂ)

ಪಡಿತರ ವ್ಯವಸ್ಥೆಯ ಮೂಲಕ ಆಹಾರ ವಿತರಣೆಯಾದಾಗ ಮಾತ್ರ ಅದು ಎಲ್ಲರಿಗೂ ತಲುಪುತ್ತದೆ. ಅಲ್ಲಿಯವರೆಗೂ ವಿತರಣೆ ಕೇವಲ ಆಸ್ತಿವಂತರಿಗೆ ಮಾತ್ರ. ಇದನ್ನು ಸರಿಪಡಿಸಲು ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಸರ್ಕಾರವು ಬಂಡವಾಳಶಾಹಿ ವ್ಯವಸ್ಥೆಯನ್ನು ಅಪ್ಪಿಕೊಂಡಿದೆ.

ಕರ್ನಾಟಕ : ಗ್ಯಾಟ್‌ನಿಂದ ಆಹಾರ ಭದ್ರತೆಗೆ ಧಕ್ಕೆ

ಸ್ವಾತಂತ್ರ ಬಂದಾಗಿನಿಂದಲೂ ನಮಗೆ ಕಾಂಗ್ರೆಸ್ಸಿಗರ ಬಗ್ಗೆ ಗೊತ್ತು. ಯಾವಾಗ ಚುನಾವಣೆಗಳು ಬರುತ್ತವೋ ಆಗ ಹಲವು ಆಮಿಷಗಳನ್ನು ಒಡ್ಡುತ್ತಾರೆ. 20,000ಕೋಟಿ ರೂಪಾಯಿಯನ್ನು ಮುಖೇಶ್ ಅಂಬಾಯಿಯಂತವರಿಗೆ ಮನ್ನಾ ಮಾಡಲು ಈ ಕಾಂಗ್ರೆಸ್ಸಿಗರಿಗೆ ಗೊತ್ತು. ಆದರೆ ಅತ್ಯಗತ್ಯ ವಸ್ತುಗಳ ಕನಿಷ್ಠ ಪೂರೈಕೆಯ ಬಗ್ಗೆ ಅವರಿಗೆ ಯಾವ ಕಾಳಜಿಯೂ ಇಲ್ಲ. 14 ಅತ್ಯವಶ್ಯ ವಸ್ತುಗಳನ್ನು ಪಡಿತರ ವ್ಯವಸ್ಥೆಯ



ನರೇನ್ ದೇವ್

ಮೂಲಕ ವಿತರಿಸಲು ಆಗ್ರಹಿಸಿ ನಾವು ಹೋರಾಟ ಮಾಡಬೇಕು.

ಗ್ಯಾಟ್ ಒಪ್ಪಂದದ ಮೂಲಕ ಭಾರತದ ಕೃಷಿಯನ್ನು ಖಾಸಗೀಕರಣಕ್ಕೆ ಒಳಪಡಿಸಲಾಗುತ್ತಿದೆ. ಅತ್ಯಾಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಹೆಚ್ಚು ವಸ್ತುಗಳನ್ನು ಉತ್ಪಾದಿಸುವ ರಾಷ್ಟ್ರಗಳು ನಮ್ಮಂತಹ ರಾಷ್ಟ್ರಗಳನು ಅವರ ವಸ್ತುಗಳಿಗೆ ಮಾರುಕಟ್ಟೆ ಮಾಡಿಕೊಳ್ಳುತ್ತವೆ. ಹಲವು ಮುಂದುವರೆದ ರಾಷ್ಟ್ರಗಳಲ್ಲಿ ಶೇ.0 ರಷ್ಟು ಜನಸಂಖ್ಯೆ ಬೆಳವಣಿಗೆ ಹೊಂದುತ್ತಿವೆ. ಕೆಲವು ಶೇ.0 ಗಿಂತಲೂ ಕಡಿಮೆ ಇರುತ್ತದೆ. ವಸ್ತುಗಳನ್ನು ಬಳಸಲು ಜನವಿಲ್ಲದಾಗ ಉಂಟಾಗುವ ಆರ್ಥಿಕ ಬಿಕ್ಕಟ್ಟನ್ನು ನಮ್ಮ ಮೇಲೆ ಹೇರುತ್ತವೆ.

ಶೇ.36 ರಷ್ಟು ಜನರು ನಮ್ಮ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿದ್ದಾರೆ. ನಾವು ಬೆಳೆಯುವ ಉತ್ಪನ್ನಗಳಿಂದ ತೆಂಗಿನ ಕಾಯಿ ಮುಂತಾದವು ವಿಷ್ಯಾದಿಂದ ಮಾಯವಾಗುತ್ತದೆ. ಆದುದರಿಂದಲೇ ಕೇರಳ ಮುಂತಾದ ರಾಜ್ಯಗಳು ಬಿಕ್ಕಟ್ಟನ್ನು ಎದುರಿಸುತ್ತಿರುವುದು. ಇಂತಹ ಸಂದರ್ಭದಲ್ಲಿ

ಪುಟ 10ಕ್ಕೆ


ವಿಜೆಕೆ ನಾಯರ್


ಡಾ. ಸಿದ್ದನಗೌಡ ಪಾಟೀ...


ಜಿ.ಆರ್. ಶಿವಶಂಕರ್



ಮಹತ್ವದ ಪುಸ್ತಕಗಳ ಬಿಡುಗಡೆ

ಸೀತಾರಾಂ ಯೆಚೂರಿ ಜಗತ್ತನಲ್ಲಿಂಟಾಗುತ್ತಿರುವ ಆಹಾರದ ಕೊರತೆ, ಭಾರತದಲ್ಲಿರುವ ಆಹಾರದ ಸಮಸ್ಯೆ ಎರಡನ್ನು ಹಲವು ರೀತಿಯ ವೈಜ್ಞಾನಿಕ ವಿಧಾನಗಳಿಂದ ಅಧ್ಯಯನ ಮಾಡಿ ವಿಶ್ಲೇಷಣೆಗೊಳಪಡಿಸಿ ಕಾರಣ ಮತ್ತು ಪರಿಹಾರ ಮಾರ್ಗವನ್ನು ಅವಲೋಕಿಸಿರುವ ಎನ್.ಕೆ. ವಸಂತರಾಜ್‌ರವರ 'ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯೆಂತು?' ಎಂಬ ಕೃತಿಯನ್ನು ಬಿಡುಗಡೆ ಮಾಡಿದರು. ಹಾಗೂ ಭಾರತದ ರೈತರ ಬವಣೆಗಳನ್ನು ಸ್ಪಷ್ಟವಾಗಿ, ಅರ್ಥಪೂರ್ಣವಾಗಿ ಚಿತ್ರಿಸುವ ರೈತಪರ ಬರಹಗಾರ ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತ ಪಿ.ಸಾಯಿನಾಥ್‌ರವರು ಬರೆದ ಆಯ್ದಬರಹಗಳ ಕನ್ನಡಾನುವಾದ 'ಬಿತ್ತಿದ್ದೀರಿ, ಅದಕ್ಕೆ ಅಳುತ್ತೀರಿ' ಎಂಬ ಪುಸ್ತಕ ಬಿಡುಗಡೆಗೊಂಡಿತು. ಇದನ್ನು ಕನ್ನಡಕ್ಕೆ ತಂದವರು ಟಿ.ಎಲ್. ಕೃಷ್ಣೇಗೌಡ. 'ಅಳುವ ಯೋಗಿಯ ನೋಡಲ್ಲಿ' ಎಂಬ ಇದೇ ಲೇಖಕ, ಅನುವಾದಕರ ಮತ್ತೊಂದು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಈ ಮೂರು ಪುಸ್ತಕಗಳ ಪ್ರಕಾಶನ 'ಚಿಂತನ'.

ಕಾರ್ಯಕ್ರಮವನ್ನು ಅರ್ಥಪೂರ್ಣ ವಾಗಿಸಲು ಉತ್ತರ ಕರ್ನಾಟಕದ ನೆರೆ ಹಾವಳಿಯಲ್ಲಿ ಬದುಕು, ಸೌಕರ್ಯವನ್ನು ಕಳೆದುಕೊಂಡ ಗೌರಮ್ಮ ಅರಬನೂರು ಹಾಗೂ ಚಿನ್ನಪ್ಪ ದವಳಗಿರಿಯವರಿಗೆ ಆಹಾರಧಾನ್ಯವನ್ನು ಎಡಪಕ್ಷಗಳ ನಾಯಕರ ಮೂಲಕ ಹಂಚುವುದರ ಮುಖಾಂತರ ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಸಾವಿರಾರು ಜನರು ಸೇರಿದ್ದ ಸಮಾವೇಶ ಮಳೆ ಹಾವಳಿಯಲ್ಲಿ ಪ್ರಾಣ ಕಳೆದುಕೊಂಡವರಿಗೆ ಎದ್ದು ನಿಂತು ಶ್ರದ್ಧಾಂಜಲಿ ಸಲ್ಲಿಸಿತು.

ಸಮಾವೇಶದ ಕರೆ - ಪುಟ 14 ನೋಡಿ

ರೋಣ : ದಲಿತರಿಗೆ ಸವರ್ಣೀಯರಿಂದ ಸಾಮಾಜಿಕ ಬಹಿಷ್ಕಾರ

ವರದಿ : ಸೌಹಾರ್ದ

ಸಾವಿರಾರು ವರ್ಷಗಳಿಂದ ಊರ ಹೊರಗಿನ ಕೇರಿಯಲ್ಲಿಯೇ ಮನೆ ಮಾಡಿ, ನಿರಂತರ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತಲೇ, 'ಭಯ'ದ ಮನೆಯಲ್ಲಿಯೇ ವಾಸ ಮಾಡುತ್ತ, ಕನಿಷ್ಠ ಸೌಲಭ್ಯಗಳಿಂದಲೂ ವಂಚಿತರಾಗಿ ಹೀನಾಮಾನ ಸ್ಥಿತಿಯಲ್ಲಿಯೇ ಚರಿತ್ರೆಯುದ್ದಕ್ಕೂ ಸಾಗಿಬಂದ ದಲಿತರನ್ನು ಸಂಸ್ಕೃತಿಯ ಹೆಸರಲ್ಲಿ ಇನ್ನೂ ಹೆಚ್ಚು ಹೆಚ್ಚು ಶೋಷಣೆಗೆ ಒಳಪಡಿಸಲಾಗುತ್ತಿದೆ.

ವೇದ ಉಪನಿಷತ್ತುಗಳಿಂದ ಹಿಡಿದು ಪಾಳೆಗಾರಿಕೆ, ವಸಹಾತುಶಾಹಿ ವ್ಯವಸ್ಥೆ ಕೊನೆಗೊಂಡು, ಒಂದು ಪ್ರಜಾಪ್ರಭುತ್ವ ಎನ್ನುವ ಅರೆಬರೆ ವ್ಯವಸ್ಥೆಯಲ್ಲಿ ಕಾಲಿರಿಸಿದ್ದರೂ ಜಾತಿ, ಅಸ್ಪೃಶ್ಯತೆಯ ಪಿಡುಗು ನಾಗರೀಕ ಸಮಾಜ ತಲೆತಗ್ಗಿಸುವ ರೀತಿಯಲ್ಲಿ ಬಾಧಿಸುತ್ತಿದೆ. ಅವೈಜ್ಞಾನಿಕತೆ, ಮೌಢ್ಯತೆ, ಕಂದಾಚಾರಗಳು ಮನುಷ್ಯ ಸಮಾಜವನ್ನು ನಲುಗಿಸುತ್ತಲೇ ಜಾತಿ, ಅಸ್ಪೃಶ್ಯತೆಯನ್ನು ಗಟ್ಟಿಗೊಳಿಸಿವೆ.

ಸ್ವಾತಂತ್ರ್ಯಾನಂತರ ಅಧಿಕಾರಕ್ಕೇರಿದವರೆಲ್ಲರೂ ದಲಿತರ ನೆಲೆಗಳನ್ನು ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಲೇ ಬಂದಿದ್ದಾರೆ. ಬಿಹಾರ, ಉತ್ತರ ಪ್ರದೇಶಗಳಲ್ಲಂತೂ ಇದು ಇನ್ನೂ ಹೆಚ್ಚಾಗಿಯೇ ಇದೆ. ಅಲ್ಲಲ್ಲ ದಲಿತರ 'ಮಾರಣ ಹೋಮ'ದಂತಹ ಘಟನೆಗಳು ಹೆಚ್ಚೆಚ್ಚು ನಡೆಯುತ್ತಲೇ ಇವೆ. ಕರ್ನಾಟಕದ 'ಕಂಬಾಲಪಲ್ಲಿ' ಘಟನೆ ಇನ್ನೂ ಜನಮಾನಸದಲ್ಲಿ ಉಳಿದಿದೆ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ಇದಕ್ಕೆ ನಿದರ್ಶನವೆಂಬಂತೆ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಜಗಳೂರು ಗ್ರಾಮದಲ್ಲಿ ಮೊನ್ನೆ ಮೊನ್ನೆಯಷ್ಟೇ ದಲಿತರ ಮೇಲೆ ಹಾಕಿದ ಸಾಮಾಜಿಕ ಬಹಿಷ್ಕಾರ..........

ಈ ಜಗಳೂರು ಗ್ರಾಮ ಸುಮಾರು 3795 ರಷ್ಟು ಜನಸಂಖ್ಯೆಯನ್ನು ಹೊಂದಿದ ಹಳ್ಳಿ. ಇಲ್ಲಿ ಸುಮಾರು 200ರಷ್ಟು ಜನ ದಲಿತರಿರುವ 40 ಕುಟುಂಬಗಳಿವೆ. ಗ್ರಾಮದ ಶಿವಪ್ಪ ಮರಿಯಪ್ಪ ಮಾದರ ಎಂಬ ದಲಿತ ತನ್ನ ತುಂಡು ಹೊಲದಲ್ಲಿ ತಗಡು ಹಾಕ್ಕೊಂಡು ಬೇಸಾಯ ಮಾಡ್ತಿದ್ದ. ಅದೇ ದಾರಿಯಲ್ಲಿ ಬಂದ ಸಿದ್ದನಗೌಡ ನರೆಗಲ್ ಎನ್ನುವ ಸವರ್ಣೀಯನು ತಗಡನ್ನು ನೋಡಿ ಅವುಗಳನ್ನು ತೆಗೆಯಲು ಹೇಳಿದ್ದಾನೆ. ಇದು ನನ್ನ ಹೊಲದ ಬದುವಿನಲ್ಲಿದೆ. ಇದನ್ನು ನಾನ್ಯಾಕೆ ತೆಗೆಯಲಿ ಎಂದು ಹೇಳಿದ ಶಿವಪ್ಪನ ಮೇಲೆ ಸವರ್ಣೀಯ ಸಿದ್ದನಗೌಡ ಮತ್ತವನ 4 ಜನ ದಾಂಡಿಗರು ಧಾಳಿ ನಡೆದಿ ಹೀನಾಮಾನ ಅವನನ್ನು ಥಳಿಸಿದ್ದಾರೆ.

ಕುಂಟುತ್ತಲೇ ಕೇರಿಗೆ ಬಂದ ಶಿವಪ್ಪ ನಡೆದ ಘಟನೆಯನ್ನು ತನ್ನ ಕುಟುಂಬ ಹಾಗೂ ಕೇರಿಯ ಜನರಿಗೆ ತಿಳಿಸಿದ. ಒಂದಿಷ್ಟು ಜನರೊಂದಿಗೆ ತಾಲ್ಲೂಕು ಕೇಂದ್ರ ರೋಣಕ್ಕೆ ಹೋಗಿ ಸಿಪಿಐ ಹತ್ತಿರ ಪ್ರಕರಣ ದಾಖಲಿಸಿದ್ದಾರೆ.

ಇದನ್ನೇ ನೆಪವಾಗಿರಿಸಿಕೊಂಡು ಶಿವಪ್ಪ ಹಾಗೂ ಇತರರು ಊರಿನ ಎಲ್ಲ ಸವರ್ಣೀಯರನ್ನು ಕೂಡಿಸಿ ಜಾತಿಯ ಬಣ್ಣ ಬಳಿದು ಊರಿನ ದಲಿತ ಸಮುದಾಯದ ವಿರುದ್ಧ ಎತ್ತಿಕಟ್ಟಿ, ಅವರ ಮೇಲೆ ಸಾಮಾಜಿಕ ಬಹಿಷ್ಕಾರ ರೂಪದಲ್ಲಿ ಹಿಟ್ಟಿನ ಗಿರಣಿ, ಹೋಟೆಲ್, ಕಿರಾಣಿ ಅಂಗಡಿ, ಸಾರ್ವಜನಿಕ ಶೌಚಾಲಯ, ಅಲ್ಲದೆ ಕ್ಷೌರಿಕ ಅಂಗಡಿಗೂ ಬರದಂತೆ ನಿಷೇಧ ಹೇರಿದ್ದಾರೆ. ಸುಮಾರು ವರ್ಷಗಳಿಂದ ಆ ಊರಿನ ದಲಿತರಿಗೆ ಹಳ್ಳಿಯಲ್ಲಿ ಕ್ಷೌರ ಮಾಡುವುದಕ್ಕೆ ಬಹಿಷ್ಕಾರ ಹಾಕಿದ್ದಾರೆ. ಸಾಲದೆಂಬಂತೆ ಒಂದೆರಡು ಗುಡಿಸಲಿನಲ್ಲಿರುವ ಟಿ.ವಿ.ಯ ಡಿಶ್ ವಾಯರ್ ಸಂಪರ್ಕ ಕಡಿತಗೊಳಿಸಿ, ಆ ಊರಿಗೆ ಸುಣ್ಣ ಮಾರಲು ಬಂದವರನ್ನು ಕೇರಿಗೆ ಹೋಗದಂತೆ ತಡೆದಿದ್ದಾರೆ.



ಜಿಲ್ಲಾಧಿಕಾರಿ ಗ್ರಾಮಕ್ಕೆ ಭೇಟಿ ನೀಡಿದಾಗ

ಮುಖ್ಯ ರಸ್ತೆಯಿಂದ 2 ಕಿ.ಮೀ ಒಳಗೆ ದೂರದಲ್ಲಿರುವ ಹಳ್ಳಿಗೆ ಟಂ, ಟಂ ವಾಹನದಲ್ಲಿಯೂ ಪ್ರಯಾಣಿಸದಂತೆ ತಡೆದಿದ್ದಾರಲ್ಲದೆ ಗ್ರಾಮದಲ್ಲಿರುವ ದಲಿತ ಮಕ್ಕಳು ಶಾಲೆಗೆ ಬರುವುದನ್ನು ತಡೆಯಲು ಅಂಗನವಾಡಿ ಕೇಂದ್ರಕ್ಕೆ ಬೀಗ ಹಾಕಿ ಅಮಾನವೀಯವಾಗಿ ದೌರ್ಜನ್ಯ ನಡೆಸಿದ್ದಾರೆ.

ಇಷ್ಟೆಲ್ಲ ಪ್ರಕರಣಗಳು ನಡೆದರೂ ತಾಲ
ಶಾಸಕ ಅಂದರೆ ರೋಣ ಕ್ಷೇತ್ರದ ಶಾಸಕ ಬಿಜೆ
ಕಳಕಪ್ಪ ಬಂಡಿ ಹಳ್ಳಿಗೆ ಭೇಟಿಕೊಟ್ಟು ದಲಿ
ಸಾಂತ್ವಾನ ಹೇಳುವ ಸೌಜನ್ಯವನ್ನು ತೋ
ದಲಿತರಿಗೆ ಬಹಿಷ್ಕಾರ ಹಾಕಿರುವವರು ಸ್ವಜ
ಅಂದರೆ ಪಂಚಮಶಾಲಿ ಲಿಂಗಾಯತರು ಎ
ಕಾರಣಕ್ಕೆ ಶಾಸಕರು ಅವರ ಪರ ನಿಂತಿ
ಆರೋಪಗಳಿಗೆ ಇದೀಗ ನಿರೀಕ್ಷಣಾ ಜಾಮಿ
ದೊರೆತಿದ್ದು, ಶಾಸಕರೇ ಇವರ ರಕ್ಷಕರಾಗಿ
ಪ್ರಕರಣ ಅರಿತ ಸಿಪಿಎಂ ನಿಯೋಗ ಗ್ರಾಮಕ್ಕೆ
ನೀಡಿ ದಲಿತರನ್ನು ಸಂತೈಸಿ ಘಟ
ಕಾರಣರಾದವರನ್ನು ಬಂಧಿಸಿ ಕಾನೂನು
ಕೈಗೊಳ್ಳಲು ಒತ್ತಾಯಿಸಿದೆ. ನಿಯೋಗದಲ್ಲಿ
ಜಿಲ್ಲಾ ಮುಖಂಡ ಎಂ.ಎಸ್.ಹಡ
ಕೆ.ಎಸ್.ಜಂತ್ಲಿ, ಮಹೇಶ ಹಿರೇಮಠ ಇದ್ದರ

ಇಷ್ಟಕ್ಕೂ ಇದು ಜಿಲ್ಲೆಯಲ್ಲಿ ಮೊ
ಪ್ರಕರಣವೇನಲ್ಲ. ಹಳ್ಳಿಕೇರಿ, ಕಣಶೀನ
ಗ್ರಾಮದಲ್ಲಿ ಕೆರೆ ನೀರಿಗೆ ಬಹಿಷ್ಕಾರ ಹಾಕಲಾ
ಹಾಳಕೇರಿ ಗ್ರಾಮದಲ್ಲಿ ಕಸ ಎಸ
ವಿಷಯವಾಗಿ ದಲಿತರ ಗುಡಿಸಲಿಗೆ
ಹಚ್ಚಿದ್ದಾರೆ.

ಇಷ್ಟೆಲ್ಲ ಪ್ರಕರಣಗಳಾದರೂ ಸರ್ಕಾರ
ತಡೆಗೆ ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ. ರಾಜ
ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲ
ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚು
ಅವರಿಗೆ ರಕ್ಷಣೆ ಇಲ್ಲದಂತಾ
ಇತಿಹಾಸದುದ್ದಕ್ಕೂ ದಲಿತರನ್ನು ಮೇಲ್ಜಾತಿ
ಹೆಚ್ಚು ಹೆಚ್ಚು ನಿಷ್ಪರನ್ನಾಗಿ ಮಾಡಲಾಗುತ್ತಿದೆ. ಕೇ
ಅಂದಿನಿಂದ ಕೇರಿಗಳಾಗಿಯೇ ಉಳಿದಿವೆ.
ಜಿಲ್ಲೆಯ ಹಳ್ಳಿಗಳಲ್ಲಿ ಜೀವಂತವಾಗಿರುವ ಅಸ್
ಆಚರಣೆ ಅವಮಾನವೀಯ ಸಮಾ
ಸಾಕ್ಷೀಕರಿಸುತ್ತಿದೆ.

'ಆಹಾರ ಹಕ್ಕು ನಮ್ಮ ಹಕ್ಕು'...

ಪುಟ 9 ರಿಂದ

ಸರ್ಕಾರಿ ಹಿಡಿತವನ್ನು ಬಲಗೊಳಿಸುವುದಕ್ಕೆ ಬದಲಾಗಿ ಖಾಸಗೀಕರಣಗೊಳಿಸಲಾಗಿದೆ. ಇತ್ತೀಚೆಗೆ ಎರಡು ಕಂಪನಿಗಳನ್ನು ಖಾಸಗೀಕರಣ ಮಾಡಲಾಯಿತು.

ಮಧುರ್ ಧೋಂಡಿಯವರು ನೇತಾಜಿಯವರನ್ನು ಭಾರತದ ಎಡಚಿಂತನೆಯ ನೇತಾರ ಎಂದು ತಮ್ಮ ಪುಸ್ತಕದಲ್ಲಿ ವಿವರಿಸುತ್ತಾರೆ. ನೇತಾಜಿ ವಿವರಿಸಿರುವ ಹಲವು ಅಂಶಗಳನ್ನು ನಾನು ಸ್ವಾಮಿನಾಥನ್‌ರವರ ಗಮನಕ್ಕೆ ತಂದೆ. ಅವರು ತಮ್ಮ ವರದಿಯಲ್ಲಿ ಹಲವು ವಿಚಾರಗಳನ್ನು ಅಧ್ಯಯನ ಮಾಡಿ ಶೇ.4 ರಷ್ಟು ಬಡ್ಡಿದರದಲ್ಲಿ ರೈತರಿಗೆ ಅಗತ್ಯದಷ್ಟುಸಾಲ ನೀಡುವಂತೆ ಶಿಫಾರಸ್ಸು ಮಾಡಿದರು. ಆದರೆ ಸರ್ಕಾರ ಅದನ್ನು ಜಾರಿಮಾಡಲಿಲ್ಲ. ಬದಲಾಗಿ ಮುಂದುವರಿದ ರಾಷ್ಟ್ರಗಳ ಜೊತೆ 'ಒಪ್ಪಂದ ಮಾಡಿಕೊಂಡಿತು. ನಾವು ಕೃಷಿಗೆ ಶೇ.10 ರಷ್ಟನ್ನು ಸಬ್ಸಿಡಿ ನೀಡುತ್ತೇವೆ. ಮುಂದುವರಿದ ರಾಷ್ಟ್ರಗಳಲ್ಲಿ ಶೇ.30 ರಷ್ಟು ಇದೆ. ಅವರು ಅದರಲ್ಲಿ ಯಾವ ಕಡಿತವನ್ನೂ ಮಾಡಲಿಲ್ಲ. ನಾವು ಕಡಿತಗೊಳಿಸಬೇಕೆಂದು ತೀರ್ಮಾನಿಸಿರುವ ಒಪ್ಪಂದಕ್ಕೆ ಸಹಿ ಹಾಕಿದೆವು. ಹಾಗಾಗಿಯೇ ನಾವೆಲ್ಲರೂ ಪಕ್ಷಬೇಧವನ್ನು ಮರೆತು ಹೋರಾಡುವ ಅಗತ್ಯ ಇಂದು ಸೃಷ್ಟಿಯಾಗಿದೆ. ಒಟ್ಟಾಗಿ ಹೋರಾಡೋಣ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಕೆ. ನೀಲಾ ಕರಡು ಘೋಷಣೆಯನ್ನು ಓದುವ ಮೂಲಕ ಸಮಾವೇಶದ ಕರಡು ನಿರ್ಣಯವನ್ನು ಮಂಡಿಸಿದರು.

ಹಸಿವಿನ ಸಾಮ್ರಾಜ್ಯ - ವಿ.ಜೆ.ಕೆ.ನಾಯರ್

ಸಮಾಜವಾದಿ ಸೋವಿಯತ್ ಒಕ್ಕೂಟದ ಬಿದ್ದ ನಂತರ ಬಂಡವಾಳಶಾಹಿ ಪ್ರಭುತ್ವ ಇಡೀ ಜಗತ್ತನ್ನು ಆಳುತ್ತಿದೆ. ಆದ್ದರಿಂದ ಇಂತಹ ಆಹಾರದ ಅಭಾವದ ಪರಿಸ್ಥಿತಿ ಸೃಷ್ಟಿಯಾಗಿದೆ.

ಕರ್ನಾಟಕದಲ್ಲಿ ಮೂರನೇ ಒಂದು ಭಾಗ ಕೃಷಿ ಭೂಮಿ ನಾಶವಾಗಿದೆ. ಜನ ಬದುಕನ್ನು ಕಳೆದುಕೊಂಡಿದ್ದಾರೆ. ಅವರಿಗೆ ಎಲ್ಲರೂ ಸಹಾಯ ಮಾಡಲು ಮುಂದೆ ಬಂದಿದ್ದೇ ಬಂದಿದ್ದು. ಆದರೆ ಎಷ್ಟು ಜನರಿಗೆ ಅದರ ಉಪಯೋಗವಾಗುತ್ತಿದೆ ಎಂಬುದು ಗೊತ್ತಿಲ್ಲ. ಎಡಪಕ್ಷಗಳ ನಿಯೋಗ ಹೋಗಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಪ್ರವಾಹ ಸಂತ್ರಸ್ತರ ಪುನರ್ವಸತಿಗಾಗಿ ಸಮಿತಿ ರಚಿಸುವಂತೆ ಕೋರಿದೆವು. ಆದರೆ ಯಡಿಯೂರಪ್ಪನವರು ಅದಕ್ಕೆ ಕಿವಿಗೊಡಲಿಲ್ಲ. ಆದರೆ ನಾವು ಅವರ ಪುನರ್ವಸತಿಗಾಗಿ ಕೆಲಸ ಮಾಡಬೇಕು.

ದೇಶದಲ್ಲಿ ಉಂಟಾಗಿರುವ ಆಹಾರದ ಬಿಕ್ಕಟ್ಟನ್ನು ಸರಿಪಡಿಸಲು ಆಗ್ರಹಿಸಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಪಕ್ಷಬೇಧವನ್ನು ಮರೆಯಬೇಕು ಚಳುವಳಿ ಮುಖ್ಯವಾಗಬೇಕು.

ಜನ ಚಳುವಳಿ ಬೆಳೆಯಲಿ - ಸಿದ್ದನಗೌಡ ಪಾಟೀಲ್

ಇವತ್ತಿನ ಸರ್ಕಾರಗಳು ಖಾಸಗೀ ಬಂಡವಾಳಕಾರರ ಕೃಪಾಕಟಾಕ್ಷಕ್ಕೆ ಒಳಗಾಗಿ ಅವರ ಅಣತೆಯಂತೆ ಸರ್ಕಾರ ನಡೆಸುತ್ತಿವೆ. ಆದರೆ ನಾವು ಜನತೆಗೆ ಬದ್ಧವಾಗಿ ಅವರ ಸ್ಥಿತಿಯನ್ನು ಉತ್ತಮಪಡಿಸಲು ಚಳುವಳಿಯನ್ನು ರೂಪಿಸಬೇಕಾಗಿದೆ.

ಕರ್ನಾಟಕದಲ್ಲಿ ನೆರೆಬಂದಾಗ ಪರಿಸ್ಥಿತಿಯನ್ನು
ಹೋಗಿ ಅವಲೋಕಿಸಬೇಕಾದ ಸಚಿವರು ಮೊ
ಕೋಮುವಾದಿ ಪಾಠವನ್ನು ಕೇಳುತ್ತಾ ಎ
ಮಾಡುತ್ತಿದ್ದರು. ಸುಳ್ಳು ಅಂಕಿ ಅಂಶಗ
ಹಣದೋಚಲು ಸೃಷ್ಟಿಸಲಾಯಿತು. ನಿಜ
ಫಲಾನುಭವಿಗಳಾಗಬೇಕಾಗಿದ್ದ ಜನರು ಅ
ಪಡೆಯಲಾಗಲಿಲ್ಲ. ಸ್ಥಳೀಯ ಎಂ.ಎಲ್.ಎ.
ನಾಯಕರು ಹಣ ದೋಚುತ್ತಿದ್ದಾರೆ ಎಂದು ಅ
ಗ್ರಾಮಾಧಿಕಾರಿಗಳೇ ಆರೋಪಿಸಿದ
ಪ್ರಾಮಾಣಿಕವಾಗಿ ಜನರಿಗೆ ಅಗತ್ಯವಸ್ತುಗ
ನೀಡಲು ಹೋದ ಜನರನ್ನು ಆರ್.ಎಸ್.
ಜನರು ತಡೆದು ತಾವು ತೆಗೆದುಕೊಂಡು ಹೋ
ಕೆಲಸ ಮಾಡುತ್ತಿದ್ದಾರೆ. ಅಂಗನವಾಡಿ ಆಹಾರ
ಇಂದು ಅಧಿಕಾರಶಾಹಿಗಳು ನುಂಗಿಹಾಕುತ್ತಿದ್ದಾ

ಪ್ರಹಾರದ ಅನಾಹುತ ಇಷ್ಟೆಲ್ಲಾ ಆಗಿದ್ದರು
ಜನ ಕೇಂದ್ರ ಮಂತ್ರಿಗಳಲ್ಲಿ ಒಬ್ಬರೂ ಬರ
ಕೆ.ಹೆಚ್.ಮುನಿಯಪ್ಪ ಬಂದು ಮುರಿದು
ಹಳಿಯನ್ನು ನೋಡಿ ವಾಪಸ್ಸಾದರು. ಅಗತ್ಯವ
ವಿತರಣೆಯಲ್ಲೂ ಇವತ್ತು ಮಾಲ್‌ಗಳು ಬಂದು
ದೋಚುತ್ತಿವೆ. ಇಂತಹವುಗಳ ವಿರ
ಹೋರಾಡಬೇಕಾದ ತೀವ್ರ ಅಗತ್ಯ ಇದೆ.

ಘನತೆಯಿಂದ ಬದುಕಲು ಬೇಕಿದೆ ನೆರವು

ಕೆ. ನೀಲಾ

ರಾಯಚೂರು ಜಿಲ್ಲೆಯ ತಲಮಾರಿ ಗ್ರಾಮದ ಜನ ...ವಾನು ಮೂರು ದಿನ ಕುತ್ತಿಗೆ ಮಟ್ಟ ನೀರಿನಲ್ಲಿ ...ತು ಸಾವಿನೊಂದಿಗೆ ಸೆಣಸಿದರು. ಆನಂತರ ಬಂದ ...ಕಾರಿ, ಚುನಾಯಿತ ಪ್ರತಿನಿಧಿಗಳ ಮೇಲೆ ...ಕ್ರೋಶಗೊಂಡು ಅಟ್ಟಾಡಿಸಿ ಸಿಟ್ಟು ವ್ಯಕ್ತಪಡಿಸಿದರು. ...ಲ ಉರಿ ದಾವಾಗ್ನಿಯಾಗಿ ವಾಹನಗಳು ...ತಿಯಾದವು.

ನಾವು ಗ್ರಾಮಗಳಿಗೆ ಭೇಟಿಯಾದಾಗ ಕಣ್ಣ ...ಯಲ್ಲಿ ಹನಿಯೊಂದು ಬಿಕ್ಕುತ್ತಲೇ ಇತ್ತು. ಎಲ್ಲ ...ಗಳದ್ದೂ ಕಣ್ಣೀರ ಕಡಲು. ಎಲ್ಲರದ್ದೂ ಪ್ರಕೃತಿ ...ಕೋಪದ ದಾಳಿಯನ್ನು ಎದುರಿಸಿದ ಧೈರ್ಯದ ಗಾಥೆ. ...ಲ್ಲಮ್ಮಕ್ಕ ಹೇಳುತ್ತಿದ್ದರು 'ರಾತೋ ರಾತ್ರಿ ನೋಡ ...ಡದ್ರಾಗ ಮಳಿ - ಸಂಗಾಟೇ ಹೊಳಿಬಂತು. ...ಕ್ಕ-ಮುದುಕ್ರಿಗೆ ಎಲ್ರಿಗೆ ಎಳ್ಕೊಂಡು ಊರ ...ಗುಡ್ಡ ಹತ್ತಿ ರಾತ್ರಿಬೆಳಗಾನಾ ನಿಂತೀವಿ. ...ಕಾ ಭರೋಸಾ ಇರ್ಲಿಲ್ಲ..". ನಮ್ಮ ಮನ್ಯಾನ ...ಷನ್ ಕಾರ್ಡ್‌ಗೊಳು ಸೈತ ನೀರ ಪಾಲಾಗ್ಯಾವ. ...ಂದ ಹ್ಯಾಂಗ? ಉಪಾಸ ಬೀಳಬೇಕಾ...?

...ಇದು ಸತ್ಯದ ಮಾತು. ಮಳೆಯಲ್ಲಿ 'ಇಸ್ಪೀಟ್ ...ಮ ಮನೆಗಳಂತೆ' ಪಟಪಟನೆ ಉರುಳುವಾಗ ...ರು ಜಾತಿ ಧರ್ಮ ಮರೆತು ಎತ್ತರದ ನೆಲ ಅರಸಿ ...ಗ್ಗಿ ಹೊರಟರು. ಪರಸ್ಪರ ರಕ್ಷಿಸಿಕೊಂಡರು. ...ದು ಹೋಗಿರುವ ವಸ್ತುಗಳಲ್ಲಿ ಅತಿ ...ಖ್ಯವಾದದ್ದು ರೇಷನ್ ಕಾರ್ಡ್. ಸರ್ಕಾರ ...ತ್ತಿರುವ 20 ಕೆ.ಜಿ. ಅಕ್ಕಿ ಮತ್ತಿತರ ಪದಾರ್ಥ ...ದು ತಿಂಗಳಲ್ಲಿ ಮುಗಿಯುತ್ತದೆ. ಮುಂದೆ...?

...ವಿಭೂತಿ ಹಳ್ಳಿಯ ಹೆಣ್ಣುಮಕ್ಕಳು ಅದರಲ್ಲಿಯೂ ...ತ ಕೇರಿಯವರು ರಾತೋ ರಾತ್ರಿ ಸೊಂಟದ ...ನೀರು ದಾಟುತ್ತ ರಕ್ಷಣಾ ತಾಣ ಹುಡುಕಿ ...ದ್ದೊಂದು ಸಾಹಸಮಯೇ. ಬಾಣಂತಿ ...ವನ್ನಿಟ್ಟುಕೊಂಡು ಎದುರಿಸಿದ ಪರಿ ಧೈರ್ಯದ ...ವೇ.

...ಹಾವಿನಾಳದ ಯುವಕ ತನ್ನ ಅಳಲು ...ಡಿಕೊಳ್ಳುತ್ತಿದ್ದ. ಸರ್ಕಾರಿ ನಿಯಮದ ಚೌಕಟ್ಟಿಗೆ ...ಹಾನಿ ಅವನದಾಗಿತ್ತು. ಹೊಲದ ಮನೆಯಲ್ಲಿ ...ರಿಸಿಟ್ಟ ಗೊಬ್ಬರದ ನೀರು ಚೀಲ ನೀರಲ್ಲಿ ...ದುಹೋಗಿದೆ. ಇದಕ್ಕೆ ಪರಿಹಾರವಿಲ್ಲ. ಅದೇ ...ನ ಮುದುಕನೊಬ್ಬ ಎಲ್ಲರೂ ತನ್ನನ್ನು ಬಿಟ್ಟು ...ರಸಿ ಹೋದ ಮೇಲೆ ಎದೆ ಒಡೆದು ಮೃತ ...ದ್ದಾನೆ. ಇವರು ಮನೆ ಬಿದ್ದೋ ಅಥವಾ ...ಹಕ್ಕೆ ಸಿಕ್ಕಿಲ್ಲ ಮೃತ ಪಟ್ಟಿಲ್ಲ. ಹೀಗಾಗಿ ಇವನ ಸಾವಿಗೆ ಪರಿಹಾರವಿಲ್ಲ ಎಂಬುದು ಅಧಿಕಾರಿಗಳ ಪ್ರತಿಕ್ರಿಯೆ! ಇದು ಎಷ್ಟು ಸರಿ?

ಗ್ರಾಮೀಣ ಪ್ರದೇಶದ ಕಾಯಕಜೀವಿಗಳು ಬರಿದಾದ ಮನೆ ಖಾಲಿ ಹೊಲ ನೋಡುತ್ತ ಕಂಗೆಟ್ಟ ಹೊತ್ತಲ್ಲಿಯೂ ಸರಕಾರ ರೇಗಾ ಬಲಪಡಿಸುವ ಮಾತಾಡುತ್ತಿಲ್ಲ ಅಂದರೆ ಹೇಗೆ? ಜನರು ಘನತೆಯಿಂದ ಬದುಕಲು ಉದ್ಯೋಗ, ಅನ್ನ ಮತ್ತು ಸೂರು ಅವರ ಹಕ್ಕಾಗಬೇಕು. ಹಂಗಿನ ದಾನಕ್ಕಿಂತಲೂ ಸ್ವಾಭಿಮಾನದ ದುಡಿಮೆ ಮತ್ತು ತಕ್ಕ ವೇತನದಿಂದ ನಮ್ಮ ಗ್ರಾಮದ ಜನತೆಯನ್ನು ರಕ್ಷಿಸಲು ಸಾಧ್ಯ.

ಸುರಪೂರ ತಾಲ್ಲೂಕಿನ ರೈತನೊಬ್ಬ ತನ್ನ ಗದ್ದೆಯ ಬತ್ತದ ಬೆಳೆ ತೋರಿಸಿದ. ತುದಿ ಪೂರ ಸುಟ್ಟು ಹೋದಂತಾಗಿದೆ. ಖಂಡಿತ ಬೆಳೆ ಬರುವುದಿಲ್ಲ. ಆದರೆ ಇದಕ್ಕೆ ಬೆಳೆ ಹಾನಿ ಪರಿಹಾರ ಸಿಗುವುದಿಲ್ಲ ಅಂದರೆ ಹೇಗೆ?

ಈ ಪ್ರವಾಹದಲ್ಲಿ ಕೈ-ಕಾಲು ಇಲ್ಲದವರು, ಕಣ್ಣಿಲ್ಲದವರು ಕಲ್ಲು ಕರಗುವಂಥ ಕಷ್ಟ-ವೇದನೆ ಅನುಭವಿಸಿದ್ದಾರೆ. 40 ವಯಸ್ಸಿನ ಎರಡೂ ಕಾಲಿಲ್ಲದ ಮಗಳನ್ನು ವಯಸ್ಸಾದ ತಂದೆ ಎಲ್ಲಿಗೆ ಹೊತ್ತೊಯ್ಯುವುದು?

ವೀರಗೋ... ಸ ಮರೆಮ್ಮ ತೋಯ್ದ ಜೋಳವನ್ನು ಬಿಸಿಲಿಗೆ ಒಣಹಾಕಿ ಮರದ ನೆರಳಿಗೆ ಕೂತು ಕಣ್ಣೀರು ಹನಿಸುತ್ತಿದ್ದಳು. ಮನೆಯೊಳಗಿನ ಎಲ್ಲ ದವಸ ಧಾನ್ಯಗಳು ಹರಿದುಹೋಗಿವೆ. ನೆನೆದು ಹಾಳಾಗಿವೆ. ಮುಗ್ಗಾದ ಧಾನ್ಯಗಳನ್ನು ಮುಷ್ಟಿತುಂಬ ತರುವಾಗ ಅವರು ಬಿಕ್ಕುತ್ತಿದ್ದರು.

ಜನರ ಈ ಗೋಳು ಸರ್ಕಾರ ನಿವಾರಿಸಿದೆಯೋ?

ಯಡಿಯೂರಪ್ಪ ವಾರಗಟ್ಟಲೇ ಧಾವಿಸಿದ್ದು ಬಿಜೆಪಿ ಗೆದ್ದ ಕ್ಷೇತ್ರಗಳಿಗೆ ಮಾತ್ರ. ಪರಿಹಾರ ತಲುಪಿಸಿದ್ದೂ ಅಲ್ಲೇ. ನೆರೆಯ ಮತ್ತು ಜನರ ಬವಣೆ - ಕಷ್ಟದ ಮೇಲೆ ಬಿಜೆಪಿಯ ತನ್ನ ಸಿದ್ಧಾಂತದ ರಾಜಕಾರಣದ ಹಂಚಿಟ್ಟು ಬೇಳೆ ಬೇಯಿಸಿಕೊಳ್ಳುತ್ತಿದೆ. ಮೊಸಳೆ ಕಣ್ಣೀರು ಸುರಿಸುವುದರಿಂದ ಸಮಸ್ಯೆಗೆ ಪರಿಹಾರವಿಲ್ಲ. ಇದು ಜನತೆಯ ಅರಿವಿಗೆ ಬರುತ್ತಿದೆ.



ಈ ಬಾರಿ ಉತ್ತರ ಕರ್ನಾಟಕವು ಬರ ಮತ್ತು ನೆರೆ ಹಾವಳಿಗೆ ತತ್ತರಿಸಿ ಹೋಗಿದೆ. ಹೊಲ ಗದ್ದೆಗಳಲ್ಲಿನ ಬೆಳೆ ಬೆಳೆಯೊಂದಿಗೆ ಫಲವತ್ತಾದ ಮಣ್ಣು, ಮಳೆ ಮತ್ತು ಪ್ರವಾಹಕ್ಕೆ ಕೊಚ್ಚಿ ಹೋಗಿದೆ. ಬರಡು ನೆಲವನ್ನು ಫಲವತ್ತಾಗಿಸಲು ದೀರ್ಘ ಕಾಲವೇ ಬೇಕಾದೀತು. ಮನೆ ಮನೆಯೊಳಗಿನ ಎಲ್ಲ ವಸ್ತುಗಳು ನೀರು ಪಾಲಾಗಿವೆ. ವಿದ್ಯಾರ್ಥಿ ಮಕ್ಕಳ ವಿದ್ಯಾಭ್ಯಾಸದ ಸಾಮಗ್ರಿಗಳು ಪೂರ್ತಿ ನೀರಲ್ಲಿ ಹರಿದು ಹೋಗಿವೆ. ಆದಾಗ್ಯೂ, ಮಕ್ಕಳು ಮತ್ತು ಮಹಿಳೆಯರು ತುಂಬ



ಧೈರ್ಯದಿಂದ ಪ್ರಕೃತಿಯ ಸಿಟ್ಟನ್ನು ಎದುರಿಸಿದ್ದಾರೆ. ಗ್ರಾಮೀಣ ಪ್ರದೇಶದ ಈ ಜನತೆ ಘನತೆಯಿಂದ ಬದುಕಲು ಸಮಸ್ತ ಜನತೆ ನೆರವಾಗಬೇಕು. ಅದರಲ್ಲಿಯೂ ಸರಕಾರದ ಪಾತ್ರ ಪ್ರಮುಖವಾಗಿದೆ. ನೀತಿ ನಿರೂಪಣಾ ಸ್ಥಾನದಲ್ಲಿದ್ದವರು ತೀವ್ರ ಜನಪರ ಬದ್ಧತೆಯಿಂದ ಅಚಲ ಮಾನವೀಯ ದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕಾದ ಸತ್ವ ಪರೀಕ್ಷೆಯ ಸಮಯವಿದು.

ಪರಿಹಾರ ಪ್ರಹಸನ

ಈಗ ಮಳೆ ನಿಂತಿದೆ. ಹೊಳೆ ಇಳಿದಿದೆ. ಎಲ್ಲ ಹಳ್ಳಿಗಳಲ್ಲಿ ವಿಚಿತ್ರ ಮೌನವೊಂದು ಠಳಾಯಿಸುತ್ತಿದೆ. ಸರಕಾರ ಆ ಕ್ಷಣದಲ್ಲಿ ಕೊಟ್ಟ ರೇಷನ್ ಕೆಲ ದಿನಕೆ ಅನ್ನವಾಗುತ್ತಿದೆ. ಕನಿಕರದಿಂದ ದಾನಿಗಳು ಕೊಟ್ಟ ವಸ್ತುಗಳು ಒಂದಿಷ್ಟು ಆಸರೆಯಾಗಿದೆ. ದೂರದ ಸಂಬಂಧಿಕರು ನೆರವಿಗೆ ಧಾವಿಸಿದ್ದಾರೆ. ಕ್ರಮೇಣ ಹೀಗೆ ಕೊಡುವ ಕೈಗಳೂ ದಣಿಯಬಹುದು. ಆದರೆ ತಾತ್ಕಾಲಿಕ ಪರಿಹಾರವು ಭರವಸೆಯ ಬದುಕು ಕಟ್ಟಬಹುದೇ? ಚರಾಚರ ಜೀವಿಗಳ ಹೊಟ್ಟೆಗೆ ಅನ್ನ ಕೊಡುವ ಅನ್ನದಾತ ಕೃಷಿಕ ಕೂಲಿಕಾರ್ಮಿಕರು ಅಕ್ಷರಶಃ ದಯನೀಯ ಸ್ಥಿತಿಗೆ ತಲುಪಿದ್ದಾರೆ. ದೇಶದ ಆಧಾರವಾದ ಇವರ ಭವಿಷ್ಯವನ್ನು ರಕ್ಷಿಸಲು ಸರಕಾರದ ಯೋಜನೆಗಳೇನು? 'ಘೋಷಿಸಿದ ಪರಿಹಾರವೇನು?' 'ಅನ್ನ ವಸತಿ ಉದ್ಯೋಗದ ಗ್ಯಾರಂಟಿ ಏನಾದರೂ ಕೊಟ್ಟಿದ್ದಾರೆಯೇ?'

ಸಂಪೂರ್ಣ ಮುಳುಗಡೆಯಾದ 121 ಗ್ರಾಮಗಳನ್ನು ಸ್ಥಳಾಂತರಿಸಲು ಸರಕಾರ ನಿರ್ಣಯಿಸಿದೆ. ಬಿದ್ದ ಮನೆಗಳನ್ನು ಕಟ್ಟಲು ಮತ್ತು ರಿಪೇರಿಗಾಗಿ ನಿಗದಿಸಿದ ಮಾನದಂಡವೂ ಬಡವರೊಂದಿಗೆ ಮಾಡಿದ ತಾರತಮ್ಯವೇ ಆಗಿದೆ. ಪಕ್ಕಾ ಮನೆಗಳೆಂದರೆ ಆರ್‌ಸಿಸಿ ಮನೆಗಳು. ಹಳ್ಳಿಗಳಲ್ಲಿ ಸಾಮಾನ್ಯ ಬಡವರದ್ದು ಮಣ್ಣಿನ ಮನೆಗಳು. ಅವರಿಗೆ ಹೆಚ್ಚಿನ ನೆರವಿಲ್ಲ. ಅಂದರೆ ಮುಂದಿನ ದಿನಗಳಲ್ಲಿ ಅಸಂಖ್ಯಾತ ಜನತೆ ವಸತಿಹೀನರಾಗಿಯೇ ಉಳಿಯುವಂತಾಗುತ್ತದೆ. ರೈತರ ಬೆಳೆ ಪರಿಹಾರ ಧನವಂತೂ ಅತ್ಯಂತ ಅವೈಜ್ಞಾನಿಕ ಮೊತ್ತವೇ ಆಗಿದೆ. (ನೀರಾವರಿ ಇದ್ದಲ್ಲಿ ಹೆಕ್ಟೇರ್‌ಗೆ ನಾಲ್ಕು ಸಾವಿರ ರೂ. ಒಣ ಬೇಸಾಯ ಹೆಕ್ಟೇರ್‌ಗೆ ಎರಡು ಸಾವಿರ ರೂ. ವರ್ಷದ ಬೆಳೆಗೆ ಹೆಕ್ಟೇರ್‌ಗೆ ಆರು ಸಾವಿರ ರೂ.!)

ಕಳೆದ ಅನೇಕ ವರ್ಷಗಳಿಂದ ರಾಜ್ಯದಲ್ಲಿ ರೇಷನ್ ಕಾರ್ಡ್ ಹಂಚಿಕೆಯ ಕುರಿತು ಒಂದು ದೀರ್ಘ ಪ್ರಹಸನವೇ ನಡೆಯುತ್ತಿದೆ. ಕಾರ್ಡುಗಳ ಬಣ್ಣ ಬದಲಾವಣೆ, ಮತ್ತೆ ಮತ್ತೆ ಸಮೀಕ್ಷೆ ನಡೆಯುತ್ತಿದೆ. ಈ ಮುಗಿಯದ ಪ್ರಕ್ರಿಯೆಯ ಫಲಿತಾಂಶವೇನೆಂದರೆ ಶ್ರೀಮಂತರಿಗೆ ಬಿಪಿಎಲ್ (ಬಡತನ ರೇಖೆ ಕೆಳಗಿರುವ) ಕಾರ್ಡುಗಳು, ಬಡವರಿಗೆ ಎಪಿಎಲ್ (ಬಡತನ ರೇಖೆ ಮೇಲಿರುವ) ಕಾರ್ಡುಗಳು ದೊರೆತಿವೆ! ಇನ್ನು ಬಹಳಷ್ಟು ಬಡಜನತೆ ಕಾರ್ಡುಗಳಿಂದ ವಂಚಿತರಾಗಿದ್ದಾರೆ. ಈ ಸರಕಾರವೂ ಸಹ ಈ ಸಮಸ್ಯೆ ಬಗೆಹರಿಸಿಲ್ಲ. ಎರಡು ರೂಪಾಯಿಗೆ ಕೇಜಿ ಅಕ್ಕಿ ವಿತರಿಸುವ ಭರವಸೆಯು ಚುನಾವಣೆ ಸಂದರ್ಭದಲ್ಲಿ ಇತರೆ ರಾಜಕೀಯ ಪಕ್ಷಗಳೂ ಮತ್ತು ಈಗ ಅಧಿಕಾರದಲ್ಲಿರುವ ಪಕ್ಷವೂ ಕೊಟ್ಟಿತ್ತು. ಆದರೆ ಪ್ರವಾಹ ಮತ್ತು ಮಳೆಯಿಂದ ಜನರು ಜರ್ಜರಿತರಾದ ಸಂದರ್ಭದಲ್ಲಿಯಾದರೂ ಈ ಭರವಸೆ ಈಡೇರಿಸಿ ಪೌಷ್ಟಿಕ ಆಹಾರ ವಿತರಿಸುವ ಗ್ಯಾರಂಟಿ ಯಾಕೆ ಕೊಡಬಾರದು? ಅನ್ನ ಬೆಳೆಯುವ ರೈತರನ್ನು ಕೃಷಿ ಕಾರ್ಮಿಕರನ್ನು ಮೊದಲು ರಕ್ಷಿಸುವ ಹೊಣೆ ಸರಕಾರ ಹೊರಬೇಕಲ್ಲವೇ?

ಕಾದಿದ್ದಾರೆ ಜನ, ಕೊಡಿ ಕೆಲಸ

ಯಾರಾದರೂ ಬಂದು ತಮ್ಮ ಕತ್ತಲ ಬದುಕಿಗೆ ಬೆಳಕು ನೀಡಿಯಾರೇ ಎಂದು ಹಳ್ಳಿಗಳ ಜನರು ಕಂಗಾಲಾದ ಕಣ್ಣಿಂದ ಕಾಯುತ್ತಿದ್ದಾರೆ. ಅವರ ಅಸಹಾಯಕತೆ ಕರುಳಿರಿಯುತ್ತದೆ. ಇಂಥ ಪರಿಸ್ಥಿತಿಯಲ್ಲಿ ಅವರ ಕೈಗೊಂದು ಕೆಲಸ ಕೊಟ್ಟು ಅವರೊಳಗೆ ಬದುಕು ಜೈಸುವ ಛಲ ತುಂಬಿ ಸ್ವಾಭಿಮಾನದ ಬತ್ತಿ ಬೆಳಗಬೇಕಾದ ಜವಾಬ್ದಾರಿ ಸರಕಾರದ್ದು. ಮತ್ತು ಇಂಬಾಗಿ ನಿಲ್ಲಬೇಕಾದುದ್ದು ಪ್ರಜ್ಞಾವಂತ ಜನತೆಯದ್ದು. ಈಗಾಗಲೇ ದೇಶದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ - 2005 ಜಾರಿ ಮಾಡಲು ನಿರ್ಧರಿಸಲಾಗಿದೆ. ಕೋಟಿಗಟ್ಟಲೇ ಹಣ ಕಾಯ್ದಿರಿಸಲಾಗಿದೆ. ದುರಂತವೆಂದರೆ ಉತ್ತರ ಕರ್ನಾಟಕದಿಂದಲೇ ಪ್ರತಿ ವರ್ಷ ಗ್ರಾಮೀಣ ಜನರು ಉದ್ಯೋಗ ಹುಡುಕಿ ವಲಸೆ ಹೋಗುತ್ತಾರೆ. ಸಣ್ಣ ರೈತರು ಮತ್ತು ಕೃಷಿ ಕೂಲಿಕಾರ್ಮಿಕರು

ಪುಟ 14ಕ್ಕೆ

ಬಿಜೆಪಿಯ ಕಿತ್ತಾಟಗಳು...


ಪುಟ 5 ರಿಂದ

ತುಳಿಯುತ್ತಾ (ಜಾತಿಯ ಹೆಸರಿನಲ್ಲಿ) ಮೇಲಕ್ಕೆ ಬಂದ ಯಡಿಯೂರಪ್ಪನಿಗೆ ಸಲ್ಲಲೇಬೇಕಾದ ಶಿಕ್ಷೆ ಇದು. ನಿನ್ನೆಯ ದಿನ (27-11-2009) ರಾತ್ರಿ ಟಿ.ವಿ.ಯನ್ನು ನೋಡಿದವರಿಗೆ ಖಂಡಿತ ಇದು ಯಡಿಯೂರಪ್ಪನಿಗೆ ಆಗಬೇಕಾದ ಶಿಕ್ಷೆ ಎಂದು ಹೇಳಲೇಬೇಕು. ಬೆಂಗಳೂರಿನ ಯಾವುದೋ ಕಾಲೇಜು ವಿದ್ಯಾರ್ಥಿಗಳ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅಧಿಕಾರ ಬರುತ್ತೆ ಹೋಗುತ್ತೆ ಎಂದು ಹೇಳುತ್ತಲೆ ಒಳ್ಳೆಯ ಕೆಲಸ ಮಾಡಿದರು ಜನ ಹಿಂಸೆ ಕೊಡುತ್ತಾರೆಂದು ಹೇಳಿ ದುಃಖದಿಂದ ಕಣ್ಣೀರು ಹಾಕಿದ್ದು ನೋಡಿದರೆ ಇದು ಶಿಕ್ಷೆ ಅನ್ನಿಸುವುದಿಲ್ಲವೇ? ಅದೂ ಒಂದು ರಾಜ್ಯದ ಮುಖ್ಯಮಂತ್ರಿ ವಿದ್ಯಾರ್ಥಿಗಳ ಮುಂದೆ ಸಾರ್ವಜನಿಕವಾಗಿ. ರಾಜಕೀಯ ಮುಖಂಡರಿಗೆ ಇದಕ್ಕಿಂತ ಶಿಕ್ಷೆ ಬೇರಾವುದಿದೆ? ಇವರು ಕಣ್ಣೀರು ಹಾಕಿದ್ದು ಏಕೆ? ಉತ್ತರ ಕರ್ನಾಟಕದಲ್ಲಿ ದಶಕಗಳ ತರುವಾಯ ಉಂಟಾದ ನೆರೆಯಲ್ಲಿ ಕೊಚ್ಚಿಹೋದ ಜನರನ್ನು ಸಂತೈಸಲು ಹೋದಾಗಲಾಗಲಿ, ಅಳಿದು ಉಳಿದವರು ಇವರ ಮುಂದೆ ತೋಡಿಕೊಂಡ ಆಕ್ರಂದನದಿಂದಾಗಲಿ ಇವರ ಕಣ್ಣಲ್ಲಿ ನೀರು ಬರಲಿಲ್ಲ. ಇದ್ದಕ್ಕಿದ್ದ ಹಾಗೆ ಕಣ್ಣೀರು ಬಂದಿದ್ದು ಕೇವಲ ಅಧಿಕಾರ ಹೋಗುತ್ತೇನೋ ಎಂಬ ಭಯದಿಂದ. ಇಂತಹ ಮುಖ್ಯಮಂತ್ರಿಯೊಬ್ಬರನ್ನು ಹೊಂದಿರುವುದೇ ಈ ರಾಜ್ಯದ ದುರಂತ.

ಇಷ್ಟಕ್ಕೂ ಈ ರಾಜಕೀಯ ಬಿಕ್ಕಟ್ಟು ಮತ್ತು ಆಂತರಿಕ ಭಿನ್ನಾಭಿಪ್ರಾಯಗಳು ಯಾವ ಕಾರಣಕ್ಕೆ ? ರಾಜ್ಯದ ಹಿತ ದೃಷ್ಟಿಯಿಂದಲೆ, ಅಥವಾ ಜನತೆಯ ಹಿತ ದೃಷ್ಟಿಯಿಂದಲೆ? ಖಂಡಿತಾ ಅಲ್ಲಾ. ಯಾಕೆಂದರೆ ಜನಾರ್ದನರೆಡ್ಡಿ ಮತ್ತು ಗ್ಯಾಂಗ್ ಬಿನ್ನಾಭಿಪ್ರಾಯಗಳಿಗೆ ಅವರು ಕೊಟ್ಟಿರುವ ಕಾರಣಗಳೇನು? ನೋಡಿದರೆ ತಿಳಿಯುತ್ತದೆ.

- ಅದಿರು ಸಾಗಿಸುವ ಲಾರಿಗಳ ಮೇಲೆ ಹಾಕಿರುವ 1000.00 ರೂಗಳ ಶುಲ್ಕ ರದ್ದಾಗ ಬೇಕು.
- ರಾಜೀವ ಚಂದ್ರಶೇಖರ್ ಎಂಬುವರಿಗೆ ನೆರೆ ಪರಿಹಾರದ ಉಸ್ತುವಾರಿ ಏಕೆ ಕೊಟ್ಟಿರಿ ?
- ಗದಗ ಜಿಲ್ಲಾಧಿಕಾರಿಗಳನ್ನು ಯಾಕೆ ವರ್ಗಾವಣೆ ಮಾಡಿದಿರಿ?
- ಮುಖ್ಯಮಂತ್ರಿಗಳ ಕಾರ್ಯದರ್ಶಿ ಮತ್ತು ಒಬ್ಬ ಮಹಿಳಾ ಮಂತ್ರಿಗಳು ಯಾಕೆ ಹಸ್ತಕ್ಷೇಪ ಮಾಡುತ್ತಾರೆ? ಎಂಬ ಬಗ್ಗೆ.

ಇದರಲ್ಲಿ ಯಾವುದಾದರೂ ಒಂದು ಕೂಡಾ ರಾಜ್ಯದ ಹಿತಕ್ಕೆ ಸಂಬಂಧಿಸಿದ್ದಲ್ಲ. ಇದು ಕೇವಲ ಅದಿರು ಸಾಗಣಿಕೆಯಲ್ಲಿ ಸಾರ್ವಭೌಮತ್ವವನ್ನು ಪಡೆದಿರುವ ಜನಾರ್ದನ ರೆಡ್ಡಿ ಗ್ಯಾಂಗ್ ಅದಿರಿನ ಮೇಲೆ ಹಾಕಿರುವ 1000-00 ಶುಲ್ಕದಿಂದ ರೆಡ್ಡಿ ಕಂಪನಿಗೆ ತಿಂಗಳಿಗೆ 111 ಕೋಟಿ ರೂಗಳು ನಷ್ಟವಾಗುತ್ತದೆ. ತಿಂಗಳಿಗೆ 111 ಕೋಟಿಗಳಷ್ಟು ಹಣವನ್ನು ಕಳೆದುಕೊಂಡು ಯಡಿಯೂರಪ್ಪನವರಿಗೆ ಬೆಂಬಲ ಕೊಡಬೇಕೆ? ಇದಕ್ಕೋಸ್ಕರವೇನಾ ಕೊಟ್ಯಾಂತರ ಹಣಕೊಟ್ಟು ಪಕ್ಷೇತರ ಶಾಸಕರನ್ನು ಖರೀದಿಸಿ ಯಡಿಯೂರಪ್ಪನನ್ನು ಮುಖ್ಯಮಂತ್ರಿ ಮಾಡಿದ್ದು? ಇದಕ್ಕೋಸ್ಕರವೇನಾ ಆಪರೇಷನ್ ಕಮಲವೆಂಬ ಅತ್ಯಂತ ಕೊಳಕು ಪ್ರಜಾಪ್ರಭುತ್ವ ವಿರೋಧಿ ರಾಜಕೀಯ ಮಾಡಿ ಸರ್ಕಾರಕ್ಕೆ ಬಹುಮತ ಕೊಡಿಸಿದ್ದು? ಈಗ ಸಾವಿರ ಸಾವಿರ ಕೋಟಿಗಳು ನೆರೆ ಪರಿಹಾರಕ್ಕಾಗಿ ಹರಿದು ಬರುತ್ತಿದೆ. ಇಷ್ಟು ಹಣದ



ವಿತರಣೆಯ ಜವಾಬ್ದಾರಿಯನ್ನ ಯಾರೋ ಒಬ್ಬ ಉದ್ಯಮಿಗೆ ಕೊಟ್ಟರೆ (ಅವರು ಕೊಟ್ಟಿರುವ ಉದ್ದೇಶವೇ ಬೇರೆ) ನಾವು ಸುಮ್ಮನೆ ನೋಡುತ್ತಿರಬೇಕೆ? ಈ ಹಣದಲ್ಲಿ ನಮಗೆ ಭಾಗ ಬೇಡವೆ? ಇಷ್ಟಕ್ಕೂ ನಮ್ಮ ಪಾಳೇಗಾರಿಕೆಯಲ್ಲಿ ಯಾರೋ ಬಂದು ಅಧಿಪತ್ಯ ಮಾಡಿದರೆ ನಾವು ನೋಡಿಕೊಂಡಿರಬೇಕೆ?. ಗದಗದ ಕಪ್ಪತ ಗುಡ್ಡದ ಅದಿರನ್ನು ಲೂಟಿ ಹೊಡೆಯುವುದನ್ನು ರಕ್ಷಣೆ ಮಾಡುತ್ತಿದ್ದ ತಮ್ಮ ಚೇಲಾ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡಿದರೆ ಸುಮ್ಮನಿರಬೇಕೆ?. ಇಡೀ ಯಡಿಯೂರಪ್ಪನ ಸರ್ಕಾರ ಮತ್ತು ಯಡಿಯೂರಪ್ಪ ನಮ್ಮ ಹಿಡಿತದಲ್ಲಿಲ್ಲದೆ ಒಬ್ಬ ಹೆಣ್ಣು ಮಗಳ ಹಿಡಿತಕ್ಕೆ ಹೋದರೆ ನಾವು ಬದುಕುವುದು ಹೇಗೆ? ಎಂಬ ಆತಂಕಗಳ ಪರಿಣಾಮಗಳ ಹಿನ್ನಲೆಯಲ್ಲಿ ಬಿ.ಜೆ.ಪಿ.ಯಲ್ಲಿನ ಬ್ಲಾಕ್‌ಮೈಲ್ ರಾಜಕೀಯವನ್ನು ನೋಡಬೇಕಿದೆ.

ಸ್ವಾರ್ಥಿಗಳ ತಿಕ್ಕಾಟ

ಬಿ.ಜೆ.ಪಿ.ಯಲ್ಲಿ ರಾಜಕೀಯ ಬಿಕ್ಕಟ್ಟನ್ನು ಪರಿಹಾರ ಮಾಡಲು ಕೇಂದ್ರ ನಾಯಕರು ಧಾವಿಸಿದ್ದಾರೆ. ಆದರೆ ಬಿ.ಜೆ.ಪಿ. ಪರಿಸ್ಥಿತಿ ಹೇಗಿದೆಯೆಂದರೆ ಯಾರ ಮಾತನ್ನು ಯಾರು ಕೇಳುವ ಸ್ಥಿತಿಯಲ್ಲಿ ಇಲ್ಲಾ. ಇದು ರಾಜಕೀಯ ಬಿಕ್ಕಟ್ಟು ಅಲ್ಲ. ಸೈದ್ಧಾಂತಿಕ ಬಿಕ್ಕಟ್ಟೂ ಅಲ್ಲ. ಇಲ್ಲಿ ಬರಿ ಸ್ವಹಿತಾಸಕ್ತಿಗಳ ಮಧ್ಯ ಬಂದಿರುವ ಬಿಕ್ಕಟ್ಟು. ಈ ಹಿತಾಸಕ್ತಿಗಳು ಅಧಿಕಾರ ದಾಹದ ಮತ್ತು ಆರ್ಥಿಕ ಲಾಭದ ಮಧ್ಯೆ ಉಂಟಾಗಿರುವ ಬಿಕ್ಕಟ್ಟು. ತನ್ನ ಆರ್ಥಿಕ ಹಿತಾಶಕ್ತಿಗಳಿಗೆ ಹೊಡೆತ ಬಿದ್ದಿರುವುದರಿಂದ ರೆಡ್ಡಿ ಸಹೋದರರು ಬ್ಲಾಕ್ ಮೈಲ್ ರಾಜಕಾರಣವನ್ನು ಪ್ರಾರಂಭಿಸಿದ್ದಾರೆ. ರೆಡ್ಡಿ ಸಹೋದರರ ಬ್ಲಾಕ್‌ಮೈಲ್ ರಾಜಕಾರಣವನ್ನು ಹೊಸದೇನು ಅಲ್ಲ. ಈ ರೀತಿಯ ಬ್ಲಾಕ್‌ಮೈಲ್ ರಾಜಕಾರಣವನ್ನು ಸರ್ಕಾರ ರಚನೆ ಯಾದಾಗಿನಿಂದಲೂ ಹಲವಾರು ಸಂದರ್ಭಗಳಲ್ಲಿ ಮಾಡಿ ಯಶಸ್ವಿಯಾಗಿದ್ದರು. ಆದರೆ ಈ ಬಾರಿ ಯಾಕೋ ಎಡವಟ್ಟಾಗುವ ಪರಿಸ್ಥಿತಿ ರೆಡ್ಡಿ ಸಹೋದರರಿಗೆ ಎದುರಾದಂತೆ ಕಾಣುತ್ತದೆ. ಎಂದೂ ಇಲ್ಲದ ರೀತಿಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ನವರು ಧೈರ್ಯ ತೋರಲಾರಂಬಿಸಿದ್ದಾರೆ. ಅದರ ಬಾಗವಾಗಿ ಬಳ್ಳಾರಿ ಜಿಲ್ಲಾಡಳಿತದ ಪ್ರಮುಖ ಮುಖ್ಯಸ್ಥರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿರುವುದು ನೋಡಿದರೆ ಧೈರ್ಯವೆನ್ನುವುದಕ್ಕಿಂತ ಬ್ಲಾಕ್‌ಮೈಲ್ ರಾಜಕಾರಣಕ್ಕೆ ಬೆದರಿಕೆಯ ರಾಜಕಾರಣದ ತಿರುಗೇಟು ನೀಡಿದ್ದಾರೆ. ಯಡಿಯೂರಪ್ಪನಿಗೆ ಈ ಧೈರ್ಯ ಬರಲು ಪ್ರಮುಖ ಎರಡು ಕಾರಣಗಳು. ಒಂದು ಆಂಧ್ರದ ದಿವಂಗತ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯವರ ಆಕಾಲಿಕ ನಿಧನದಿಂದ ಬಳ್ಳಾರಿ ಧಣಿಗಳ ರಾಜಕೀಯ ಬಲ ಕುಗ್ಗಿದೆ ಮತ್ತು ಬಿ.ಜೆ.ಪಿ ಯ ದುರ್ಬಲ ಕೇಂದ್ರ ನಾಯಕತ್ವ ಯಡಿಯೂರಪ್ಪನನ್ನು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಇದಕ್ಕೆ ಇತ್ತೀಚೆಗೆ ನಡೆದ 3 ರಾಜ್ಯಗಳ ವಿಧಾನಸಭಾ ಫಲಿತಾಂಶಗಳಿಂದಾಗಿ ಬಿ.ಜೆ.ಪಿ. ಸಂಪೂರ್ಣವಾಗಿ ಅಸಹಾಯಕ ಸ್ಥಿತಿಗೆ ತಲುಪಿದೆ. ಹಾಗಾಗಿ ಯಡಿಯೂರಪ್ಪಗೆ ಇಷ್ಟು ದೈರ್ಯ ಬಂದಿದೆ.

ಉತ್ತರ ಕರ್ನಾಟಕದ ಪರ ವಕಾಲತ್ತು!!

ಈ ಮಧ್ಯೆ ಯಡಿಯೂರಪ್ಪರ ವಿರೋಧಿ ಪಾಳಯದಲ್ಲಿನ ನಾಯಕರು ರೆಡ್ಡಿ ಸಹೋದರರ ಬೆಂಬಲ ಪಡೆದು ಯಡಿಯೂರಪ್ಪರ ಮುಖ್ಯಮಂತ್ರಿ ಗಾಧಿಯಿಂದ ಕೆಳಗಿಳಿಸುವ ಸಾಹಸ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಯಾಕೆಂದರೆ ಕೇಂದ್ರದ ನಾಯಕತ್ವದ ಬೆಂಬಲದ ಬಗೆಗಿನ ಅನುಮಾನ ಮತ್ತು ರೆಡ್ಡಿ ಸಹೋದರರ ಬಲಾಬಲದ ಬಗೆಗಿನ ಸಂಶಯ. ಹಾಗಾಗಿ ಯಡಿಯೂರಪ್ಪನ ವಿರೋಧಿ ಪಾಳಯದಲ್ಲಿ ಗುರ್ತಿಸಿ ಕೊಂಡಿರುವ ಹಾಲಿ ವಿಧಾನ ಸಭಾಧ್ಯಕ್ಷ ಜಗದೀಶ್‌ಶೆಟ್ಟರನ್ನು ಜನಾರ್ದನ ರೆಡ್ಡಿರವರ ಗುಂಪು ಭೇಟಿ ಮಾಡಿದರೂ ಸ್ಪಷ್ಟ ಆಶ್ವಾಸನೆಯನ್ನು ಜಗದೀಶ್ ಶೆಟ್ಟರ್ ಕೊಟ್ಟಿಲ್ಲ. ಬದಲಿಗೆ ಮಠಾದೀಶರ ಆಶೀರ್ವಾದ ಪಡೆಯಲು ಮೈಸೂರಿಗೆ ಧಾವಿಸಿದ್ದಾರೆ.

ಈ ಮಧ್ಯೆ ಇನ್ನೊಂದು ಹೊಸ ಬೆಳವಣಿಗೆಯನ್ನು ಗಮನಿಸಬೇಕಾಗಿದೆ. ಸರ್ಕಾರ ರಚನೆಯಾದಾಗಿನಿಂದ ಎಂದೂ ಉತ್ತರ ಕರ್ನಾಟಕದ ಪರವಾಗಿ ವಕಾಲತ್ತು ಹಾಕದ ಜನಾರ್ದನರೆಡ್ಡಿ ಮಂಗಳವಾರ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೆದುರು ಉತ್ತರ ಕರ್ನಾಟಕದ ಅಭಿವೃದ್ಧಿ ನಮ್ಮ ಗುರಿ, ಅದರಲ್ಲೂ ಮುಖ್ಯವಾಗಿ ಈ ಕಷ್ಟದ ಪರಿಸ್ಥಿತಿಯಲ್ಲಿ ನಮ್ಮ ಗಮನ ಅದಕ್ಕೆಂದು ಹೇಳಿದ್ದಾರೆ. ಈ ಹಿಂದೆ ಜಗ ಶೆಟ್ಟರ್ ಮತ್ತು ಇತರ ಉತ್ತರ ಕರ್ನಾಟಕದ ಕೇ ನಾಯಕರು ಯಡಿಯೂರಪ್ಪ ಉತ್ತರ ಕರ್ನಾಟ ಬಿ.ಜೆ.ಪಿ ನಾಯಕರನ್ನು ಕಡೆಗಣಿಸಿದ್ದಾರೆ ಅಸಮಧಾನ ತೋಡಿ ಕೊಂಡಿದ್ದು ತಿ ವಿಷಯವಾಗಿದೆ. ಇದರ ಜೊತೆಗೆ ಲಿಂಗಾ ಜಾತಿಯ ಒಳಗಿನ ಸಾದರ ಮತ್ತು ಬಣ ಲಿಂಗಾಯಿತರಿಗೆ ಮಾತ್ರ ಮಣೆ ಹಾಕಿ ಇನ್ನೊ ಪ್ರಮುಖ ಗುಂಪನ್ನು ಕಡೆಗಣಿಸಿರುವುದು, ಇವೆಲ್ಲ ಜೊತೆಗೆ ಯಡಿಯೂರಪ್ಪನವರ ಸರ್ವಾಧಿ ಧೋರಣೆ ಮತ್ತು ಅವರ ಆಪ್ತರ ಭ್ರಷ್ಟಾಚಾರ ಮೀರಿದೆ. ಆಡಳಿತದ ಕಿಂಚಿತ್ ಅನುಭವ ಇ ಮತ್ತು ಯಾವುದರ ಬಗ್ಗೆಯೂ ಆಳವಾದ ತಿಳುವ ಇಲ್ಲದ ಯಡಿಯೂರಪ್ಪ ಮತ್ತು ಅವರ ಸಹೋದ ಮಂತ್ರಿಗಳು ಕರ್ನಾಟಕವನ್ನು ಎಲ್ಲಾ ರೀತಿಯ ದಿವಾಳಿ ಎಬ್ಬಿಸುವ ಸ್ಥಿತಿಯ ಅಂಚಿಗೆ ತಂದಿದ್ ರಾಜ್ಯ ಸರ್ಕಾರದ ಸಾಲ ಸುಮಾರು 90 ಸಾ ಕೋಟಿಯಷ್ಟು ಏರಿದೆ. ನೌಕರರಿಗೆ ಸಂಬಳ ಪಿಂಚಣಿ ಕೊಡಲಿಕ್ಕೆ ಹಣವಿಲ್ಲದೆ ತನ್ನ ಶೇ ಮೇಲೆ ಸಾಲ ಎತ್ತಲಾಗಿದೆ. ಆರ್ಥಿಕ ಬಿಕ್ಕಟ್ಟಿನಿಂ ಕರ್ನಾಟಕದಲ್ಲಿ ಮುಖ್ಯವಾಗಿ ಬೆಂಗಳೂರಿ ಉಂಟಾಗಿರುವ ಉದ್ಯೋಗ ಕಡಿತದಿಂದ ಲಕ್ಷಾ ಜನರ ಕೆಲಸ ಕಳೆದುಕೊಂಡಿದ್ದಾರೆ. ಅಸಂಘ ಕಾರ್ಮಿಕರು ಕಳೆದ ತಿಂಗಳು ಕನಿಷ್ಠ ವೇತನ ನಡೆಸಿದ ಆಕ್ರೋಶದ ಹೋರಾಟವನ್ನು ಹತ್ತಿ ಬಿ.ಜೆ.ಪಿ ಸರ್ಕಾರ ಅನುಸರಿಸಿದ ದಮನಕಾರಿ ಈ ಸರ್ಕಾರದ ಹತಾಶೆಯ ಪರಿಸ್ಥಿಯ ತೋರಿಸುತ್ತದೆ. ಇನ್ನೊಂದು ಕಡೆ ವೈದ್ಯರ ಹೋರಾ ಬಹಳ ಮುಖ್ಯವಾಗಿ ಬೆಲೆ ಏರಿಕೆ, ರೇಷನ್ ಕಾ ವಿತರಣೆ, 2 ರೂ ಗೆ ಕೆ.ಜಿ ಅಕ್ಕಿಯ ವಾ ಯಾವುದನ್ನೂ ಸಮರ್ಪಕವಾದ ರೀತಿಯ ನಿರ್ವಹಿಸಲು ಸಾಧ್ಯವಾಗದೆ ಸಂಪೂ ವಿಫಲವಾಗಿದೆ. ಆಡಳಿತದಲ್ಲಿ ಯಾವುದೇ ಬಿಗಿಯೂ ಇಲ್ಲಾ, ಹಿಡಿತವೂ ಇಲ್ಲಾ. ಬೆಳೆಗಾದರೆ ವರ್ಗಾವಣೆ ದಂಧೆ. ಈ ವರ್ಗಾ ದಂಧೆಯಂತೂ ಅಸಹ್ಯ ಹುಟ್ಟಿಸಿದೆ. ಇನ್ನೊಂದು ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದ ಚರ್ಚುಗಳ ಮೇಲಿನ ದಾಳಿಯಿಂದ ಮತ್ತು ಸಂಖ್ಯಾತರ ಮೇಲಿನ ದಾಳಿಗಳ ಪ್ರಾರಂಭವಾಗಿರುವ ನಾಗರೀಕ ಆಡಳಿತದ ಕು ಪಾತಾಳ ಮುಟ್ಟಿದೆ. ಬೆಂಗಳೂರು ನಗರ ಒಂದ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದ ಮೇ ಪ್ರತಿದಿನಾ ಸರಾಸರಿ ಇಬ್ಬರ ಕೊಲೆಗಳು ನಡೆಯು ದರೋಡೆ ಮತ್ತು ಕಳ್ಳತನಗಳು ಹೆಚ್ಚಾಗ ತೊಡ ಕಾನೂನಿನ ವ್ಯವಸ್ಥೆ ಸಂಪೂರ್ಣ ಕುಸಿದ ಕರ್ನಾಟಕದಲ್ಲಿ ಒಂದು ಸರ್ಕಾರವಿದೆಯೋ ಗುಮಾನಿ ಎಲ್ಲರನ್ನೂ ಕಾಡುತ್ತಿದೆ. ಇವೆಲ್ಲದರ ಜೊ ಎಂದು ಕಂಡರಿಯದ ಭೀಕರ ನೆರೆ-ಮತ್ತೊ ಭಾಗದಲ್ಲಿ ಬರ ಕರ್ನಾಟಕ ಜನತೆ ತತ್ತ ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಬಿ.ಜೆ ಯಲ್ಲಿನ ರಾಜಕೀಯ ಬಿಕ್ಕಟ್ಟು ಭುಗಿಲೆದ್ದಿದೆ.

ಸಿಬಿಐ ಪ್ರಕಾರವೇ ಟೆಲಿಕಾಂ ಹಗರಣದಲ್ಲಿ 22,000 ಕೋಟಿ ರೂ. ವಂಚನೆ

ರಂಗಾಂತರ ನೀಡಿಕೆಯಲ್ಲಿ ಅಕ್ರಮವೇನೂ ಡೆದಿಲ್ಲ ಎಂದು ಪ್ರಧಾನ ಮಂತ್ರಿಗಳೇ ತಮಗೆ ರ್ಟಿಫಿಕೇಟ್ ನೀಡಿದ್ದಾರೆಂದು ದೂರಸಂಪರ್ಕ ಮಂತ್ರಿಗಳು ಹೇಳುತ್ತಿದ್ದಂತೆಯೇ ಸಿಬಿಐ ಸಲ್ಲಿಸಿರುವ ಎಫ್ಐಆರ್ ದೂರಸಂಪರ್ಕ ಇಲಾಖೆಯ ಅಧಿಕಾರಿಗಳು ಮತ್ತು ಖಾಸಗೀ ಟೆಲಿಕಾಂ ಕಂಪನಿಗಳ ನಡುವೆ ಕ್ರಿಮಿನಲ್ ಪಿತೂರಿ ನಡೆದಿದೆ, ಇದರಲ್ಲಿ ಅಧಿಕಾರದ ದುರುಪಯೋಗವಾಗಿದೆ ಎಂದಿದೆ. ಇದರಿಂದ ಸರಕಾರೀ ಖಜಾನೆಗೆ ನಷ್ಟವುಂಟು ಮಾಡಲಾಗಿದೆ ಮತ್ತು ಖಾಸಗಿಯವರಿಗೆ ಲಾಭ ಮಾಡಿಸಲಾಗಿದೆ ಎಂದಿರುವ ಸಿಬಿಐ ಇದರ ಮೊತ್ತ ಸುಮಾರು 22,000 ಕೋಟಿ ರೂ. ಎಂದು ಅಂದಾಜು ಮಾಡಿದೆ. ವಾಸ್ತವವಾಗಿ ನಷ್ಟದ ಪ್ರಮಾಣ ಇನ್ನೂ ಹೆಚ್ಚಿದೆಯೆನ್ನಲಾಗುತ್ತಿದೆ. ಸಿಬಿಐ ವಿದೇಶಿ ಶೇರು ಬಂಡವಾಳವನ್ನು ಮಾತ್ರ ಗಮನಿಸಿದೆ, ದೇಶೀ ಶೇರು ಬಂಡವಾಳವನ್ನು ಗಮನಿಸಿಲ್ಲ. ನಿಜವಾಗಿ ನಷ್ಟದ ಪ್ರಮಾಣ ಸುಮಾರು 60,000 ಕೋಟಿ ರೂ. ಎಂದು ಈ ಮೊದಲೇ ಸಿಪಿಐ(ಎಂ) ಲೆಕ್ಕ ಹಾಕಿತ್ತು.

★

ಹೊಸ ರಕ್ಷಣಾ ಖರೀದಿ ನೀತಿಯಲ್ಲಿ ಖಾಸಗಿಯವರಿಗೆ ಇನ್ನಷ್ಟು 'ಪ್ರೋತ್ಸಾಹ'

ನವೆಂಬರ್ 1ರಂದು ರಕ್ಷಣಾ ಇಲಾಖೆ ಹೊಸ ರಕ್ಷಣಾ ಖರೀದಿ ವಿಧಾನಗಳು(ಡಿಪಿಪಿ-2009) ಪ್ರಕಟಿಸಲಿದ್ದು ಇದರಲ್ಲಿ ಖಾಸಗಿಯವರ

ಯುಪಿಎ II ದರ್ಬಾರ್‌ನಲ್ಲಿ


ಭಾಗವಹಿಸುವಿಕೆಗೆ ಮತ್ತಷ್ಟು ಹೊಸ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ ಎಂದು ವರದಿಯಾಗಿದೆ. ಕಳೆದ ಕೆಲವು ವರ್ಷಗಳಿಂದ ರಕ್ಷಣಾ ಉದ್ದಿಮೆಯಲ್ಲಿ ಭಾಗವಹಿಸುವಂತೆ ಸರಕಾರ ಅವಕಾಶಗಳನ್ನು ಕೊಡುತ್ತಾ ಬಂದಿದ್ದರೂ ಖಾಸಗಿಯವರು ಅಷ್ಟೇನೂ ಉತ್ಸಾಹ ತೋರದಿರುವುದರಿಂದ ಅವರಿಗೆ ಇನ್ನಷ್ಟು 'ಪ್ರೋತ್ಸಾಹ' ನೀಡಲು ಭಾರತದ ಖಾಸಗೀ ಕಂಪನಿಗಳು ಪ್ರಮುಖ ವಿದೇಶಿ ಶಸ್ತ್ರಾಸ್ತ್ರ ಕಂಪನಿಗಳೊಂದಿಗೆ ಜಂಟಿ ಉದ್ದಿಮೆ ರಚಿಸಲು ಈ ಹೊಸ ನೀತಿಯಲ್ಲಿ ಅವಕಾಶವಿರುತ್ತದೆ ಎನ್ನಲಾಗಿದೆ. 11ನೇ ಯೋಜನಾವಧಿಯಲ್ಲಿ (2007-12) ಭಾರತ ಸುಮಾರು 1.5 ರಿಂದ 2.5 ಲಕ್ಷ ಕೋಟಿ ರೂ.ಗಳ ಶಸ್ತ್ರಾಸ್ತ್ರ ಖರೀದಿಸಲಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

★

ಮಾಹಿತಿ ಹಕ್ಕು ಕಾನೂನು ತಿದ್ದುಪಡಿಗೆ ವಿರೋಧ

ಎಡಪಕ್ಷಗಳ ಬೆಂಬಲದ ಯುಪಿಎ-1 ಸರಕಾರದ ಸಾಧನೆಗಳಲ್ಲಿ ಒಂದು ಎನಿಸಿರುವ ಮಾಹಿತಿ ಹಕ್ಕು ಕಾನೂನಿನಲ್ಲಿ ಈಗ ಒಂದು ಪ್ರತಿಕೂಲ ತಿದ್ದುಪಡಿ ತರಲು ಯುಪಿಎ-2 ಸರಕಾರ ಯೋಚಿಸುತ್ತಿದೆ. ಇದನ್ನು ವಿರೋಧಿಸಿ ಸುಮಾರು 100 ಬುದ್ಧಿಜೀವಿಗಳು ಮತ್ತು ನಾಗರಿಕ ಹಕ್ಕುಗಳ ಕಾರ್ಯಕರ್ತರು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಭಾರತ ಒಂದು ಮುಕ್ತ ಮತ್ತು ಸ್ಪಂದನಶೀಲ ದೇಶ ಎಂಬ ಅಭಿಪ್ರಾಯಕ್ಕೆ ಅವಕಾಶ ಕಲ್ಪಿಸಿದ ಈ ಕಾನೂನಿನ 'ದುರ್ಬಳಕೆ'ಯ ನೆಪವೊಡ್ಡಿ ತಿದ್ದುಪಡಿ ಮಾಡುವ ಬದಲು ಅದರ ಅನುಷ್ಠಾನದಲ್ಲಿ ಬರುತ್ತಿರುವ ಅಡ್ಡಿಗಳ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯುವಂತೆ ಮಾಡಬೇಕಾದ್ದು 'ಪಾರದರ್ಶಕತೆ'ಯ ಬಗ್ಗೆ ಮಾತಾಡುವ ಸರಕಾರದ ಕರ್ತವ್ಯ ಎಂದು ಅವರು ನೆನಪಿಸಿದ್ದಾರೆ.

★



ಸಾಯಿಬಾಬಾನೋ, ಆಮ್‌ಆದ್ಮಿಯೋ?

ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಮರಳಿರುವ ಕಾಂಗ್ರೆಸ್-ಎನ್‌ಸಿಪಿ ಮೈತ್ರಿಕೂಟದಲ್ಲಿ ಖಾತೆಗಳ ಹಂಚಿಕೆಯಲ್ಲಿ ಜಗ್ಗಾಟ ಆರಂಭವಾಗಿದೆ. ಕಾಂಗ್ರೆಸ್ ಹಿಂದಿನ ಸೂತ್ರಕ್ಕೆ ಬದ್ಧವಾಗಿರದ್ದರೆ ತಾನು ಸರಕಾರದಲ್ಲಿ ಭಾಗಿಯಾಗುವುದಿಲ್ಲ ಎಂದು ಬೆದರಿಕೆಯನ್ನೂ ಒಡ್ಡಿದೆಯಂತೆ.

ಈ ನಡುವೆ ಸತ್ಯಸಾಯಿಬಾಬ ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ನಿವಾಸಕ್ಕೇ ಭೇಟಿ ನೀಡಿ ಅವರನ್ನು 'ಆಶೀರ್ವದಿಸಲಿದ್ದಾರೆ' ಎಂಬ ಸುದ್ದಿ ಹರಡಿದೆ. ಪರಮ ಬಾಬಾ ಭಕ್ತರಾದ ಅಶೋಕ ಚವ್ಹಾಣ್ ರಾಜಕೀಯ ಸಮಸ್ಯೆ ಎದುರಾದಾಗಲೆಲ್ಲ ಪುಟ್ಟಪರ್ತಿಯಾತ್ರೆ ಕೈಗೊಳ್ಳುವವರು. ಇತ್ತೀಚೆಗೆ ಮತದಾನ ಮುಗಿದ ಕೂಡಲೇ 'ಆಶೀರ್ವಾದ' ಪಡೆಯಲು ಹೋಗಿದ್ದ ಅವರು ತಮ್ಮ ಗೆಲುವಿಗೆ ಕೃತಜ್ಞರಾಗಿ ಬಾಬಾರನ್ನು ತಮ್ಮ ಅಧಿಕೃತ ನಿವಾಸಕ್ಕೆ ಆಹ್ವಾನಿಸಿದ್ದರಂತೆ. ಅಂದರೆ ಅವರ ಗೆಲುವು ಬಾಬಾ ಆಶೀರ್ವಾದ, 'ಆಮ್ ಆದ್ಮಿ'ಯದ್ದಲ್ಲ ಎಂದರ್ಥವೇ ಎಂದು ಪ್ರಶ್ನಿಸಲಾಗುತ್ತಿದೆ.

ಮುಂಬೈಯಲ್ಲಿ ಮುಖ್ಯಮಂತ್ರಿಗಳ ನಿವಾಸಕ್ಕೆ ಇದು ಸಾಯಿಬಾಬಾರ ಪ್ರಥಮ ಭೇಟಿಯಾದರೂ ಆತ ಕಾಂಗ್ರೆಸ್ ರಾಜಕೀಯಕ್ಕೆ ಅಪರಿಚಿತರಲ್ಲ. ಬಾಬ್ರಿ ಮಸೀದಿ ಧ್ವಂಸವಾಗುತ್ತಿದ್ದುದನ್ನು ನೋಡುತ್ತಾ ಕುಳಿತಿದ್ದ ದೇಶದ ಒಬ್ಬ ಮಾಜೀ ಕಾಂಗ್ರೆಸ್ ಪ್ರಧಾನಿ ಕೂಡಾ ಅವರ ಪರಮ ಭಕ್ತರಾಗಿದ್ದರು ಎಂಬುದನ್ನು ಇಲ್ಲಿ ನೆನೆಪಿಸಿಕೊಳ್ಳಲಾಗ್ಲುತ್ತಿದೆ.

ಸಿಪಿಐ(ಎಂ) ಮುಖಂಡರ ಅವಹೇಳನ - ಖಂಡನೆ

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಕೇರಳ ಸರ್ಕಾರದ ಗೃಹ ಸಚಿವರಾದ ಕೋ ಯೇರಿ ಬಾಲಕೃಷ್ಣನ್ ಅವರ ಮಗ ಬಿನೀಶ್, ರಶಿಯನ್ ಯುವತಿಯೊಂದಿಗೆ ಸಂಬಂದ ಹೊಂದಿದ್ದರು ಎಂಬ ಸುದ್ದಿ ಟಿವಿ-9 ಮತ್ತು ವಿಜಯ ಕರ್ನಾಟಕದಲ್ಲಿ ಪ್ರಕಟವಾಗಿದ್ದು ಇದು ಸಂಪೂರ್ಣ ಸುಳ್ಳು ಹಾಗೂ ಸಿಪಿಐ(ಎಂ) ಮುಖಂಡರ ಚಾರಿತ್ರ್ಯವಧೆ ಮಾಡುವ ಕುತಂತ್ರ ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸವಾದಿ)ದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ.

ಕೋಡಿಯೇರಿ ಬಾಲಕೃಷ್ಣನ್ ಅವರ ಪುತ್ರ ಳೆದ ಒಂದೂವರೆ ವರ್ಷದಿಂದ ದುಬೈನಲ್ಲಿ ಕೆಲಸಿರುತ್ತಾರೆ. ನಿನ್ನೆ ಕೋರಮಂಗಲದ ಮನೆಯೊಂದರಲ್ಲಿ ರಷ್ಯನ್ ಯುವತಿಯ ಬಳಿ ಪೋಟೋ ದೊರೆತಿದೆ ಎಂಬುದು ಸತ್ಯಕ್ಕೆ ದೂರವಾದುದು. ಅದರಲ್ಲೂ ಬಾಲಕೃಷ್ಣನ್ ಅವರ ಪುತ್ರನಿಗೆ ಬೆಂಗಳೂರಿನಲ್ಲಿ ವ್ಯಾಪಾರ ಸಂಬಂಧವಾಗಲೀ, ಕುಟುಂಬದ ಸಂಬಂಧಿಕರಾಗಲೀ ಇಲ್ಲ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಯುವತಿಗೂ ಅವರಿಗೂ ಸಂಬಂಧ ಕಲ್ಪಿಸುವುದು ರಾಜಕೀಯದ ದುರುದ್ದೇಶವಲ್ಲದೆ ಮತ್ತೇನು ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಕೋಡಿಯೇರಿ ಬಾಲಕೃಷ್ಣನ್ ಅವರ ಜಿಲ್ಲೆಯಾದ ಕಣ್ಣೂರಿನಲ್ಲಿ ಉಪ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಸತ್ಯಕ್ಕೆ ದೂರವಾದ ಸಂಗತಿಯನ್ನು ಪಟ್ಟಭದ್ರ ಹಿತಾಸಕ್ತಿಗಳು ಪ್ರಕಟಿಸಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಆಪಾದಿಸಿದೆ.



ಮಂತ್ರಿವರ್ಯರ ಮನೆಯಲ್ಲಿ ಪ್ರಾಣ ಬೆದರಿಕೆ ಶಾಸಕರ ಮೇಲೆ ಕ್ರಿಮಿನಲ್ ಮೊಕದ್ದಮೆ

ಬಿಜೆಪಿ ದರ್ಬಾರ್

ಬಿಜೆಪಿ ಸರ್ಕಾರದ ಸಚಿವ ಸಂಪುಟದ ಸದಸ್ಯರು ಹಾಗೂ ಶಾಸಕರ ಮೇಲಿನ ಭ್ರಷ್ಟಾಚಾರ, ವಂಚನೆ, ಪ್ರಕರಣಗಳಿಗೆ ಕ್ರಿಮಿನಲ್ ಪ್ರಕರಣಗಳಿಗೆ ಬರವೇನಿಲ್ಲ ಯಥೇಚ್ಛವಾಗಿ ಸಿಗುತ್ತವೆ. ಅದಕ್ಕೀಗ ಸೇರ್ಪಡೆಯಾಗಿದೆ. ಗಣಿ ಲೂಟಿ ಕೂಟದ ತ್ರಿವಳಿ ಮುಖಂಡರಲ್ಲಿ ರು ಬಿಜೆಪಿಯ ಶಾಸಕರು, ಕೆಎಂಎಫ್‌ನ ಕ್ಷರೂ ಆದ ಜಿ.ಸೋಮಶೇಖರರೆಡ್ಡಿಯವರ ಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ರ್ನಾಟಕ ಪವರ್ ಕಾರ್ಪೋರೇಷನ್ (ಕೆಪಿಸಿಎಲ್) ಕರೆದಿದ್ದ ಟೆಂಡರ್‌ವೊಂದಕ್ಕೆ ಅರ್ಜಿ ಹಾಕದಂತೆ ರೆಡ್ಡಿ ಮತ್ತು ಜೊತೆಗಾರರು ಸೇರಿ ಪ್ರಾಣ ಬೆದರಿಕೆ ಹಾಕಿದ್ದಾರೆಂದು ಎಸ್‌ಎನ್.ಸಿ. ಪವರ್ ಕಾರ್ಪೋರೇಶನ್ ವ್ಯವಸ್ಥಾಪಕ ನಿರ್ದೇಶನ ಡಾ: ಎನ್.ಸೀತಾರಾಮಶೆಟ್ಟಿ ಎಂಬುವವರು ದೂರು ನೀಡಿದ್ದಾರೆ. ಕಂಪನಿಯ ವ್ಯವಸ್ಥಾಪಕ ಪ್ರಶಾಂತ್ ಅವರನ್ನು ಅಪಹರಿಸಿ ಥಳಿಸಿ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಂದಾಯ ಸಚಿವ ಕರುಣಾಕರ ರೆಡ್ಡಿಅವರ ಮನೆಗೆ ಎಳೆದೊಯ್ದು ಬೆದರಿಸಿದ್ದಾರೆ ಎಂಬುದು ದೂರಿನ ಸಾರ. ಇದೆಲ್ಲಾ ಯಡಿಯೂರಪ್ಪ ಸರ್ಕಾರಕ್ಕೆ ಹಿರಿಮೆಯ ಗರಿಯಿದ್ದಂತೆ ಅಲ್ಲವೇ?

★

ಭಿನ್ನಮತ ಸ್ಫೋಟ

ರಾಜ್ಯದ ಬಿಜೆಪಿ ಸರ್ಕಾರ ಎಷ್ಟು ಅನೈತಿಕ ರಾಜಕಾರಣದ ಮೂಲಕ ಇಷ್ಟು ದಿನ ನಿಂತಿತ್ತು. ಅದು ಎಂತಹ ಅಸಹ್ಯಕರ ಹೊಲಸು ವಿಧಾನದ ಮೂಲಕ ಅಧಿಕಾರ ಗಳಿಸಿತು ಎಂಬುದಕ್ಕೆ ರಾಜ್ಯ ರಾಜಕಾರಣದ ವಿದ್ಯಮಾನಗಳೇ ಸಾಕ್ಷಿ.

ಈಗ ಬಂಡಾಯದ ಬಾವುಟ ಹಾರಿಸಿರುವ ರೆಡ್ಡಿ ಸಹೋದರರು ಮತ್ತು ಶ್ರೀರಾಮುಲು ಅವರ ಆಕ್ರೋಶಕ್ಕೆ ಕಾರಣವಾದ ಅಂಶಗಳೇನು? ಪ್ರವಾಹ ಸಂತ್ರಸ್ತರ ಪುನರ್‌ವಸತಿಯ ನಿರ್ಮಾಣ ಕಾಮಗಾರಿಯ ಕಾಂಟ್ರಾಕ್ಟ್, ಗಣಿ ಅದಿರಿನ ಲಾರಿಗಳ ಮೇಲೆ ಸುಂಕ, ಶೋಭಾ ಕರಂದ್ಲಾಜೆಯವರ ಹಸ್ತಕ್ಷೇಪ... ಹೀಗೆ ಯಾವ ಪ್ರಶ್ನೆಯನ್ನಾದರೂ ಗಮನಿಸಿ. ಎಲ್ಲವೂ ಕಾಂಟ್ರಾಕ್ಟ್‌ನ ಲಾಭ, ಲೂಟಿ, ಕಮಿಷನ್ನು, ತೆರಿಗೆವಂಚನೆ, ಲಂಚ, ಭ್ರಷ್ಟತೆಗಳೇ ಈ ತಿಕ್ಕಾಟದ ಮೂಲ ಎಂಬುದು ಜನರಿಗೆ ತಿಳಿಯದ್ದೇನಲ್ಲ. ಇಲ್ಲಿ ಕಿತ್ತಾಟ ಯಾರಿಗೆ, ಎಷ್ಟು ಸಲ್ಲಬೇಕು ಎಂಬುದೇ ಆಗಿದೆ. ಅಕಸ್ಮಾತ್ ಈ ಸರ್ಕಾರ ಏನೋ ತೇಪೆಯಿಂದಾಗಿ ಉಳಿದರೂ ಈಗ ಬಯಲಾದ ಸರ್ಕಾರದ ಹೊಲಸು ಮುಖವನ್ನು ಮಾತ್ರ ಜನರಿಂದ ಮರೆ ಮಾಚಲು ಸಾಧ್ಯವಿಲ್ಲ.

★

'ಕುದುರೆ ವ್ಯವಹಾರ'

ಆಳುವ ಸರ್ಕಾರಗಳಲ್ಲಿ ಭಿನ್ನಮತ ಎದುರಾದಾಗ ಬಹುಮತ ಉಳಿಸಿಕೊಳ್ಳಬೇಕಾದ ಅಥವಾ ಗಳಿಸಿಕೊಳ್ಳಬೇಕಾದಾಗ ಚುನಾಯಿತ ಶಾಸಕರ ಸಂಸದರನ್ನೇ ಖರೀದಿಸುವ 'ಕುದುರೆ ವ್ಯಾಪಾರ' ಬಂಡವಾಳಶಾಹಿ ರಾಜಕೀಯ ಪಕ್ಷಗಳ ತಿಕ್ಕಾಟಗಳಲ್ಲಿ ಅಪರೂಪವೇನಲ್ಲ.

ಒಂದು ಕಡೆ ಕುದುರೆಗೆ ಹಸಿರು ಹುಲ್ಲು, ಹುರುಳಿ ಇತ್ಯಾದಿ ಮೇವು ತೋರಿಸಿ ಸೆಳೆಯುವವರ ಆಮಿಷ ಇರುತ್ತದೆ. ಮತ್ತೊಂದು ಕಡೆ ಕುದುರೆ ಅಕ್ಕಪಕ್ಕ ಕಣ್ಣಿಗೆ ಏನೂ ಕಾಣದಂತೆ ಪಟ್ಟಿ ಕಟ್ಟಿ ಬೇಕಾದ ದಿಕ್ಕಿನಲ್ಲಿ ಓಡಿಸುವ ಪ್ರಯತ್ನವೂ ಇರುತ್ತದೆ.

ಚುನಾಯಿತ ಶಾಸಕರು, ಸಂಸದರು, ತತ್ವ, ಸಿದ್ಧಾಂತ, ಜನರ ಹಿತ, ಪಕ್ಷದ ನಿರ್ದೇಶನಗಳಂತೆ ನಡೆಯುವವರಾದರೆ ಇಂತಹ ಪ್ರಸಂಗಗಳಾದರೂ ಏಕೆ ಬರುತ್ತವೆ. ತಮ್ಮ ಪಕ್ಷದ ಜನ ಪ್ರತಿನಿಧಿಗಳ ಮೇಲೆಯೇ ನಂಬಿಕೆ ಇಲ್ಲದ ಪಕ್ಷದ ಮುಖಂಡರು ಶಾಸಕ ಸಂಸದರನ್ನು ಯಾರಿಗೂ ತಿಳಿಯದಂತೆ, ಯಾರ ಸಂಪರ್ಕಕ್ಕೂ ಸಿಗದಂತೆ ರೆಸಾರ್ಟ್ಸ್, ವಿಶ್ರಾಂತಿ ಧಾಮಗಳಿಗೆ ಒಯ್ದು ಇಡುವುದು ಇವೆಲ್ಲಾ ಇರುತ್ತವೆ. ಎಷ್ಟು ನಂಬಿಕೆ -ವಿಶ್ವಾಸ!!

ಇವೆಲ್ಲಾ ಯಾಕೆ ಅಂದರೆ ಈಗ ರಾಜ್ಯದಲ್ಲಿ ಭುಗಿಲೇದ್ದಿರುವ ಭಿನ್ನಮತೀಯ ಚಟುವಟಿಕೆಯಲ್ಲಿ ಎರಡು ಹಿಂಡು ಬಿಜೆಪಿ ಶಾಸಕರನ್ನು ಯಾರ ಸಂಪರ್ಕಕ್ಕೂ ಸಿಗದಂತೆ ಹೈದರಾಬಾದ್‌ನಲ್ಲಿ ಇಟ್ಟಿರುವುದಾಗಿ ವರದಿ ಗಳಿವೆ.

ಬಿಜೆಪಿ ತಾನು ಇತರ ಪಕ್ಷಕ್ಕಿಂತ ಭಿನ್ನ, ಶಿಸ್ತಿನ ಪಕ್ಷ ಎಂದು ಟಾಂ ಟಾಂ ಮಾಡಿಕೊಳ್ಳುತ್ತದೆ. ಹುಸಿ ಹುಸಿ ಕೋಮುವಾದಿ ವಿಷವನ್ನು ಉಗುಳುವುದು ಬಿಟ್ಟರೆ ಇತರ ಬಂಡವಾಳಶಾಹಿಕ್ಕಿಂತ ಬಿಜೆಪಿಯಲ್ಲಿ ಏನು ಭಿನ್ನತೆ ಇದೆ. ಇದು ಜನರ ಮನಸ್ಸಿನಲ್ಲಿ ಎದ್ದಿರುವ ಪ್ರಶ್ನೆ.

ಜಗದಗಲ

ಶರತ್‌ಚಂದ್ರ

ಜರ್ಮನ್ ಚುನಾವಣೆ

ಮುಖ್ಯ ಪಕ್ಷಗಳಿಗೆ ಸೋಲು, ಎಡಪಕ್ಷದ ಮುನ್ನಡೆ

ಜರ್ಮನ್ ಪಾರ್ಲಿಮೆಂಟು (ಬುಂದೆಸ್ಟಾಗ್) ಚುನಾವಣೆಗಳಲ್ಲಿ (ಸ್ವಲ್ಪ ಮಟ್ಟಿಗೆ) ಅನಿರೀಕ್ಷಿತವಾಗಿ ಹಿಂದಿನ ಆಳುವ 'ಗ್ರಾಂಡ್ ಮೈತ್ರಿಕೂಟ'ದ ಭಾಗವಾಗಿದ್ದ ಬಲ-ಮಧ್ಯಮ ರಂಗ ಮತ್ತೆ ಅಧಿಕಾರಕ್ಕೆ ಬಂದಿದೆ. ಯಾವಾಗಲೂ ಮೈತ್ರಿಕೂಟದಲ್ಲಿ ಇರುವ ಸಿ.ಡಿ.ಯು. (ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಯೂನಿಯನ್) ಮತ್ತು ಸಿ,ಎಸ್.ಯು. (ಕ್ರಿಶ್ಚಿಯನ್ ಸೋಶಿಯಲ್ ಯೂನಿಯನ್) ಬಲ-ಮಧ್ಯಮ ಪಂಥ ರಂಗ ಕಳೆದ ಆರು ದಶಕಗಳಲ್ಲೇ ಅತ್ಯಂತ ಕಳಪೆ ಚುನಾವಣಾ ಫಲಿತಾಂಶ ಪಡೆದರೂ ಅಧಿಕಾರ ಉಳಿಸಿಕೊಂಡಿವೆ. 'ಗ್ರಾಂಡ್ ಮೈತ್ರಿಕೂಟ'ದ ಭಾಗವಾಗಿದ್ದ ಸೋಶಲಿಸ್ಟ್ ಪಕ್ಷ ಕಳೆದ ಆರು ದಶಕಗಳಲ್ಲೇ ಅತ್ಯಂತ ಕಳಪೆ ಚುನಾವಣಾ ಫಲಿತಾಂಶ ಪಡೆದು ಪರಾಭವಗೊಂಡು ಅಧಿಕಾರದಿಂದ ಹೊರಗೆ ಉಳಿಯಬೇಕಾಗಿದೆ. ಸಿ.ಡಿ.ಯು.-ಸಿ.ಎಸ್.ಯು. ಬಲ-ಮಧ್ಯಮ ಪಂಥ ರಂಗ, ಬಲಪಂಥೀಯ ಪಕ್ಷ ಎಫ್.ಡಿ.ಪಿ. (ಫ್ರೀ ಡೆಮೊಕ್ರಾಟಿಕ್ ಪಾರ್ಟಿ) ಜತೆ ಹೊಸ ಆಳುವ ರಂಗ ರಚಿಸಿಕೊಂಡಿದೆ. ಎಫ್.ಡಿ.ಪಿ. ಕಳೆದ ಆರು ದಶಕಗಳಲ್ಲೇ ಅತ್ಯಂತ ಉತ್ತಮ ಚುನಾವಣಾ ಫಲಿತಾಂಶ ಪಡೆದು ಹೊಸ ಆಳುವ ರಂಗ ಸೇರಿ ಅಧಿಕಾರ ಪಡೆದಿದೆ. 'ಗ್ರಾಂಡ್ ಮೈತ್ರಿಕೂಟ'ದ ಭಾಗವಾಗಿದ್ದ ಸೋಶಲಿಸ್ಟ್ ಪಕ್ಷಕ್ಕೆ ಶಾಕ್ ಕೊಟ್ಟಿದೆ.



ಎಡ ಪಕ್ಷಗಳ ಮುನ್ನಡೆ

ಹಿಂದಿನ ಪೂರ್ವ-ಪಶ್ಚಿಮ ಜರ್ಮನಿಯ ಕಮ್ಯುನಿಸ್ಟ್ ಪಕ್ಷಗಳು ಸೇರಿ ರಚನೆಯಾದ ಹೊಸ ಪಕ್ಷ - ಎಡ ಪಕ್ಷ (ಹೆಸರನ್ನೇ ಎಡ ಪಕ್ಷ ಎಂದು ಇಡಲಾಗಿದೆ) 622 ಸೀಟಿನ ಪಾರ್ಲಿಮೆಂಟಿನಲ್ಲಿ ಎಡ ಪಕ್ಷ ಶೇ. 12 ಮತ ಮತ್ತು 76 ಸೀಟು ಗಳಿಸಿದೆ. ಶೇ. 3.2 ಮತ ಮತ್ತು 22 ಸೀಟಿನ ಹೆಚ್ಚಳ ಸಾಧಿಸಿ 2005 ರ ಸ್ಥಾನಕ್ಕೆ ಹೋಲಿಸಿದರೆ ಗಮನಾರ್ಹ ಮುನ್ನಡೆ ಸಾಧಿಸಿದೆ. ಎಲ್ಲಾ ಪ್ರಾಂತ್ಯಗಳಲ್ಲಿ ಮುನ್ನಡೆ ಸಾಧಿಸಿದೆ. 16 ಪ್ರಾಂತ್ಯಗಳಲ್ಲಿ ಎರಡು ಪ್ರಾಂತ್ಯಗಳಲ್ಲಿ ಅತಿ ದೊಡ್ಡ ಪಕ್ಷದ ಸ್ಥಾನ ಪಡೆದಿದೆ. ಮೂರು ಪ್ರಾಂತ್ಯಗಳಲ್ಲಿ ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಆರು ಪ್ರಾಂತ್ಯಗಳಲ್ಲಿ ಎಡ ಪಕ್ಷ ಶೇ. 20 ಕ್ಕಿಂತ ಹೆಚ್ಚು ಮತ ಗಳಿಸಿದೆ. ಗ್ರೀನ್ ಪಕ್ಷ ಸಹ ಉತ್ತಮ ಮುನ್ನಡೆ ಸಾಧಿಸಿದೆ.

ಗ್ರೀನ್ ಪಕ್ಷ ಶೇ. 10 ಮತ ಮತ್ತು 68 ಸೀಟು ಗಳಿಸಿದೆ. ಶೇ. 3.2 ಮತ ಮತ್ತು 17 ಸೀಟಿನ ಹೆಚ್ಚಳ ಸಾಧಿಸಿ 2005 ರ ಸ್ಥಾನಕ್ಕೆ ಹೋಲಿಸಿದರೆ ಗಮನಾರ್ಹ ಮುನ್ನಡೆ ಸಾಧಿಸಿದೆ. ಇದಕ್ಕೆ ಹೋಲಿಸಿದರೆ ಸೋಶಲಿಸ್ಟ್ ಪಕ್ಷ ಶೇ. 25 ಮತ ಮತ್ತು 146 ಸೀಟು ಗಳಿಸಿದೆ. ಕಳೆದ ಚುನಾವಣೆಗೆ (2005) ಹೋಲಿಸಿದರೆ ಶೇ. 11 ಮತ ಮತ್ತು 76 ಸೀಟುಗಳನ್ನು ಕಳೆದುಕೊಂಡು ಶೋಚನೀಯ ಸ್ಥಿತಿಯಲ್ಲಿದೆ. ಸಿ.ಡಿ.ಯು.-ಸಿ.ಎಸ್.ಯು. ಶೇ. 39 ಮತ ಮತ್ತು 239 ಸೀಟು ಗಳಿಸಿದೆ. ಕಳೆದ ಚುನಾವಣೆಗೆ (2005) ಹೋಲಿಸಿದರೆ ಶೇ. 2 ಮತ ಕಳೆದುಕೊಂಡು 13 ಹೆಚ್ಚು ಸೀಟುಗಳನ್ನು ಪಡೆದಿದೆ. ಎಫ್.ಡಿ.ಪಿ. ಶೇ. 12 ಮತ ಮತ್ತು 93 ಸೀಟು ಗಳಿಸಿದೆ. ಕಳೆದ ಚುನಾವಣೆಗೆ (2005) ಹೋಲಿಸಿದರೆ ಶೇ. 2 ಮತ ಕಳೆದುಕೊಂಡು 13 ಹೆಚ್ಚು ಸೀಟುಗಳನ್ನು ಪಡೆದಿದೆ. ಶೇ. 5 ಮತ ಮತ್ತು 32 ಸೀಟಿನ ಹೆಚ್ಚಳ ಸಾಧಿಸಿದೆ.

ಜರ್ಮನ್ ಚುನಾವಣಾ ವ್ಯವಸ್ಥೆ

ಪಾರ್ಲಿಮೆಂಟರಿ ಕ್ಷೇತ್ರಗಳಿಂದ ಪ್ರತಿನಿಧಿಗಳ (ಇಂಡಿಯಾದಲ್ಲಿ ಇರುವಂತೆ) ನೇರ ಆಯ್ಕೆ ಮತ್ತು ಪಕ್ಷಗಳ ಪ್ರಮಾಣಾತ್ಮಕ ಪ್ರತಿನಿಧಿತ್ವ ಇವುಗಳ ಮಿಶ್ರಣದ ಜರ್ಮನ್ ಚುನಾವಣಾ ವ್ಯವಸ್ಥೆ ಸ್ವಲ್ಪ ಸಂಕೀರ್ಣ ವ್ಯವಸ್ಥೆ. 598 ಸೀಟುಗಳಲ್ಲಿ ಅರ್ಧದಷ್ಟು ಅಂದರೆ 299 ಸೀಟುಗಳಿಗೆ ನೇರ ಆಯ್ಕೆ. ಉಳಿದ 299 ಸೀಟುಗಳನ್ನು ಪಕ್ಷಗಳು ಗಳಿಸಿದ ಮತಗಳ ಪ್ರಮಾಣದ ಆಧಾರದ ಮೇಲೆ ಹಂಚಲಾಗುತ್ತದೆ. ಪಕ್ಷಕ್ಕೆ ದಕ್ಕಿದಷ್ಟು ಸೀಟುಗಳಷ್ಟು ಪಕ್ಷದ ಪ್ರಕಟಿತ ಅಭ್ಯರ್ಥಿಗಳ ಪಟ್ಟಿಯ ಮೊದಲ ಹೆಸರುಗಳ ಅಭ್ಯರ್ಥಿಗಳು ಪ್ರತಿನಿಧಿಗಳಾಗುತ್ತಾರೆ. ಆದರೆ ಪ್ರಮಾಣಾತ್ಮಕ ಪ್ರತಿನಿಧಿತ್ವದ ಸೀಟುಗಳನ್ನು ಪಡೆಯಲು ಕನಿಷ್ಠ ಶೇ. 5 ಮತ ಗಳಿಸಬೇಕು. ಆದರೆ ನೇರ ಆಯ್ಕೆಯಲ್ಲಿ ಮೂರಕ್ಕಿಂತ ಹೆಚ್ಚು ಸೀಟು ಪಡೆದರೆ ಆ ಪಕ್ಷ ಪ್ರಮಾಣಾತ್ಮಕ ಪ್ರತಿನಿಧಿತ್ವದ ಸೀಟುಗಳನ್ನು ಸಹ ಪಡೆಯಬಹುದು. ಪ್ರಮಾಣಾತ್ಮಕ ಪ್ರತಿನಿಧಿತ್ವದಲ್ಲಿ ಉಳಿದ ಸೀಟುಗಳನ್ನು ಪಕ್ಷಗಳ ಮತಗಳ ಪ್ರಮಾಣದ ಪ್ರಕಾರ ಪುನಃ ಹಂಚಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಒಟ್ಟು ಸೀಟುಗಳ ಸಂಖ್ಯೆ ಹೆಚ್ಚಾಗುತ್ತದೆ.

ಈ ಬಾರಿಯ ಚುನಾವಣೆಗಳಲ್ಲಿ ಎಡ ಪಕ್ಷ ಬಿಟ್ಟರೆ ಎಲ್ಲಾ ಪ್ರಮುಖ ಪಕ್ಷಗಳು ನೇರ ಆಯ್ಕೆಯಲ್ಲಿ ಪ್ರಮಾಣ ಪ್ರತಿನಿಧಿತ್ವದ ಮತಪ್ರಮಾಣಕ್ಕಿಂತ ಹೆಚ್ಚು ಮತ ಗಳಿಸಿವೆ. ಎಡ ಪಕ್ಷ ಮಾತ್ರ ಎರಡೂ ಕಡೆ ಒಂದೇ ಪ್ರಮಾಣದ ಮತ ಗಳಿಸಿದೆ. ನೇರ ಆಯ್ಕೆಯಲ್ಲಿ ಪಕ್ಷಗಳು ರಚಿಸಿಕೊಳ್ಳುವ ಮೈತ್ರಿಕೂಟಗಳು ಮುಖ್ಯವಾಗುತ್ತವೆ ಎಂದು ಇಲ್ಲಿ ಗಮನಿಸಬಹುದು.

ಸೋತು ಗೆದ್ದ ಸಿ.ಡಿ.ಯು.-ಸಿ.ಎಸ್.ಯು. ಕೂಟ

ಒಟ್ಟಾರೆಯಾಗಿ ಹೇಳುವುದಾದರೆ ಮಧ್ಯಮ ಪಂಥೀಯ (ಸಿ.ಡಿ.ಯು., ಸಿ.ಎಸ್.ಯು, ಸೋಶಲಿಸ್ಟ್) ಪಕ್ಷಗಳು ದೊಡ್ಡ ಪ್ರಮಾಣದಲ್ಲಿ ಬೆಂಬಲ ಕಳೆದು ಕೊಂಡಿವೆ. ಶೇ. 13 ಮತ ಮತ್ತು 63 ಸೀಟುಗಳನ್ನು ಕಳೆದುಕೊಂಡಿವೆ. ಎಡ ಮತ್ತು ಬಲಪಂಥಿಯ ಪಕ್ಷಗಳು ಗಮನಾರ್ಹ ಮುನ್ನಡೆ ಸಾಧಿಸಿವೆ. ಸೋಶಲಿಸ್ಟ್ ಪಕ್ಷ ತನ್ನ ಮತಗಳನ್ನು ಎಡ ಪಕ್ಷಗಳಿಗೆ ಕಳೆದುಕೊಂಡಿದೆ. ಅದೇ ರೀತಿ ಸಿ.ಡಿ.ಯು.-ಸಿ.ಎಸ್.ಯು. ಮತಗಳು ಎಫ್.ಡಿ.ಪಿ. ಯತ್ತ ಹೋಗಿವೆ.

ಕಳೆದ ಬಾರಿ ಚುನಾವಣೆ ನಂತರ ರಚಿತವಾದ ಸಿ.ಡಿ.ಯು. ಸಿ.ಎಸ್.ಯು. ಮತ್ತು ಸೋಶಲಿಸ್ಟ್ ಪಕ್ಷಗಳ 'ಗ್ರಾಂಡ್ ಮೈತ್ರಿಕೂಟ' ಈ ಬಾರಿಯ ಚುನಾವಣೆಯಲ್ಲಿ ಇರಲಿಲ್ಲ. 'ಗ್ರಾಂಡ್ ಮೈತ್ರಿಕೂಟ' ಸರ್ಕಾರ ಆರ್ಥಿಕ ಕುಸಿತ ಮತ್ತು ಅದರಿಂದ ಉಂಟಾದ ದುಷ್ಪರಿಣಾಮಗಳನ್ನು (ಬೆಲೆ ಏರಿಕೆ, ಉದ್ಯೋಗ ಕಡಿತ, ಸಾಮಾಜಿಕ ಸವಲತ್ತು ಕಡಿತ) ತಡೆಯಲು ಏನೂ ಮಾಡದ್ದರಿಂದ ಜನರ ಬೆಂಬಲ ... ಕೊಂಡಿತ್ತು. ಇದರ ವಿರುದ್ಧ ಬದಲಿ ನೀತಿಗಳ ... ಮೇಲೆ ಸೋಶಲಿಸ್ಟ್-ಎಡ-ಗ್ರೀನ್ ... ಮೈತ್ರಿಕೂಟದ ಆಧಾರದ ಮೇಲೆ ಚು... ಸ್ಪರ್ಧಿಸುವ ಎಡ ಪಕ್ಷದ ಸಲಹೆ ಯನ್ನು ಸೋ... ಪಕ್ಷ ತಿರಸ್ಕರಿಸಿತು. ಇಂತಹ ಮೈತ್ರಿಕೂಟ ಇ... ಪಕ್ಷಗಳು ಗಳಿಸಿದ ಶೇಕಡಾವಾರು ಮತ (ಶೇ... ಈಗ ಸರ್ಕಾರ ರಚಿಸಿರುವ ಸಿ.ಡಿ.ಯು... ಸಿ.ಎಸ್.ಯು.ಎಫ್.ಡಿ.ಪಿ. ಕೂಟಕ್ಕಿಂತ (... ಕೇವಲ ಶೇ. 2 ಕಡಿಮೆ ಇದೆ. ಕೂಟ ರ... ನೇರ ಆಯ್ಕೆಯ ಸೀಟು... ಸೋಶಲಿಸ್ಟ್-ಎಡ-ಗ್ರೀನ್ ಪಕ್ಷಗಳ ಕೂಟ ... ಸೀಟುಗಳನ್ನು ಗಳಿಸಿ ಸರ್ಕಾರ ರಚಿಸುವ ... ಇತ್ತು.

ಸೋಶಲಿಸ್ಟ್ ಪಕ್ಷ ಸ್ವತಂತ್ರವಾಗಿ ಸ್ಪರ್ಧಿ... ಚುನಾವಣೆ ನಂತರ ಪುನಃ ಕಳೆದ ಬಾ... 'ಗ್ರಾಂಡ್ ಮೈತ್ರಿಕೂಟ' ರಚಿಸಿ ಅ... ಹಿಡಿಯಬಹುದು ಎಂಬ ಆಸೆ ಇಟ್ಟುಕೊ... ಸಿ.ಡಿ.ಯು. ಮತ್ತು ಸಿ.ಎಸ್.ಯು. ಗಳು ... ಯಥಾ ಪ್ರಕಾರ ಮೈತ್ರಿಕೂಟ ರಚಿಸಿಕೊಂ... ಸಿ.ಡಿ.ಯು.-ಸಿ.ಎಸ್.ಯು. ಮೈತ್ರಿಕೂಟ ಚು... ಫಲಿತಾಂಶ ನೋಡಿಕೊಂಡು ಸೋಶಲಿಸ್ಟ್ ... ಎಫ್.ಡಿ.ಪಿ. ಜತೆ ಮೈತ್ರಿಕೂಟ' ರಚಿಸಿ ... ಮಾಡುವ ಯೋಜನೆ ಇಟ್ಟು ಕೊಂಡಿ... ಸೋಶಲಿಸ್ಟ್ ಪಕ್ಷ ಕೂಟ ರಚಿಸಲು ಒಪ್ಪ... ಮಾತ್ರವಲ್ಲ ಹಿಂದಿನ ಸರ್ಕಾರದ ನೀತಿ... ಸಮರ್ಥಿಸಿಕೊಂಡದ್ದು ಅದಕ್ಕೆ ಮುಳುವಾ... ಸರ್ಕಾರದ ವಿರುದ್ಧ ಅತೃಪ್ತಿಯ ಪ್ರತಿಭಟನಾ ... ಪ್ರಯೋಜನ ಎಫ್.ಡಿ.ಪಿ.ಗೆ ಹೋಯಿತ... ಭಾಗ ಎಡ-ಗ್ರೀನ್ ಪಕ್ಷಗಳಿಗೂ ಬಂತ...

ಹೊಸ ಸರ್ಕಾರ ಎಫ್.ಡಿ.ಪಿ.ಯ ಬ... ಇನ್ನೂ ಹೆಚ್ಚು ಬಲಪಂಥೀಯ ಧೋರ... ಅನುಸರಿಸುವ ಸಾಧ್ಯತೆ ಇದೆ. ಭಾರೀ ಪ್ರಮ... ಉದ್ಯೋಗ ಮತ್ತು ಸಾಮಾಜಿಕ ಸವಲತ್ತು... ಜರ್ಮನ್ ಕಂಪನಿಗಳು ಒತ್ತಡ ಹಾಕಲಿವೆ. ಸ... ಜರ್ಮನರ ಸ್ಥಿತಿ ಇನ್ನಷ್ಟು ದುರ್ಭರವಾಗಲಿ...

ಆಹಾರದ ಹಕ್ಕಿಗಾಗಿ, ಬೆಲೆ ಏರಿಕೆ ವಿರೋಧಿಸಿ ಆಂದೋಲನ ಸಾರಿದ ಎಡಪಕ್ಷಗ...

ನವೆಂಬರ್ 25, ರಾಜ್ಯಮಟ್ಟದ ಬೃಹತ್ ರ್‍ಯಾಲಿ ಸಮಾವೇಶದ ಕರೆ

ಬೆಲೆ ಏರಿಕೆ ವಿರೋಧಿಸಿ, ಆಹಾರದ ಹಕ್ಕನ್ನು ಪ್ರತಿಪಾದಿಸಿದ ಈ ಯಶಸ್ವಿ ಸಮಾವೇ... ಜನತೆಯ ಮಹಾ ಆಂದೋಲನದ ಅಗತ್ಯವನ್ನು ಪ್ರತಿಪಾದಿಸಿತು ಅದರಂತೆ ಇದೇ ನವೆಂಬರ... ರಂದು ರಾಜ್ಯ ಮಟ್ಟದ ಬೃಹತ್ ರ್‍ಯಾಲಿಯು ಬೆಂಗಳೂರಿನಲ್ಲಿ ಸಂಘಟಿಸುವುದು. ಹಿಂದೆ... ಕಂಡಿರದಂಥ ಬೃಹತ್ ಪ್ರಮಾಣದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮ... ಮಾಡಲಾಯಿತು.

ಇದರ ಸಿದ್ಧತೆಯಾಗಿ ರಾಜ್ಯದ ಮಹಾನಗರ ಪಾಲಿಕೆಗಳಾಗಿರುವ ಮಂಗಳೂರು, ಮೈಸು... ಗುಲ್ಬರ್ಗಾ, ಧಾರವಾಡ- ಹುಬ್ಬಳ್ಳಿ, ಬಳ್ಳಾರಿಗಳಲ್ಲಿ ಜಿಲ್ಲಾ ಮಟ್ಟದ ಸಮಾವೇಶಗಳನ್ನು ಸಂ... ಸುವುದು.

ನೆರೆ ಪೀಡಿತ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಈ ಕೂಡಲೇ ಎಲ್ಲಾ ಕಡೆಗಳಲ್ಲಿ ಹೋ... ಸಂಘಟಿಸಲು ನಿರ್ಧಾರ. ಸಮಸ್ಯೆ ತೀವ್ರವಾಗಿರುವಲ್ಲಿ ತಾಲ್ಲೂಕು-ಸ್ಥಳೀಯವಾಗಿ ಹೋರಾಟ ವಿಸ್ತರ... ಕರೆ.

... ಮುಂದಿನ ತುರ್ತು ಕರ್ತವ್ಯಗಳು

2 ರಿಂದ

ಂಬಗಳು ಅವರ ಮನೆಗಳಿಂದ ತರಗೊಂಡಿದ್ದಾರೆ ಈ ರೀತಿಯ ದಾಳಿಗಳು ಜಿಲ್ಲೆಗಳಲ್ಲಿ ಮಾವೋವಾದಿಗಳ ಯೋಗದೊಂದಿಗೆ ನಡೆಯುತ್ತಿವೆ.

ಯಾನ್ ಎಫ್. ಟಿ. ಎ. (ಏಷಿಯಾನ್ ತ್ರ ವ್ಯಾಪಾರ ಒಪ್ಪಂದ)

ಕೃಷಿ, ಮೀನುಗಾರಿಕೆ ಮತ್ತು ಹಲವು ವಿಭಾಗಗಳ ಿಕೆಗಳ ಮೇಲೆ ಪೆಟ್ಟುನೀಡುವ ಏಷಿಯಾ ದೇಶಗಳ ತೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಂದದ ಕರಾರು ಮತ್ತು ನಿಬಂಧನೆಗಳ ವಿರುದ್ಧದ ನಿಲುವನ್ನು ಕೇಂದ್ರ ಸಮಿತಿಯು ಪುನರುಚ್ಚರಿಸಿದೆ. ಈ ಸಂಬಂಧವಾಗಿ ಅಕ್ಟೋಬರ್ 2 ರಂದು ದ್ಯಂತ 20 ಲಕ್ಷ ಜನರ ಮಾನವ ಸರಪಳಿಯನ್ನು ಟಿಸಿದ್ದ ಸಿ.ಪಿ.ಐ. (ಎಂ) ಕೇರಳ ರಾಜ್ಯ ಸಮಿತಿಗೆ ಂದನೆಗಳನ್ನು ಕೇಂದ್ರ ಸಮಿತಿಯು ತಿಳಿಸಿತು.

ಯ ನ್ಯಾಯಯುತ ಬೇಡಿಕೆಗಳು ಮತ್ತು ಗಳಿಗಾಗಿ ಸಿಪಿಐ(ಎಂ) ಅವರನ್ನು ಟಿಸುವುದನ್ನು ಮುಂದುವರೆಸುತ್ತದೆ. ಅದೇ ವೇಳೆ, ದು ಅಂತಹ ದಾಳಿಗಳನ್ನು ಎದುರಿಸಲು ತೆಯನ್ನು ಅಣಿನೆರೆಸುತ್ತದೆ. ಪಕ್ಷದ ದೇಶಾದ್ಯಂತವಿರುವ ಎಲ್ಲ ಘಟಕಗಳು ಪಶ್ಚಿಮ ಬಂಗಾಳದಲ್ಲಿ ಪಕ್ಷ ಮತ್ತು ಎಡಪಕ್ಷಗಳೊಂದಿಗೆ ಒಗ್ಗಟ್ಟಿನ ಆಂದೋಲನವನ್ನು ತೀವ್ರಗೊಳಿಸುತ್ತವೆ ಮತ್ತು ಅಂಥಹ ಧಾಳಿಗಳ ಹಿಂದಿರುವ ಧೂರ್ತತೆಯನ್ನು ಬಯಲುಗೊಳಿಸುತ್ತವೆ.

ಹಿಂದುತ್ವ ಭಯೋತ್ಪಾದಕ ಗುಂಪುಗಳು

ಇತ್ತೀಚೆಗೆ ಗೋವಾದಲ್ಲಿ ಸ್ಫೋಟಕಗಳನ್ನು ಸಾಗಿಸುವಾಗ ಮೃತಪಟ್ಟ ಇಬ್ಬರ ಪ್ರಕರಣವು ದೇಶದಲ್ಲಿ ತೀವ್ರವಾದಿ ಹಿಂದುತ್ವ ಗುಂಪುಗಳು ನಡೆಸುತ್ತಿರುವ ದುಷತ್ಯವನ್ನು ಎತ್ತಿ ತೋರಿಸುತ್ತದೆ. ಈ ರೀತಿಯ ಸ್ಫೋಟಕಗಳನ್ನು ಸಂಗ್ರಹಿಸುತ್ತಿರುವ ಸನಾತನ ಸಂಸ್ಥೆಯು ಇದಕ್ಕೆ ಜವಾಬ್ದಾರಿಯಾಗಿದ್ದು, ಇದು ಒಂದು ಬೃಹತ್ ಜಾಲದ ಒಂದು ಭಾಗ ಎನ್ನುವುದು ಮಾಲೆಗಾವ್ ಸ್ಫೋಟದಿಂದ ತಿಳಿಯುತ್ತದೆ.

ಇಂತಹ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಲು ಈ ರೀತಿ ದುಷತ್ಯ ನಡೆಸುವ ಗುಂಪುಗಳ ವಿರುದ್ದ ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಶ್ರೀಲಂಕಾ

ಎಲ್.ಟಿ.ಟಿ.ಇ. ಪತನದ ನಂತರದ ಪರಿಸ್ಥಿತಿಯಲ್ಲಿ ಉತ್ತರ ವಲಯದ ನಿರಾಶ್ರಿತರ ಶಿಬಿರಗಳಲ್ಲಿ 2.5 ಲಕ್ಷ ತಮಿಳು ಮೂಲದ ಜನರು ವಾಸಿಸುತ್ತಿದ್ದಾರೆ. ಶ್ರೀಲಂಕಾ ಸರ್ಕಾರವು ನಿರಾಶ್ರಿತರಿಗೆ 6 ತಿಂಗಳೊಳಗಾಗಿ ಪುರ್ನವಸತಿ ಕಲ್ಪಿಸಿ ಅವರ ಮನೆಗಳಿಗೆ ವಾಪಸ್ ಕಳುಹಿಸಲಾಗುವುದು ಎಂಬ ವಚನ ನೀಡಿತ್ತು. ಯೋಜನೆಯಂತೆ ಈವರೆಗೂ ಅದರ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ಭಾರತ ಸರ್ಕಾರವು ತನ್ನ ಎಲ್ಲಾ ಶ್ರಮವನ್ನು ವಿನಿಯೋಗಿಸಿ ಆ ಜನರನ್ನು ಪೂರ್ಣ ಪ್ರಮಾಣದ ಪುನರ್ವಸತಿಯೊಂದಿಗೆ ಶೀರ್ಘವಾಗಿ ಅವರ ಮನೆಗೆ ಸ್ಥಳಾಂತರಗೊಳ್ಳುವಂತೆ ಮಾಡಬೇಕು. ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ತನಿಖೆ ನಡೆಸಿ ಶ್ರೀಲಂಕಾ ಸರ್ಕಾರಕ್ಕೆ ಪರಿಹರಿಸಬೇಕು.

ತಮಿಳು ಮಾತನಾಡುವ ಪ್ರದೇಶಗಳಲ್ಲಿ ಸಂಪೂರ್ಣ ಸ್ವಾಯತ್ತತೆ ನೀಡುವ ಮೂಲಕ ತಮಿಳರ ಸಮಸ್ಯೆಗೆ ಒಂದು ರಾಜಕೀಯ ಪರಿಹಾರ ನೀಡುವುದಕ್ಕಾಗಿ ಶ್ರೀಲಂಕಾ ಸರ್ಕಾರವು ಇದುವರೆಗೂ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ದಿಶೆಯಲ್ಲಿ ಅರ್ಥಪೂರ್ಣ ಹೆಜ್ಜೆಗಳನ್ನು ಹಾಕುವಂತೆ ಕೇಂದ್ರ ಸಮಿತಿಯು ಶ್ರೀಲಂಕಾ ಸರ್ಕಾರವನ್ನು ಆಗ್ರಹಿಸಿದೆ. ಈ ವಿಷಯವಾಗಿ ಭಾರತ ಸರ್ಕಾರವು ರಾಜಕೀಯ ಮತ್ತು ರಾಯಭಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು.

ತಿದ್ದುಪಡಿ ಆಂದೋಲನ

ಪಕ್ಷದಲ್ಲಿ ತಿದ್ದುಪಡಿ ಚಳುವಳಿಯನ್ನು ಆರಂಭಿಸಲು ಕೇಂದ್ರ ಸಮಿತಿಯು ಪ್ರಸ್ತಾವನೆಯನ್ನು ಚರ್ಚಿಸಿ ಅಂಗೀಕರಿಸಿತು. ಪಕ್ಷವು ಹೆಚ್ಚು ಐಕ್ಯತೆಯಿಂದ ಬಲಗೊಂಡು ಮೂಡಿಬರಲು ದೋಷಯುತ ಪ್ರವೃತ್ತಿಗಳು ಮತ್ತು ಬಲಹೀನತೆಗಳನ್ನು ಕಿತ್ತೊಗೆಯಲು ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಮಟ್ಟದಲ್ಲಿ ತಿದ್ದುಪಡಿ ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ. ಇತ್ತೀಚಿನ ಪ್ರಸ್ತಾವನೆಯು 1996ರ ತಿದ್ದುಪಡಿ ಚಳುವಳಿಯ ವರದಿಯನ್ನು ಸಮಕಾಲೀನಗೊಳಿಸಿದೆ ಮತ್ತು ಇದು ಕಳೆದ 12 ವರ್ಷಗಳ ಪಕ್ಷದ ಅನುಭವದ ಆಧರಿಸಿದೆ.

ಪಾರ್ಲಿಮೆಂಟರಿ ಮತ್ತು ಪಾರ್ಲಿಮೆಂಟೇತರ ಕೆಲಸಗಳು, ಕಮ್ಯುನಿಸ್ಟ್ ಶೈಲಿ ಮತ್ತು ಮೌಲ್ಯಗಳ ನಿರ್ವಹಣೆ ಮತ್ತು ಪ್ರಗತಿಪರ ಮೌಲ್ಯಗಳನ್ನು ಎತ್ತಿಹಿಡಿಯಲು ಪಕ್ಷದ ಸದಸ್ಯರಿಗೆ ಕಣ್ಣೋಟ ನೀಡುವುದು, ಇವುಗಳ ಖಚಿತತೆಯ ಆಧಾರದ ಮೇಲೆ ಪ್ರಜಾಸತ್ತಾತ್ಮಕ ಕೇಂದ್ರೀಯವಾದವನ್ನು ಪಕ್ಷದ ಸಂಘಟನಾತ್ಮಕ ತತ್ವವಾಗಿ ಬಲಗೊಳಿಸುವ ಸಲುವಾಗಿ ಪ್ರಸ್ತಾವನೆಯು ಮಾರ್ಗದರ್ಶಿಯನ್ನು ಸಿದ್ಧಪಡಿಸಿದೆ. ತಿದ್ದುಪಡಿ ಚಳುವಳಿಯನ್ನು ನಡೆಸಲು ಮಾರ್ಗದರ್ಶಿಯನ್ನು ಸಿದ್ಧಪಡಿಸಿದೆ. ಪಕ್ಷದ ಎಲ್ಲ ಹಂತಗಳಲ್ಲಿಯೂ ಈ ಪ್ರಸ್ತಾವನೆಯ ಆಧಾರದ ಮೇಲೆ ತಿದ್ದುಪಡಿ ಚಳುವಳಿ ನಡೆಸಲಾಗುವುದು. ○


ನತೆಯಿಂದ ಬದುಕಲು ....

11 ರಿಂದ

ನವಾಗಿರುವ ಪ್ರದೇಶವಿದು. ಆದರೆ ಬಹುತೇಕ: ಗಳಲ್ಲಿ ಈ ಕಾಯ್ದೆಯ ಮಹತ್ವ ಜನರಿಗೆ ಮನನ ಡಿಕೊಟ್ಟಿಲ್ಲ. ಜನರೇ ಸ್ವಯಂ ಇಚ್ಛೆಯಿಂದ ಕೆಲ್ಲೂ ಕೆಲಸ ಕೊಟ್ಟಿಲ್ಲ ಎಂಬ ದೂರುಗಳು ರಕವಾಗಿವೆ. ದುಂಬಾಲು ಬಿದ್ದು ಅಥವಾ ರಾಡಿ ಕೆಲಸ ಪಡೆದಲ್ಲಿ ಸಮಯಕ್ಕೆ ಸರಿಯಾಗಿ ಪಾವತಿಸಿಲ್ಲ. ಈ ಕಾಯ್ದೆ ಪ್ರಕಾರ ವೇತನವು ಕ್ಕೊಮ್ಮೆ ಪಾವತಿಸಬೇಕು. ಆದರೆ ರಾಜ್ಯದಲ್ಲಿ ಕ್ಕಮ್ಮೆ ವೇತನ ಪಾವತಿಸಿದ ಉದಾಹರಣೆಗಳು ಕಡಿಮೆ. ಇಲ್ಲವೇ ಇಲ್ಲ ಅನ್ನಬಹುದು. ಪ್ರವಾಹ ತ ಗ್ರಾಮಗಳಿಗೆ ಭೇಟಿ ಮಾಡಿದಾಗಲೂ ಈ ಾಳಾಗಿ ಗೋಚರಿಸಿದೆ. ನೆರೆ ಬಂದು ಹೋದ ರೆಯೂ ಜನ ಇಷ್ಟೆಲ್ಲ ಸಂಕಷ್ಟ ಸುವಾಗಲೂ ಪೂರ್ಣ ಪ್ರಮಾಣದ ವೇತನ ತಿಸದಿರುವ ಗ್ರಾಮಗಳು ಹೇರಳವಾಗಿವೆ. ಹರಣೆಗೆ ಗುಲಬರ್ಗಾ ಜಿಲ್ಲೆ ಶಹಾಪೂರ ಾಕಿನ ಗೋನಾಳ ಗ್ರಾಮ ಪಂಚಾಯತ್ ಯ ಎಂಟು ಹಳ್ಳಿಗಳಲ್ಲಿ ನೂರು ದಿನಗಳ ಕೆಲಸ ದೆ. ಆದರೆ ವೇತನ ಪೂರ್ತಿ ಪಾವತಿಸಿಲ್ಲ. ಪರಿಸ್ಥಿತಿ ರಾಜ್ಯದ ಅನೇಕ ಕಡೆಗಳಲ್ಲಿದೆ. ಅವರು ದ ಕೆಲಸದ ಕೂಲಿಯೇ ಕೊಡದಿರುವುದು ಧೋರಣೆಯ ಸಂಕೇತ? ಅವರು ಕೆಲಸದ ಪಡೆಯುವುದು ಅವರ ಹಕ್ಕು ಮತ್ತು ಅವರ ಗೆ ಸಾಕ್ಷಿ. ಜನರು ಕೈಯೊಡ್ಡುವ ಸ್ಥಿತಿಯಲ್ಲಿ ಇರಬೇಕೆ? ದಾನಕ್ಕಿಂತಲೂ ಹಕ್ಕು ದ್ದಲ್ಲವೇ?

ಇದೇಕೆ ಸಾಧ್ಯವಿಲ್ಲ?

ಜನತೆಯು ಘನತೆಯಿಂದ ಬದುಕಲು ಮತ್ತು ಮಾನವ ಸಂಪನ್ಮೂಲ ಬಳಸಿ ಗ್ರಾಮೀಣ ಅಭಿವೃದ್ಧಿ ಮಾಡುವ ದೂರ ದೃಷ್ಟಿಯನ್ನು ಹೊಂದಿ ಈ ಕಾಯ್ದೆ ತರಲಾಗಿದೆ. ಅನೇಕ ತಿದ್ದುಪಡಿಗಳ ಜರೂರಿ ಇದೆ. ಆ ಮಾತು ಬೇರೆ. ಆದರೆ ಜಲ ಸಂಬಂಧಿ ಕಾಮಗಾರಿ ಕೈಗೆತ್ತಿಕೊಂಡು ಕೆರೆ ಬಾವಿ ಹಳ್ಳ ಕೊಳ್ಳಗಳ ಹೂಳೆತ್ತಿಸುವುದು ಗೋಕಟಾ ಚೆಕ್‌ಡ್ಯಾಂ ನಿರ್ಮಿಸುವುದು ರೈತರ ಐದು ಎಕರೆವರೆಗಿನ ಹೊಲದಲ್ಲಿ ಬಂಡು ಹಾಕಿಸುವುದು ಸಸಿ ನೆಡುವುದು ತೋಟಗಾರಿಕೆ ಇತ್ಯಾದಿ ಅಭಿವೃದ್ಧಿ ಆಧಾರಿತ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು. ಕೂಲಿ ಕಾರ್ಮಿಕರಿಗೆ ಒಂದು ಪಟ್ಟು ಅನುಕೂಲವಾದರೆ ಸಣ್ಣ ರೈತರಿಗೆ ಎರಡು ಪಟ್ಟು ಅನುಕೂಲದ ಕಾಯ್ದೆ ಇದು. ಈ ಸಮಯದಲ್ಲಿ ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ನಿರ್ಧರಿಸಿದ್ದರೆ ಹಳ್ಳ ಕೊಳ್ಳ ಬಾವಿ ನಾಲಾ ಡ್ಯಾಂ ಹೀಗೆ ಎಲ್ಲೆಂದರಲ್ಲಿ ತುಂಬಿಕೊಂಡ ಬಹುದಿನಗಳ ಹೂಳು ಎತ್ತಿಸುವುದು ಈ ಮೂರು ವರ್ಷಗಳಲ್ಲಿ ಮಾಡಿಸಿದ್ದರೆ ಈಗ ಉಂಟಾದ ಪ್ರವಾಹದ ದುಷ್ಪರಿಣಾಮ ಕೊಂಚವಾದರೂ ತಡೆಗಟ್ಟಲು ಸಾಧ್ಯವಾಗುತ್ತಿತ್ತು. ಯಾಕೆ ಈ ಕೆಲಸ ಮಾಡಿಸಲಿಲ್ಲ? ಹಳ್ಳಿಗಳಲ್ಲಿ ಜನ ಕೆಲಸ ಮಾಡಲು ಸಿದ್ಧವಿದ್ದಾರೆ. ಆದರೆ ರಾಜ್ಯಾದ್ಯಂತ ಇರುವ ಸತ್ಯವೆಂದರೆ ರೇಗಾ (ಉದ್ಯೋಗ ಖಾತ್ರಿ ಕಾಯ್ದೆ) ಕುರಿತು ಗ್ರಾಮದ ಜನರಿಗೆ ಸಮಗ್ರ ಮಾಹಿತಿ ಕೊಡದಿರುವುದು. ದುಡಿಯುವ ಜನತೆಯನ್ನು ಕತ್ತಲಲ್ಲಿಟ್ಟು ಕೆಲವೇ ಪಟ್ಟಭದ್ರ ಶಕ್ತಿಗಳೊಂದಿಗೆ ಕೈ ಜೋಡಿಸಿ ಯಂತ್ರಗಳ ಮೂಲಕ ಕೆಲಸ ಮಾಡಿಸಲಾಗುತ್ತಿದೆ. ಅನಕ್ಷರಸ್ಥ ಬಡಜನತೆಯನ್ನು ಯಾಮಾರಿಸಿ ಸಹಿ ಪಡೆಯಲಾಗುತ್ತಿದೆ. ಮತ್ತು ಕಾಯ್ದೆಯನ್ನು



ಬಯಲಿನೊಳಗಿನ ಬದುಕು

ವಿಫಲಗೊಳಿಸಲು ರೈತ ವಿರೋಧಿ ಕಾಯ್ದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಅಧಿಕಾರಿಗಳು ಹೇಗಾದರೂ ಹಣ ಖರ್ಚು ಮಾಡುವ ಒತ್ತಡಕ್ಕೆ ಮಾತ್ರ ಒತ್ತು ಕೊಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಖರ್ಚಾದ ಹಣವು ಕೆಲಸ ಮಾಡಿದವರ ಅಕೌಂಟಿಗೆ ಹೋಗುತ್ತಿಲ್ಲ. ಬದಲಿಗೆ ಕೆಲಸ ಮಾಡದವರ ಪಾಲಾಗುತ್ತಿದೆ. ಈ ಎಲ್ಲ ಪ್ರಕ್ರಿಯೆ ಪಂಚಾಯತ್‌ನ ಎಲ್ಲ ಹಂತದ ಸಂಬಂಧಪಟ್ಟ ಸಿಬ್ಬಂದಿಯನ್ನು ಹೊರತುಪಡಿಸಿ ನಡೆಯುತ್ತಿಲ್ಲ. ಆದರೆ ಸರಕಾರ ಒಂದು ವೇಳೆ ಈ ಕಾಯ್ದೆಯ ಸದ್ಬಳಕೆ ಮಾಡಿಕೊಂಡು ಜನತೆಯ ಕೈಗೆ ಉದ್ಯೋಗ ಕೊಡಲು ಮನಸು ಮಾಡಿದರೆ ಖಂಡಿತ ಜಾರಿಯಾಗಲು ಸಾಧ್ಯವಿದೆ. ಬರ ಮತ್ತು ನೆರೆಯಿಂದ ತತ್ತರಿಸಿದ ಜನರನ್ನು ದಯನೀಯವಾಗಿಸದೇ ಅವರ ಕೈಗೆ ಇನ್ನೂ ಒಂದು ನೂರು ದಿನ ಹೆಚ್ಚಿಗೆ ಕೆಲಸ ಕೊಡಲು ಯಾಕೆ ಸಾಧ್ಯವಾಗಬಾರದು? ಅದಕ್ಕಾಗಿ ನೆರೆ ಪರಿಹಾರದ ವಿಶೇಷ ಬಜೇಟ್ ಯಾಕೆ ಕೊಡಬಾರದು? ರೇಗಾದಡಿ ಕೆಲಸ ಮಾಡಿದವರ ಹೆಸರಿನ ಪಟ್ಟಿಯನ್ನು ಪ್ರತಿ ದಿನ ಸಾಯಂಕಾಲ ಕಂಪ್ಯೂಟರ್‌ನಲ್ಲಿ ಅಳವಡಿಸಿ ರೇಗಾದ ರಾಜ್ಯ ಕಚೇರಿಯವರೆಗೆ ತಲುಪಿಸಿ ರೇಗಾ ವೆಬ್‌ನಲ್ಲಿ ಸಾರ್ವಜನಿಕರಿಗೆ ದೊರೆಯುವಂತೆ ಮಾಡಿದಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರಕ್ಕೆ ಒಂದಿಷ್ಟಾದರೂ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ವಾರಕ್ಕೊಮ್ಮೆ ಕಡ್ಡಾಯ ವೇತನ ಪಾವತಿಸಿದಲ್ಲಿ ರೇಗಾ ಯಶಸ್ವಿನತ್ತ ಮುನ್ನಡೆಯಲು ಸಾಧ್ಯ. ಇದೇ ಸಮಯದಲ್ಲಿ ಪಟ್ಟಣದಲ್ಲಿರುವ ಅಕ್ಷರಸ್ಥರು ಪ್ರಜ್ಞಾವಂತರು ಗ್ರಾಮಗಳತ್ತ ಮುಖ ಮಾಡಬೇಕಿದೆ. ವಿಶೇಷವಾಗಿ ರೇಗಾ ಕುರಿತು ಸಮಗ್ರ ಮಾಹಿತಿ ಕೊಡಲು ಮುಂದಾಗಬೇಕಿದೆ.

ಗ್ರಾಮೀಣ ಪ್ರದೇಶದ ಕಾಯಕಜೀವಿಗಳು ಬರಿದಾದ ಮನೆ ಖಾಲಿ ಹೊಲ ನೋಡುತ್ತ ಕಂಗೆಟ್ಟ ಹೊತ್ತಲ್ಲಿಯೂ ಸರಕಾರ ರೇಗಾ ಬಲಪಡಿಸುವ ಮಾತಾಡುತ್ತಿಲ್ಲ ಅಂದರೆ ಹೇಗೆ? ಜನರು ಘನತೆಯಿಂದ ಬದುಕಲು ಉದ್ಯೋಗ,ಅನ್ನ ಮತ್ತು ಸೂರು ಅವರ ಹಕ್ಕಾಗಬೇಕು. ಹಂಗಿನ ದಾನಕ್ಕಿಂತಲೂ ಸ್ವಾಭಿಮಾನದ ದುಡಿಮೆ ಮತ್ತು ತಕ್ಕ ವೇತನದಿಂದ ನಮ್ಮ ಗ್ರಾಮದ ಜನತೆಯನ್ನು ರಕ್ಷಿಸಲು ಸಾಧ್ಯ. ○

ರಂಗ ಭೂಮಿ

ಎರಡು ನಾಟಕಗಳು ಮತ್ತು ಒಂದು ಸಂದೇಹ

ಇತ್ತೀಚಿಗೆ ಬೆಂಗಳೂರಿನಲ್ಲಿ ಕೆಲವು ದಿನಗಳ ಅಂತರದಲ್ಲಿ ಎರಡು ನಾಟಕಗಳ ಪ್ರದರ್ಶನ ಆದವು. ಸಮುದಾಯ ಬೆಂಗಳೂರು ಅವರ 'ಸುತ್ತಿಕೊಂಡರೆ ಸರ್ಪ' ಇಬ್ಸನ್ನನ ಪ್ರಸಿದ್ಧ ನಾಟಕ 'ಎನಿಮಿ ಆಫ್ ದಿ ಪೀಪಲ್' ರೂಪಾಂತರ. ನೀನಾಸಂ ತಿರುಗಾಟ-2009 ಭಾಗವಾಗಿ ಪ್ರದರ್ಶಿಸಿದ 'ಆಕಾಶಭೇರಿ' ಭಗತ್ ಸಿಂಗ್ ಜೀವನ ಮತ್ತು ವಿಚಾರದ ಬಗೆಗಿನ ನಾಟಕ.

'ಸುತ್ತಿಕೊಂಡರೆ ಸರ್ಪ' ಭ್ರಷ್ಟ ರಾಜಕೀಯ ವ್ಯವಸ್ಥೆ ವಿರುದ್ಧ ಒಬ್ಬ ವ್ಯಕ್ತಿಯ ಹೋರಾಟದ ಚಿತ್ರಣ. ಅವನ ಹೋರಾಟ ಅರ್ಥ ಮಾಡಿಕೊಳ್ಳದೆ, ಪಟ್ಟಭದ್ರ ಹಿತಾಸಕ್ತಿಗಳ ಚಿತಾವಣೆಗೆ ಬಲಿ ಬಿದ್ದು ತಮ್ಮದೇ ಹಿತಾಸಕ್ತಿ ಪರವಾದ ಆತನ ಹೋರಾಟದ ವಿರುದ್ಧ ತಿರುಗಿ ಬೀಳುವ ಜನಸಾಮಾನ್ಯರ ಚಿತ್ರಣ ಇಲ್ಲಿದೆ. 1880 ರ ದಶಕದ ನಾರ್ವೇಯ ಸಂದರ್ಭವನ್ನು 21 ನೇ ಶತಮಾನದ ಮೊದಲ ದಶಕದ ಕರ್ನಾಟಕಕ್ಕೆ ಸಫಲವಾಗಿ ರೂಪಾಂತರಿಸ ಲಾಗಿದೆ. ಬದಲಾವಣೆ ಒಬ್ಬ ಪ್ರಜ್ಞಾವಂತ ವ್ಯಕ್ತಿಯ ನೈತಿಕ ಛಲ'ದಿಂದ ಬರುತ್ತದೆ. ಬಹುಸಂಖ್ಯಾತ ಜನತೆಯನ್ನು ('ಬಹುಮತ ದಾರರು') ಪಟ್ಟಭದ್ರ ಹಿತಾಸಕ್ತಿಗಳು ಯಾವಾಗಲೂ ದಾರಿ ತಪ್ಪಿಸುವುದರಿಂದ ಅವರಿಂದ ಬದಲಾವಣೆ ಬರದು. ಇದು ನಾಟಕದ ಮೂಲ



'ಆಕಾಶಭೇರಿ' ನಾಟಕದ ದೃಶ್ಯ


ಆಶಯ. ಸಾರ್ವತ್ರಿಕ ಒಳಿತು ಮತ್ತು ತಮ್ಮ ಹಿತಾಸಕ್ತಿ ಬಗ್ಗೆ ಎಚ್ಚೆತ್ತ ಬಹುಸಂಖ್ಯಾತ ಜನತೆ ಮಾತ್ರ ನಿಜವಾದ ಬದಲಾವಣೆ ತರಬಲ್ಲುದು. ಪ್ರಜ್ಞಾವಂತ ವ್ಯಕ್ತಿಯ ಪಾತ್ರ ಜನತೆಯನ್ನು ಎಚ್ಚರಿಸುವುದು - ಎಂಬ ಪ್ರಜಾಸತ್ತಾತ್ಮಕ ಆಶಯಕ್ಕೆ ವಿರುದ್ಧ ವಾದ ವ್ಯಕ್ತಿ ಕೇಂದ್ರಿತ ಆಶಯ ಇದು.

1965 ರಲ್ಲಿ ಭಗತ್ ಸಿಂಗ್‌ನ ಇಬ್ಬರು ಸಂಗಾತಿಗಳು ಆತನ ಜತೆ ಹಿಂದೆ 1920-30 ರ ದಶಕದಲ್ಲಿ ಕ್ರಾಂತಿಕಾರಿ ಹೋರಾಟದಲ್ಲಿ ಕಂಡ ಭಾರತದ ಬಗೆಗಿನ ಕನಸು ಮತ್ತು ಇಂದಿನ ವಾಸ್ತವದ ಬಗ್ಗೆ ನಡೆಸುವ ಚರ್ಚೆ 'ಆಕಾಶಭೇರಿ'ಯ ಮೂಲವಸ್ತು. ಫ್ಲಾಶ್‌ಬ್ಯಾಕ್ ರೂಪದಲ್ಲಿ ಬರುವ ಭಗತ್ ಸಿಂಗ್ ಜೀವನದ ಘಟನೆಗಳು, ವಿಚಾರಗಳನ್ನು 'ಆಕಾಶಭೇರಿ' ಅನಾವರಣ ಮಾಡುತ್ತಾ ಹೋಗುತ್ತದೆ. ಭಗತ್ ಸಿಂಗ್ ಸಹ ಬದಲಾವಣೆ ಬಯಸಿ ಛಲದಿಂದ ಅದನ್ನು ಸಾಧಿಸಲು ಹೊರಟ ಪ್ರಜ್ಞಾವಂತ ವ್ಯಕ್ತಿ. 'ಆಕಾಶಭೇರಿ' ಬದಲಾವಣೆಯಲ್ಲಿ ಭಗತ್ ಸಿಂಗ್‌ನಂತಹ ಪ್ರಜ್ಞಾವಂತ ವ್ಯಕ್ತಿಯ ಪಾತ್ರದ ಬಗ್ಗೆ ಹೆಚ್ಚು ಸಂಕೀರ್ಣ, ನಿಜ ಜೀವನಕ್ಕೆ ಹತ್ತಿರವಿರುವ, ಪ್ರಜಾಸತ್ತಾತ್ಮಕ, ಜನಪರ ನಿಲುವು ತಾಳುತ್ತದೆ.

ಎರಡೂ ನಾಟಕಗಳೂ ಉತ್ತಮ ಪ್ರದರ್ಶನಗಳಾಗಿದ್ದವು. ಸಮುದಾಯ ಮತ್ತು ನೀನಾಸಂ ಈ ಎರಡು ತಂಡಗಳು ಕರ್ನಾಟಕದ ಸಾಂಸತಿಕ ಬದುಕಿನಲ್ಲಿ 80 ರ ದಶಕದಿಂದ ಪ್ರಮುಖ ಪಾತ್ರ ವಹಿಸುತ್ತಾ ಬಂದಿವೆ. ತಮ್ಮ ನಿರ್ದಿಷ್ಟ ಅನನ್ಯ ನಿಲುವು, ಕಣ್ಣೋಟಗಳಿಂದ ಗಮನ ಸೆಳೆದಿವೆ. ಈ ತಂಡಗಳು ಆರಿಸುವ ನಾಟಕಗಳು ಸಾಮಾನ್ಯವಾಗಿ ಅದನ್ನು ಪ್ರತಿಬಿಂಬಿಸುತ್ತದೆ. ಆದರೆ ಈ ಎರಡು ನಾಟಕಗಳಲ್ಲಿ ಅದು ತಿರುಗು ಮುರುಗಾಗಿದೆಯೇ ಎಂಬ ಸಂದೇಹ ಮೂಡುತ್ತದೆ.

ಆಹಾರದ ಹಕ್ಕು ನಮ್ಮ ಹಕ್ಕು





ಕವಿತೆ

ಜಲ... ಬ...

ಅಲ್ಲಿ
ಎದೆ ಕಲಕುವ ಕಣ್ಣ ಹನಿಗಳ
ಭಾಷ್ಪ ಬಿಂದುವಿಗೆ
ಭಾಷೆ ಬರೆವ ತಾಖತ್ತಿಲ್ಲದ
ಮೋಡದ ಮರೆಯ ಸೂರ್ಯ

ಅಲ್ಲಿ
ಒಡೆದ ಬದುಕಿನ
ಎಣಿಕೆಗೆಟುಕದ ಚೂರುಗಳ
ಪ್ರತಿ ತುಣುಕುಗಳಲಿ
ಕತ್ತಿಯಲುಗಿನ ಬಿಂಬಗಳು.
ನೆಲದ ಬಿರುಕುಗಳ ನಡುವೆ
ಸಿಕ್ಕಿ ನರಳುವ
ಕರುಳ ಬಳ್ಳಿಯ ಹೆಣಿಕೆ.
ನೆಲದ ನೋವಿಗೆ ನಲುಗಿ
ಮುಗಿಲ ಚಂದ್ರಾಮ
ಹರಿಸದೆ ಹಾಲ್ದಿಂಗಳ
ಕತ್ತಲ ಕೋಟೆಯಲ್ಲಿ ಬಿಕ್ಕುತ್ತಿದ್ದ.

ಅಲ್ಲಿ
ನೀರ ಮೈ ತುಂಬ
ಸಾವ ಕೈಗಳು
ಹನಿ ಹನಿಯೂ ಹರಿದಾಡಿ
ಹೊಳೆಯಲ್ಲೂ ಹುದುಗಿ
ಮಳೆಯಲ್ಲೂ ಅಡಗಿ
ಹಗಲು ರಾತ್ರಿಗಳ
ಮುರಿದಿಟ್ಟು ಮೂಲೆ'ಯಲಿ
ಬಿಗಿದಪ್ಪಿ ಯಮಪಾಶ
ಜಲದ ಬಲೆ ಬೀಸಿ.

ಅಲ್ಲಿ
ನದಿ ಹೊಳೆಯ ಕಾಲ್ಕೆಳಗೆ
ನರಳುತ್ತಿರುವ ಕನಸ ಕುಡಿಗಳು
ಹರಿದು ಹೋಯ್ತು
ಕೂಸು ಕಂದಮ್ಮಗಳ
ಹವಳದಂಥ ನಗುವು.

ಎಲ್ಲ ಎಲ್ಲವೂ
ಕೊಚ್ಚಿ ಕೊನರಿತು
ಕಟುಕ ಮಳೆಯು
ಅಲ್ಲಿ
ಕೊಲುವ ಭಾಷೆಗೆ
ಸೆಣೆಸಿ ನಕ್ಕಿತು
ಬದುಕು ಕಾವ್ಯವು.
ಮಂದ ಬೆಳಕಲಿ
ಮತ್ತೆ ಅರಳಿತು
ಛಲದ ಜೀವ ಜಾಲವು.

ನೀಲಾ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ ಫೈಲ್.